TEXT PROBLEM

TIGHT BINDING

UNIVERSAL LIBRARY

OU_200498

UNIVERSAL LIBRARY

# ನಿರ್ಮಲೆ

ಶ್ರೀರಾಮ

ಕರ್ಣಾಟಕ ಪುಸ್ತಕಾಲಯ
ಬೆಂಗಳೂರು ಸಿಟಿ
1918

## ಇದೇಗ್ರಂಥಕರ್ತರಿಂದ ರಚಿತವಾದ ಪುಸ್ತಕಗಳು.

1. ಗ್ಲಾಡ್ಸ್ಟನ್ ರವರ ಮಹಿಮೆ
2. ಕಲಿಯುಗ (ಒಂದು ಕಥೆ)
3. ಜನರಲ್ಲಿ ಕಾರ್ಯನಿರ್ವಾಹಕ ಶಕ್ತಿಯನ್ನು ಹುಟ್ಟಿಸುವುದು ಹೇಗೆ
4. ಏಬ್ರಹಾಂ ಗಾರ್ಫೀಲ್ಡು ಚರಿತೆ
5. ವಿಕ್ಟೋರಿಯಾ
6. ನನ್ನ ಆಚಾರ್ಯ (ಸ್ವಾಮಿ ವಿವೇಕಾನಂದರವರ ಉಪನ್ಯಾಸ)
7. ಭಾರತ ಕಥಾಸಾರ ಸಂಗ್ರಹ
8. ನಿರ್ಮಲೆ
9. ಮನೋರಮೆ
10. ವಾಸದಮನೆ (1ನೆಯ ಭಾಗ)
11. ದಯಾರಾಮ
12. ಏಬ್ರಹಾಂ ಲಿಂಕನ್

18 ನೆಯ ಶತಮಾನದಲ್ಲಿದ್ದ 'ಗೋಲ್ಡ್ ಸ್ಮಿತ್' ಎಂಬ ಇಂಗ್ಲೀಷು ಕವಿಯು ಬರೆದ 'She Stoops to-conquer' ಎಂಬ ನಾಟಕವನ್ನು ಅನುಸರಿಸಿ ಕನ್ನಡದಲ್ಲಿ ಈ ಪುಸ್ತಕವನ್ನು ಬರೆದಿರುತ್ತೇನೆ. 'ಮಧುರವಾಣಿ'ಯ ಸಂಪಾದಕರಾದ ಮ|| ರಾ|| ರಾ|| ಹನುಮಾನ್ ರವರು ಇದನ್ನು ಮೊದಲು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದುದಕ್ಕೆ ಅವರಿಗೆ ಕೃತಜ್ಞನಾಗಿರುವೆನು.

ಅಲ್ಲಲ್ಲಿ ತಿದ್ದಿ, ಈ ಪುಸ್ತಕವನ್ನು ಎರಡನೆಯ ಸಲ ಈಗ ಮುದ್ರಿಸಿರುತ್ತೇನೆ.

೭ನೆ ಆಗಸ್ಟು 1918.
ಬೆಂಗಳೂರು

ಶ್ರೀರಾಮು.

*All Rights Reserved.*

# ನಾಟಕ ಪಾತ್ರಗಳು.

| | | |
|---|---|---|
| ವಿಜಯಪಾಲ | — | ಒಬ್ಬ ಶ್ರೀಮಂತನು |
| ರಾಮವರ್ಮ | — | ವಿಜಯಪಾಲನ ಮಗನು |
| ಪ್ರಿಯಸೇನ | — | ರಾಮವರ್ಮನ ಮಿತ್ರನು |
| ದೇವದತ್ತ | — | ವಿಜಯಪಾಲನ ಮಿತ್ರನು |
| ದುರ್ಮತಿ | — | ಚಂಡಿಯ ಅಣ್ಣನಮಗನು |
| ಚಂಡಿ | — | ದೇವದತ್ತನ ಹೆಂಡತಿ |
| ನಿರ್ಮಲೆ | — | ದೇವದತ್ತನ ಮಗಳು |
| ಕಮಲಾವತಿ | — | ದೇವದತ್ತನ ತಂಗಿಯಮಗಳು |
| ಸೇವಕರು | | |

——:0:——

ಶ್ರೀರಾಮ

# ನಿರ್ಮಲೆ

## ಮೊದಲನೆಯ ಅಂಕ

### I

[ಹಳ್ಳಿಗಾಡಿನ ಪೂರ್ವಕಾಲದ ಮನೆಯಲ್ಲಿ ಒಂದು ಕೋಣೆ. ಚಂಡಿಯು ದೇವದತ್ತನೊಡನೆ ಪ್ರವೇಶಿಸುವಳು.]

ಚಂಡಿ:—ಪ್ರಿಯ ! ನಿಮ್ಮ ವಿಚಿತ್ರವನ್ನು ಏನೆಂದು ಹೇಳಲಿ ? ಎಲ್ಲರಿಗೂ ಒಂದು ದಾರಿಯಾದರೆ ನಿಮಗೇ ಬೇರೊಂದು. ಪದೇಪದೇ ದೊಡ್ಡ ಪಟ್ಟಣಕ್ಕೆ ಹೋಗಿ, ಅಲ್ಲಿನ ವಿಚಿತ್ರಗಳನ್ನು ನೋಡಿ ಬೇಸರವನ್ನು ಕಳೆದುಕೊಳ್ಳದೆ ಇರುವವರು ನಮ್ಮಂತೆ ಮತ್ತಾರಾದರೂ ಈ ಸುತ್ತಿನಲ್ಲಿ ಇರುವರೆ? ನೋಡಿರಿ! ವಿಚಿತ್ರವದನೆಯೂ ವಕ್ರಾಂಗಿಯೂ ಮಕ್ಕಳುಮರಿಗಳೊಡನೆ ಪ್ರತಿ ವರ್ಷವೂ ಒಂದು ತಿಂಗಳಾದರೂ ಪಟ್ಟಣದಲ್ಲಿದ್ದು ಬರುವರಲ್ಲವೆ?

ದೇವ:—ಅಹುದು. ಅವರು ಅಲ್ಲಿಂದ ಒಂದು ವರ್ಷಕ್ಕೆ ಸಾಕಾಗುವಷ್ಟು ದುರಹಂಕಾರ, ಆಡಂಬರಗಳನ್ನು ಸಂಪಾದಿಸಿಕೊಂಡು ಬರುತ್ತಾರೆ. ಪಟ್ಟಣವಾಸಿಗಳಾದ ಹೆಡ್ತರು ಅಲ್ಲೇ ಇರಬಾರದೆ? ನಮ್ಮ ಕಾಲದಲ್ಲಿ, ಪಟ್ಟಣವಾಸಿಗಳ ಹುಚ್ಚಾಟವೂ, ವಿಚಿತ್ರವಾದ ನಡೆನುಡಿಗಳೂ ಬಹಳ ನಿಧಾನವಾಗಿ ಹಳ್ಳಿಗಾಡಿಗೆ ಬರುತ್ತಿದ್ದುವು; ಈಗಲಾದರೊ, ಅವು ರೈಲಿಗಿಂತ ವೇಗವಾಗಿ ಎಲ್ಲೆಲ್ಲೂ ವ್ಯಾಪಿಸುತ್ತಲಿವೆ.

ಚಂಡಿ:—ಅಹುದು. ನಿಮ್ಮ ಕಾಲವು ಸರ್ವೋತ್ಕೃಷ್ಟವಾಗಿತ್ತು. ಅದರ ವರ್ಣನೆಯನ್ನು ಕೇಳಿಕೇಳಿ ನನಗೆ ಬೇಸರ ಹುಟ್ಟಿರುವುದು. ಸಾಕು, ಬಿಡಿ. ಇದೊಂದು ಹಳೇಮನೆ. ನಮ್ಮವಾಸವೊ, ಪುರಾತನ ಮಾರ್ಗ. ಈ ಮನೆಯನ್ನು ನೋಡಿದರೆ, ಸಂಸಾರಿಗಳ ಗೃಹದಂತೆ ಶೋಭಿಸುವುದೆ ? ಭೋಜನಶಾಲೆಯಂತೆ ಕಾಣುವುದು. ನಮ್ಮ ಮನೆಗಂತು ದೊಡ್ಡಮನುಷ್ಯರು ಬಂದುಹೋಗುವ ಸಂಭವವೇಇಲ್ಲ. ವಿಚಿತ್ರವದನೆ, ಆ ಕುಂಟಗಾಯಕ ನೊಬ್ಬ, ಇವರುಗಳಲ್ಲದೆ ಇನ್ನಾರುಬರುವರು ? ನೀವು ಮರೆಯದೆ ದಿನ ಕ್ಕೊಮ್ಮೆ ಹೇಳುತ್ತಿರುವ ವೀರವರ್ಮ ಮತ್ತು ಅವನ ಸೇನಾನಾಯಕರ ಕಥೆಯಲ್ಲದೆ ವಿನೋದಕ್ಕೆ ಮತ್ತಾವ ಅವಕಾಶವೂ ಇಲ್ಲ ಆ ಹಳೆಕಥೆ ಯನ್ನೇ ಕೇಳಬೇಕೆಂದರೆ ನನಗೆ ಸರ್ವಾಸಹ್ಯ.

ದೇವ:—ಅದರಲ್ಲಿ ನನಗೇನೊ ಬಹಳ ಅಕ್ಕರೆ. ಪುರಾತನವಸ್ತುಗಳ ಲ್ಲೆಲ್ಲಾ ನನಗೆ ಬಹಳ ಅಭಿಮಾನ. ಹಳೆಗೆಳೆಯರು, ಹಳೆ ಇತಿಹಾಸ, ಹಳೆ ಕಾಲ, ಹಳೆ ನಡೆನುಡಿ, ಹಳೆ ಪುಸ್ತಕ, ಹಳೆ ದ್ರಾಕ್ಷಾರಸಗಳನ್ನು ಕಂಡರೆ, ನನಗೆ ಪ್ರೇಮವು ಹೆಚ್ಚು. (ದಂಪತಿಯ ಕಯ್ಹಿಡಿದು) ಪ್ರಿಯೆ ! ನಿಜವನ್ನು ಹೇಳು ! ಹಳೆ ಹೆಂಡತಿಯಲ್ಲಿಯೂ ನನಗೆ ಸಂಪೂರ್ಣ ಪ್ರೇಮವಿರುವುದಿಲ್ಲವೆ?

ಚಂಡಿ:—(ಕಯ್ಯನ್ನು ಬಿಡಿಸಿಕೊಳ್ಳುತ್ತ) ಅಯ್ಯೋ, ದೇವರೆ ! ಇದೇ ನಿಮ್ಮ ಹಳೆ ಹರಟೆ. ನನ್ನನ್ನು ಹೀಗೇಕೆ ಪೀಡಿಸುವಿರಿ ? ನಾನೇನು ನೀವು ಹೇಳುವಷ್ಟು ಮುದುಕಿಯಲ್ಲ. ಇಪ್ಪತ್ತಕ್ಕೆ ಇಪ್ಪತ್ತನ್ನು ಸೇರಿಸಿದರೆ ಒಟ್ಟು ಎಷ್ಟಾಯಿತು ?

ದೇವ:—ನಿಧಾನಿಸು. ಯೋಚಿಸುವ. ಇಪ್ಪತ್ತಕ್ಕೆ ಇಪ್ಪತ್ತನ್ನು ಸೇರಿ ಸಿದರೆ -ಸರಿ- ಸರಿಯಾಗಿ ಐವತ್ತೇಳಾಯಿತು.

ಚಂಡಿ:— ಅದು ಶುದ್ಧ ಅಪದ್ಧ. ನಮ್ಮಣ್ಣನಿಗೆ—ಅಯ್ಯೊ ಅಣ್ಣಾ ! ಅಣ್ಣ, ಅತ್ತಿಗೆ ಇಬ್ಬರನ್ನೂ ಕಳೆದುಕೊಂಡೆನಲ್ಲಾ ? ಅವರ ಮಗ ನಾದ ದುರ್ಮತಿಯು ಹುಟ್ಟಿದಾಗ ನನಗೆ ಇಪ್ಪತ್ತುವರ್ಷ. ನಮ್ಮ ದುರ್ಮ

ತಿಗೆ ಇನ್ನೂ ವಿವೇಚನಾಶಕ್ತಿಯೇ ಬಂದಿಲ್ಲ. ನನಗೆ ಐವತ್ತೇಳು ವರ್ಷಗಳು ಹೇಗಾದುವು ? ಸುಳ್ಳು, ಸುಳ್ಳು, ! ನಿಮ್ಮ ಮಾತು ಶುದ್ಧ ಸುಳ್ಳು.

ದೇವ:—ದುರ್ಮತಿಗೆ ವಿವೇಚನಾಶಕ್ತಿಯು ಬರುವುದೇ ಇಲ್ಲವೆಂದು ನನಗೆ ಪೂರ್ಣ ಭರವಸೆಯುಂಟು. ಅವನನ್ನು ಬಹಳ ಚೆನ್ನಾಗಿ ಬಳೆಸಿರುವೆ.

ಚಂಡಿ:—ಪ್ರಮಾದವೇನು ? ಪಾಪ, ಹಾಗು ಬಳೆಯಲಿ ! ನಮ್ಮಣ್ಣನ ಆಸ್ತಿಯು ಬೇಕಾದಷ್ಟಿರುವುದು. ದುರ್ಮತಿಯು ವಿದ್ಯೆಯನ್ನು ಕಲಿತು ತನ್ನ ಅನ್ನವನ್ನು ತಾನು ಸಂಪಾದಿಸಿಕೊಳ್ಳಬೇಕಾಗಿಲ್ಲ. ವರುಷ ಒಂದಕ್ಕೆ ಒಂದು ಸಾವಿರದ ಐನೂರು ರೂಪಾಯಿಗಳನ್ನು ವ್ಯಯಮಾಡಲು, ವಿಶೇಷ ವಿವೇಚನಾಶಕ್ತಿಯಾಗಲೀ ಜಾಣ್ಮೆಯಾಗಲಿ ಬೇಕಾಗಿಲ್ಲವಲ್ಲ !

ದೇವ:—ವಿದ್ಯೆಯೆ ? ಅವನ ಎದೆಯನ್ನು ಎರಡಾಗಿ ಸೀಳಿ ಪಂಚನ್ನು ಹಿಡಿದುಕೊಂಡು ಹುಡುಕಿದರೂ, ಎರಡಕ್ಷರವು ಸಿಲುಕುವುದಿಲ್ಲ. ಕುಚೋದ್ಯ, ತುಂಟಾಟಗಳೇ ಅವನ ವಿದ್ಯೆ, ಅವನ ಆಸ್ತಿ.

ಚಂಡಿ:—ಅದನ್ನೆಲ್ಲ ವಿನೋದಕ್ಕಾಗಿ ಅವನು ಮಾಡುವನು. ಪ್ರಿಯ ! ಆ ತಬ್ಬಲಿಗೆ ಆಡಲಿಕ್ಕೆ ಸ್ವಲ್ಪ ಅವಕಾಶವನ್ನು ಕೊಡಬೇಡವೆ ? ವಿನೋದಕ್ಕಾಗಿ ಅವನು ಚೇಷ್ಟೆಗಳನ್ನು ಮಾಡುವನು.

ದೇವ:—ಅವೇ ಚೇಷ್ಟೆಗಳು ? ಅದಕ್ಕೆ ಸ್ವಲ್ಪವೂ ಅವಕಾಶವನ್ನು ಕೊಡಕೂಡದು. ಅವನನ್ನು ಕೊಳದಲ್ಲಿ ಮುಳುಗಿಸಿಬಿಡಬೇಕು ಪರಿಚಾರಕರ ಪಾದರಕ್ಷೆಗಳನ್ನು ಸುಡುವುದು, ಸೇವಕಕನ್ನೆಯರನ್ನು ಹೆದರಿಸುವುದು, ಬೆಕ್ಕಿನಮರಿಗಳನ್ನು ಪೀಡಿಸುವುದು, ಇವುಗಳೆಲ್ಲ ವಿನೋದವೊ ? ನಿನ್ನ ಆ ಮುದ್ದು ದುರ್ಮತಿಗೆ ಬರುವುದೆಲ್ಲ ಇಂತಹ ವಿನೋದಗಳಲ್ಲವೆ ? ನಿನ್ನ ಆ ಅರಗಿಣಿಯು ನಿನ್ನೆಯದಿನ ನಾನು ಕುರ್ಚಿಯಮೇಲೆ ಮಾತನಾಡುತ್ತ ಕುಳಿತಿದ್ದಾಗ, ನನ್ನ ಕೂದಲನ್ನು ಕುರ್ಚಿಗೆ ಬಲವಾಗಿ ಬಿಗಿದುಬಿಟ್ಟಿದ್ದನು. ಚಂಚಲೆಯು ಇಲ್ಲಿಗೆ ಬಂದಾಗ ನಾನು ಮೇಲಕ್ಕೆದ್ದರೆ, ಕುರ್ಚಿಯೂ ನನ್ನ ಸಂಗಡ ಎದ್ದಿತು. ವಿನೋದವಂತೆ ವಿನೋದ !

ಚಂಡಿ:—ಅದು ನನ್ನ ತಪ್ಪೆ ? ಹುಟ್ಟಿದಂದಿನಿಂದಲೂ ಅವನು ರೋಗದಿಂದ ನರಳಿನರಳಿ ಬಡವಾಗಿರುವನು. ಪಾಠಶಾಲೆಯೆಂದರೆ ಅವನಿಗೆ ಪ್ರಾಣವೇ ಹೋಗುವುದು. ಅವನು ಸ್ವಲ್ಪ ಬಲಿಷ್ಠನಾಗಲಿ. ಒಂದೆರಡುವರ್ಷಗಳಕಾಲ ಓದುವುದರೊಳಗೇ ಅವನು ಜಾಣನಾಗುವುದರಲ್ಲಿ ಸಂಶಯವಿಲ್ಲ.

ದೇವ:—ಓದೆ? ಬೆಕ್ಕು! ಪಿಟೀಲು!! ಇದೇ ಅವನಿಗೆ ಓದು. ಸರಿ, ಸರಿ. ತಬೇಲಿ, ಸುರಾಗೃಹಗಳು ತಾನೆ ಅವನು ಪಾಠವನ್ನು ಕಲಿಯಲು ಹೋಗುವ ಶಾಲೆ.

ಚಂಡಿ:—ಅಯ್ಯೋ! ಪಾಪ!! ಆ ಬಡ ಪಾಪಿಯನ್ನು ನಾವೇಕೆ ಬೆದರಿಸಿ ಪೀಡಿಸಬೇಕು? ಇನ್ನೆಷ್ಟು ವರುಷಗಳುತಾನೆ ಅವನು ಜೀವಿಸುವನು? ಮುಖವನ್ನು ನೋಡಿದವರಿಗಿಲ್ಲ ಅವನಿಗೆ ಕ್ಷಯರೋಗವೆಂದು ಬೋಧೆಯಾಗುವುದಿಲ್ಲವೆ?

ದೇವ:— ದಿನೇದಿನೇ ಸ್ಥೂಲಕಾಯನಾಗುವುದೂ ಒಂದು ವಿಧವಾದ ಚಿನ್ಹೆಯಾದರೆ.................

ಚಂಡಿ:—ಅವನು ಆಗಾಗ ಕೆಮ್ಮುವನು.

ದೇವ:—ಅಹುದು. ದ್ರಾಕ್ಷಾರಸವು ನೆತ್ತಿಗೆಹತ್ತಿದಾಗಲೆಲ್ಲಾ.....

ಚಂಡಿ:—ಅವನ ಶ್ವಾಸಕೋಶಗಳು ಕೆಟ್ಟುಹೋಗಿರಬಹುದೆಂದು ನನಗೆ ಬಹು ಭಯವಾಗಿದೆ.

ದೇವ:—ಅಹುದು. ನಿಜವಾಗಿಯೂ ನನಗೂ ಅದೇ ಭಯ. ಏಕೆಂದರೆ, ಅವನು ತುತ್ತೂರಿಯ ಧ್ವನಿಯಂತೆ ಆರ್ಭಟಿಸುತ್ತಾನೆ. (ದುರ್ಮತಿಯು ಹಿಂಭಾಗದಲ್ಲಿ ಗಲಭೆಮಾಡುತ್ತಿರುವನು.) ಅದೊ, ನೋಡು. ಅಯ್ಯೋ ಪಾಪ! ಅದು ಕ್ಷಯರೋಗದ ಚಿನ್ಹೆಯಲ್ಲವೆ ?

[ದುರ್ಮತಿಯು ಬರುವನು]

ಚಂಡಿ:—ಮಗು ! ಎಲ್ಲಿಗೆ ಹೋಗುವೆ ? ನನ್ನ ಕಂದ, ಬಾ. ನಿಮ್ಮ ಅತ್ತೆಮಾವಂದಿರ ಜತೆಯಲ್ಲಿ ಅರೆಗಳಿಗೆಯಾದರೂ ಇರಲೊಲ್ಲೆಯಾ?

ದುರ್ಮ:—ಅತ್ತೆ, ಈಗ ವಿರಾಮವಿಲ್ಲ. ಬಹಳ ಅವಸರದಲ್ಲಿ ರುವೆನು.

ಚಂಡಿ:—ನಿನ್ನನ್ನು ನೋಡಿದರೆ, ಭಯವಾಗುವುದು. ಈ ರಾತ್ರಿ ಹೊರಗೆ ಎಷ್ಟು ಮಂಜು ಸುರಿಯುತ್ತಿರುವುದು ? ನೋಡು. ಛಳಿಯಲ್ಲಿ ಹೊರಗೆ ಹೋಗಬೇಡ.

ದುರ್ಮ:— ನಾನು ಖಂಡಿತವಾಗಿಯೂ ಹೋಗಲೇಬೇಕು. ಆನಂದ ಮಂದಿರದಲ್ಲಿ ಎಲ್ಲರೂ ನನ್ನ ಆಗಮನವನ್ನು ನಿರೀಕ್ಷಿಸಿಕೊಂಡಿರುವರು. ಅಲ್ಲಿ ಈದಿನ ಏನೋ ಒಂದುತಮಾಷೆಯು ನಡೆಯುವುದಂತೆ!

ದೇವ:— ಸರಿ! ಸರಿ!! ಸುರಾಗೃಹ ನನಗೆ ಗೊತ್ತು. ಕೇವಲ ನೀಚರ, ಕುತ್ಸಿತರ ಸ್ನೇಹ.

ದುರ್ಮ:—ನನ್ನ ಮಿತ್ರರು ನೀಚರಲ್ಲ. ಅಬ್ಕಾರಿ ಇಲಾಖೆಗೆ ಸೇರಿದ ಮತಿಹೀನ, ಅಶ್ವವೈದ್ಯನಿಪುಣನಾದ ದುಷ್ಟಬುದ್ಧಿ, ಗಾಯನ ನಿಪುಣನಾದ ಅವಿವೇಕಶಿಖಾಮಣಿ, ಕುಂಬಾರರ ಗುಂಪಿಗೆ ಒಡೆಯನಾದ ಕುಟಿಲ ಬುದ್ಧಿ ಮೊದಲಾದ ನನ್ನ ಆಪ್ತರು ಕುತ್ಸಿತರೆ ?

ಚಂಡಿ:—ಇನ್ನೊಂದು ದಿನ ಅವರಿಗೆ ಆಶಾಭಂಗವಾದರೇನು?

ದುರ್ಮ:—ಅವರಿಗೆ ಆಶಾಭಂಗವಾದರೆ ಚಿಂತೆಯಿಲ್ಲ. ಆದರೆ ನನಗೆ ಆಶಾಭಂಗವಾಗುವುದನ್ನು ನಾನು ಸಹಿಸಲಾರೆನು.

ಚಂಡಿ:—(ಅವನ ಕಯ್ಯನ್ನು ಹಿಡಿದು) ಈದಿನ ಎಲ್ಲಿಗೂ ನೀನು ಹೋಗಕೂಡದು.

ದುರ್ಮ:—ನಾನು ಹೋಗಲೇಬೇಕು. ತಿಳಿಯಿತೆ ?

ಚಂಡಿ:—ನೀನು ಖಂಡಿತವಾಗಿಯೂ ಹೋಗಕೂಡದು.

ದುರ್ಮ—ಸರಿ. ಆಗಲಿ ! ಯಾರು ಬಲಿಷ್ಠರೋ ಪರೀಕ್ಷಿಸುವ. (ಅವಳನ್ನು ಎಳೆದುಕೊಂಡು ಓಡುವನು)

ದೇವ:—(ಸ್ವಗತಂ) ಅದೋ ! ಅವರಿಬ್ಬರೂ ಒಬ್ಬರಿಂದೊಬ್ಬರು

ನಾಶವಾಗಿ ಹೋಗುವರು. ಬುದ್ಧಿ, ವಿವೇಚನಾಶಕ್ತಿಗಳು ಹಾಳಾಗುತ್ತಿರುವುದು ಕಾಲಮಹಿಮೆಯಿಂದಲೊ? ಅದೇ, ನನ್ನ ಕುವರಿ ನಿರ್ಮಲೆಯನ್ನೂ ಕೆಡಿಸುತ್ತಿದೆಯೊ? ಅವಳೂ ಎಲ್ಲರಂತೆಯೇ ಆಗುತ್ತಿರುವಳು. ಅವಳು ಪಟ್ಟಣದಲ್ಲಿದ್ದುದು ಒಂದೆರಡು ವರುಷಗಳೇ! ಅಷ್ಟಕ್ಕೇ ಎಷ್ಟು ಆಡಂಬರ, ಎಷ್ಟು ಚಾತುರ್ಯ, ಉಡುಗೆತೊಡುಗೆಗಳಲ್ಲಿ ಎಷ್ಟು ವಿಚಿತ್ರಗಳನ್ನು ಕಲಿತಿರುವಳು? ಅಬ್ಬಾ!

[ನಿರ್ಮಲೆಯು ಬರುವಳು]

ದೇವ:—(ಪ್ರಕಾಶಂ) ನಿರ್ಮಲೆ, ಇದೇನು ವೇಷವನ್ನು ಹಾಕಿಕೊಂಡಿರುವೆ? ಎಷ್ಟೊಂದು ರೇಷ್ಮೆಯನ್ನು ನಿನ್ನ ಉಡುಪಿಗೆ ಸೇರಿಸಿರುವೆ? ಡಾಂಭಿಕರು ದಂಡವಾಗಿ ತಮ್ಮ ಉಡುಪಿಗೆ ಸೇರಿಸಿಕೊಳ್ಳುವ ಹೆಚ್ಚು ಬಟ್ಟೆಯಲ್ಲಿ ಬಡವರಿಗೂ ದೀನರಿಗೂ ಸಾಕಾದಷ್ಟು ಉಡುಗೆಯನ್ನು ಒದಗಿಸಬಹುದಲ್ಲವೆ? ಎಷ್ಟು ಹೇಳಿದರೇನು? ಈ ಕಾಲದ ಹುಚ್ಚರಿಗೆ ತಿಳಿವಳಿಕೆಯು ಎಂದಿಗೆ ಬರುವುದೊ?

ನಿರ್ಮಲೆ—ಪಿತನೆ! ಪ್ರಾತಃಕಾಲದಲ್ಲಿ ಅತಿಥಿ ಅಭ್ಯಾಗತರೊಡನೆ ವಿನೋದವಾಗಿರಲೂ ಮನವೊಪ್ಪುವಂತೆ ಉಡುಗೆತೊಡುಗೆಗಳನ್ನು ಧರಿಸಲೂ ನೀನೇ ಅನುಮತಿಯನ್ನು ಕೊಟ್ಟಿಲ್ಲವೆ? ಸಂಧ್ಯಾಕಾಲದಲ್ಲಿ ನಿನ್ನ ಇಷ್ಟಾನುಸಾರವಾಗಿ ಆಡಂಬರವಿಲ್ಲದೆ ಸಾಮಾನ್ಯವಾದ ಉಡುಪನ್ನು ನಾನು ಧರಿಸುವೆನಲ್ಲವೆ?

ದೇವ:—ಮರೆತೆನು ನಿಜ ನಿಜ. ಈ ಒಪ್ಪಂದವು ಚೆನ್ನಾಗಿ ನೆನಪಿದೆ. ಈ ದಿನ ಸಾಯಂಕಾಲದಲ್ಲೇ ನಿನ್ನ ವಿಧೇಯತೆಯನ್ನು ಪರೀಕ್ಷಿಸಲು ಅವಕಾಶವು ದೊರೆವುದೆಂದು ತೋರುತ್ತದೆ.

ನಿರ್ಮಲೆ:—ಪಿತನೆ! ನಿನ್ನ ಅಭಿಪ್ರಾಯವು ನನಗೆ ನಿಜವಾಗಿಯೂ ತಿಳಿಯಲಿಲ್ಲ.

ದೇವ:—ನಿನ್ನೊಡನೆ ಮರೆಮಾಚಲೇಕೆ? ಯಾರಿಗೆ ನಿನ್ನನ್ನು ಕೊಟ್ಟು ವಿವಾಹಮಾಡಬೇಕೆಂದಿರುವೆನೊ, ಆತನು ಈ ಸಾಯಂಕಾಲ ಇಲ್ಲಿಗೆ ಬರು

ವನು. ಅವನ ತಂದೆಯು ತನ್ನ ಮಗನು ಊರನ್ನು ಬಿಟ್ಟಿರುವುದಾಗಿಯೂ, ತಾನೂ ಜಾಗ್ರತೆಯಾಗಿಯೇ ಹೊರಡುವುದಾಗಿಯೂ ಪತ್ರವನ್ನು ಬರೆದಿರುವನು.

ನಿರ್ಮಲೆ:—ಹಾಗೇನು ? ನನಗೆ ಈ ಸಂಗತಿಯು ಇನ್ನೂ ಮೊದಲೇ ತಿಳಿದಿದ್ದರೆ ಚೆನ್ನಾಗಿತ್ತು. ದೇವರೆ ! ನನ್ನ ನಡೆನುಡಿಗಳು ಯಾವ ರೀತಿಯಲ್ಲಿರಬೇಕು ? ಅವನಲ್ಲಿ ನನಗೆ ಅಕ್ಕರೆಯೇ ಹುಟ್ಟಲಾರದು. ಇದೇನು ವ್ಯಾಪಾರವೆ? ಬರುವುದು, ಮಾತನಾಡುವುದು, ಮದುವೆಯ ವಿಚಾರವನ್ನು ಗೊತ್ತುಮಾಡುವುದು ? ಸರಿ! ಸರಿ!! ಸ್ನೇಹಮಾಡಿಕೊಳ್ಳಲಾಗಲಿ, ಗುಣಾವಗುಣ ಮಾನಮರ್ಯಾದೆಗಳನ್ನು ತಿಳಿಯಲಾಗಲೀ, ಅವಕಾಶವೇ ಇರುವಂತಿಲ್ಲವಲ್ಲ ?

ದೇವ:—ಮಗು! ನಿನ್ನ ಇಷ್ಟಕ್ಕೆ ವಿರೋಧವಾಗಿ ನಡೆವುದು ನನಗೂ ಹಿತವಿಲ್ಲ. ನಾನು ಪದೇಪದೇ ವಿಜಯಪಾಲನೆಂಬ ನನ್ನ ಮುಖ್ಯಮಿತ್ರನ ವಿಚಾರವನ್ನು ಮಾತನಾಡುತ್ತಿರಲಿಲ್ಲವೆ ? ಅವನ ಮಗನಾದ ರಾಮವರ್ಮನಿಗೇ ನಿನ್ನನ್ನು ಕೊಟ್ಟು ಮದುವೆ ಮಾಡಬೇಕೆಂದಿರುವೆನು. ರಾಮವರ್ಮನು ವಿದ್ಯಾವಂತನು. ಮುಂದೆ ರಾಜ್ಯಾಧಿಕಾರವನ್ನು ನಾಡುವನು. ಅನೇಕರು ಅವನ ಜಾಣ್ಮೆಯನ್ನು ವಿಶೇಷವಾಗಿ ಕೊಂಡಾಡುತ್ತಿರುವರು ಅವನನ್ನು ನಾನೂ ಚನ್ನಾಗಿ ಬಲ್ಲೆನು.

ನಿರ್ಮಲೆ:—ಆಹಾ!

ದೇವ:—ಅವನು ಬಹಳ ಉದಾರಿ.

ನಿರ್ಮಲೆ:—ಹಾಗಾದರೆ, ಅವನಲ್ಲಿ ನನಗೆ ಪ್ರೇಮವು ಹುಟ್ಟೀತು.

ದೇವ:—ಯೌವನಸ್ಥ, ಚತುರ, ಲಕ್ಷಣವಂತ.

ನಿರ್ಮಲೆ:—ಅವನಲ್ಲಿ ನನಗೆ ಅಕ್ಕರೆಯು ಹುಟ್ಟುವುದೇ ನಿಜ.

ದೇವ:—ಬಹಳ ಸ್ಫುರದ್ರೂಪಿಯೂ ಅಹುದು.

ನಿರ್ಮಲೆ:—ಪ್ರಿಯಪಿತನೇ! ಇನ್ನೇನನ್ನೂ ಹೇಳಬೇಡ. ಇನ್ನು ಅವನು ನನ್ನವನೇ ! ಅವನನ್ನು ವರಿಸಲೇಬೇಕು.

**ದೇವ:**—ಇವೆಲ್ಲಕ್ಕಿಂತಲೂ ಶ್ರೇಷ್ಠವಾದ ಮತ್ತೊಂದು ಗುಣವು ಅವನಲ್ಲಿದೆ. ಭೂಮಂಡಲದಲ್ಲಿ ಮತ್ತಾವ ಯುವಕನಿಗೂ ಅವನಷ್ಟು ಮುಖೇಡಿತನವಾಗಲೀ, ಗುಂಪಿನಲ್ಲಿ ಬಳಿಕೆಯಿಲ್ಲದಿರುವಿಕೆಯಾಗಲೀ ಇರುವುದು ಸಾಧ್ಯವಿಲ್ಲ.

ನಿರ್ಮಲೆ:—ಛೀ! ಇದರಿಂದ ನಾನು ಮೃತಪ್ರಾಯಳೇ ಆದೆನು. ಅವನಲ್ಲಿ ಎಷ್ಟು ಸದ್ಗುಣಗಳಿದ್ದರೂ ವ್ಯರ್ಥವೆ! ಹೆಚ್ಚು ಸಲುಗೆಗೆ ನಾಚುವ ಪ್ರಣಯಿಯು ಮುಂದೆ ಸಂಶಯಪ್ರಕೃತಿಯ ಪತಿಯಾಗುವನೆನ್ನುವರು.

ದೇವ—ಹಾಗಲ್ಲ. ವಿಶೇಷವಾಗಿ ಸದ್ಗುಣಶೀಲರೇ ವಿನಯಸಂಪನ್ನರಾಗಿರುವರಲ್ಲದೆ, ಇತರರಲ್ಲಿ ವಿನಯವು ಇರುವುದೇ ಇಲ್ಲ. ಅವನಲ್ಲಿ ಇರುವ ಅಸಾಮಾನ್ಯವಿನಯವನ್ನು ನೋಡಿಯೇ ಪ್ರಥಮದಲ್ಲಿ ನನಗೆ ಪೂರ್ಣಾನುರಾಗವು ಹುಟ್ಟಿತು.

ನಿರ್ಮ:—ನನ್ನ ಪ್ರೀತಿಯನ್ನು ಸಂಪಾದಿಸಲು ಅವನಲ್ಲಿ ಇನ್ನೂ ವಿಶೇಷ ಗುಣಗಳಿದ್ದೇ ತೀರಬೇಕು. ನೀನು ವರ್ಣಿಸುವಂತೆ ಅವನು ಪ್ರಾಯಸ್ಥನೂ ಸುಂದರಾಕಾರನೂ ಕೋಮಲ ಹೃದಯನೂ ಇನ್ನೂ ಏನೇನೋ ಆಗಿದ್ದರೆ, ಅವನೇಕೆ ನನ್ನ ಪತಿಯಾಗಬಾರದು? 'ಅವನನ್ನು ವರಿಸಲು ಅಪೇಕ್ಷೆಯಾಗುವುದೇ' ಎಂದು ಆಲೋಚಿಸುತ್ತಿರುವೆನು.

ದೇವ:—ಸರಿ. ಆದರೆ, ಇನ್ನೊಂದು ಅಡ್ಡಿಯಿದೆ. ಅವನೇ ನಿನ್ನನ್ನು ಒಪ್ಪದಿರುವ ಸಂಭವವೂ ಬಲವಾಗಿದೆ.

ನಿರ್ಮ:—ತಂದೆಯೆ, ಹೀಗೇಕೆ ನನ್ನನ್ನು ಪೀಡಿಸುವೆ? ಒಂದುವೇಳೆ, ಅವನು ನನ್ನನ್ನು ವರಿಸಲಿಷ್ಟಪಡದಿದ್ದರೆ, ನನ್ನ ಮೇಲೆ ಅವನಿಗುಂಟಾಗುವ ಅಸಡ್ಡೆಗಾಗಿ, ನನ್ನ ಹೃದಯವನ್ನು ಒಡೆದುಕೊಳ್ಳುವುದಕ್ಕೆ ಬದಲು, ನನ್ನನ್ನು ಬರಿದೇ ಹೊಗಳುತ್ತಿರುವ ಆ ಕನ್ನಡಿಯನ್ನು ಒಡೆದು ಪುಡಿ ಪುಡಿಮಾಡುವೆನು. ಅನಂತರ ನನ್ನ ಉಡುಪಿನರೀತಿ, ನಡೆನುಡಿಗಳನ್ನು ಪರಿವರ್ತಿಸಿಕೊಂಡು ಸುಲಭವಾಗಿ ಮೆಚ್ಚುವ ವರನನ್ನು ಹುಡುಕುವೆನು.

ದೇವ:—ಬಹು ಧೈರ್ಯವಾಗಿ ನಿಶ್ಚೈಸಿರುವಿಯಲ್ಲವೆ ? ಈಗಲೇ ಅವನನ್ನು ಎದುರುಗೊಳ್ಳಲು ಸೇವಕರನ್ನು ಸಿದ್ಧಪಡಿಸಬೇಕು. ನಮ್ಮಮನೆಗೆ ಅತಿಥಿಗಳು ಬರುವುದೇ ಇಲ್ಲವಾದುದರಿಂದ, ನೂತನ ಸೈನಿಕರನ್ನು ಪ್ರಥಮ ಸಮಾರಂಭಕ್ಕೆ ತರಬೇತು ಮಾಡುವಂತೆ, ನಾನು ಸೇವಕರನ್ನು ತಯಾರು ಮಾಡಬೇಕಾಗಿದೆ. (ಹೊರಡುವನು.)

ನಿರ್ಮಲೆ—(ಸ್ವಗತಂ) ನನ್ನ ತಂದೆಯು ಹೇಳಿದ ಎಲ್ಲಾ ವೃತ್ತಾಂತಗಳಿಂದ ನನಗೇನೋ ಒಂದು ಬಗೆಯ ವಿಚಿತ್ರವಾದ ಚಿತ್ತವೃತ್ತಿಯುಂಟಾಗಿರುವುದು. 'ಪ್ರಾಯಸ್ಥ, ಸುಂದರ,' ಎಂದು ಕಡೆಯಲ್ಲಿ ಹೇಳಿದ ಗುಣಗಳನ್ನು ಮೊದಲು ನಾನು ಆರೋಪಿಸುವೆನು. ವಿವೇಕ, ಸಾಧುತ್ವಗಳು, ಸದ್ಗುಣಗಳೇ ! ಅವು ನನಗೂ ಒಪ್ಪಿತವೇ ಅಹುದು. ಆದರೆ, ಗುಂಪಿಗೆ ಸೇರದಿರುವುದು, ನಾಚಿಕೆ, ಇವೇ ಅವನಲ್ಲಿರುವ ದುರ್ಗುಣಗಳು. ತನ್ನ ಹೆಂಡತಿಯನ್ನು ನೋಡಿ ನೋಡಿ ಹಿಗ್ಗುವ ಗುಣವನ್ನು ಕಲಿಸಿಬಿಟ್ಟರೆ, ಅವನ ಗಾಬರಿ ಸ್ವಭಾವವು ತಾನಾಗಿಯೇ ಹೋಗುವುದಲ್ಲವೆ ? ಅಹುದು ! ಅಹುದು! ನನ್ನ ಕಯ್ಗೆ ಸಿಕ್ಕಿ...(ಪ್ರಕಾಶಂ) ಅಯ್ಯೋ ! "ಕೂಸುಹುಟ್ಟುವುದಕ್ಕೆ ಮುಂಚೆ ಕುಲಾಬಿಯನ್ನು ಹೊಲಿಸಿದಂತೆ'' ಇನ್ನೂ ಪತಿಯೇ ದೊರಕಿಲ್ಲ. ಆಗಲೇ ಪತಿಯನ್ನು ಈರೀತಿ, ಆರೀತಿ, ಮಾಡಬೇಕೆಂದು ಆಲೋಚಿಸುತ್ತಿರುವೆನಲ್ಲಾ?

[ಕಮಲಾವತಿಯು ಬರುವಳು]

ನಿರ್ಮ:—ಕಮಲಾ ! ನೀನು ಬಂದುದು ಬಹಳ ಆನಂದವಾಯಿತು. ಈದಿನ ನಾನು ಹೇಗಿರುವೆನು, ಹೇಳು? ನನ್ನನ್ನು ನೋಡಿದರೆ, ಏನಾದರೂ ವಿಶೇಷವು ಕಾಣುವುದೆ ? ಇಂದು ನಾನು ಬಹಳ ಚೆನ್ನಾಗಿ ಕಾಣುವೆನಲ್ಲವೆ? ನನ್ನ ಮುಖವು ಹೇಗಿದೆ ?

ಕಮ:—ನನಗೂ ಬಹಳ ಆನಂದವೇ ! ಎಲ್ಲಿ ? ನೋಡುವ ! ಇದೇನು ನಿನ್ನ ಮುಖಕಾಂತಿಯು ಹೀಗೆ ಪರಿವರ್ತನವನ್ನು ಹೊಂದಿದೆ? ಯಾರು ನಿನ್ನನ್ನು ಪೀಡಿಸುತ್ತಿರುವರು ? ದುರ್ಮತಿಯೊ ? ಬೆಕ್ಕೊ ? ಯಾರು? ಅಥವಾ ನೀನು

ಓದುತ್ತಿರುವ ಪುಸ್ತಕವೇ ಅಷ್ಟು ರಸಭರಿತವಾಗಿರುವುದೊ ?

ನಿರ್ಮ:—ಅದೊಂದೂ ಅಲ್ಲ. ನನಗೆ ಭಯವನ್ನು ಹುಟ್ಟಿಸಿರುವರು. ಅದು ನಿವಾರಣೆಯಾದೀತೊ, ಇಲ್ಲವೊ ? ನನ್ನ ಪ್ರಣಯಿಯು ಇಂದು ಇಲ್ಲಿಗೆ ಬರುವನಂತೆ. ನನಗೇಕೋ ಹೆದರಿಕೆಯಾಗುವುದು.

ಕಮ:—ಅವನ ಹೆಸರು ?

ನಿರ್ಮ:—ಏನೋ; ವಿಜಯಪಾಲರ ಮಗನಂತೆ.

ಕಮ:—ರಾಮವರ್ಮನೆ ?

ನಿರ್ಮ:—ಹೂ. ಹೂ. ಹೂ.

ಕಮ:—ರಾಮವರ್ಮನೆ ? ಸರಿ, ಸರಿ. ನನ್ನ ಪ್ರಿಯನೊಡ ಪ್ರಿಯಸೇ ನನ ಪ್ರಿಯಸಖನು. ಗೊತ್ತಾಯಿತು. ಅವರಿಬ್ಬರೂ, ಎಂದೂ, ಒಬ್ಬರನ್ನೊಬ್ಬರು ಅಗಲಿರರು. ನೀನೂ ಪ್ರಾಯಶಃ ಅವನನ್ನು ನೋಡಿರಬಹುದು.

ನಿರ್ಮ:—ಎಂದೂ ಇಲ್ಲ.

ಕಮ:—ಅವನೊಬ್ಬ ವಿಚಿತ್ರಪುರುಷನು. ಗೌರವಸ್ಥರೂ ಪತಿವ್ರತೆಯರೂ ಆದ ಸ್ತ್ರೀಸಮೂಹದಲ್ಲಿ, ರಾಮವರ್ಮನಂತಹ ವಿನಯಸಂಪನ್ನರು ಜಗತ್ತಿನಲ್ಲೇ ಅನ್ಯರಿಲ್ಲ. ಆದರೆ, ಇನ್ನೊಂದುಜಾತಿಯ ಸ್ತ್ರೀಸಮೂಹದಲ್ಲಿ ಅವನ ನಡತೆಯೇ ಬೇರೊಂದು ವಿಧವೆಂದು, ಅವನ ಮಿತ್ರರು ಹೇಳುವರು.

ನಿರ್ಮ:—ನಿಜವಾಗಿಯೂ ವಿಲಕ್ಷಣ ಸ್ವಭಾವದವನೇ ಅಹುದು ಅಂತಹನೊಡನೆ ಸಂಸಾರವನ್ನು ಮಾಡುವದೆಂತು ? ಏನುಮಾಡಲಿ ? ಛೀ! ಬಿಡು. ಆ ವಿಚಾರವಾಗಿ ಆಲೋಚನೆಯನ್ನೇ ಮಾಡುವುದಿಲ್ಲ. ದೇವರು ಮಾಡಿದಂತಾಗಲಿ. ಒಳ್ಳೆಯದು. ನಿನ್ನ ವಿಷಯವೇನು ? ನಮ್ಮಮ್ಮನು ದುರ್ಮತಿಯನ್ನು ವಿವಾಹವಾಗೆಂದು, ನಿನ್ನನ್ನು ನಿತ್ಯದಂತೆ ಇಂದೂ ಹಿಂಸಿಸಿದಳೊ ಇಲ್ಲವೊ ?

ಕಮ:—ಈಗತಾನೆ ಆ ಸಂಭ್ರಮದ ಕಾಟವನ್ನು ತಪ್ಪಿಸಿಕೊಂಡು

ಬಂದೆನು. ಆ ಕೋಣನಾದ ದುರ್ಮತಿಯನ್ನು, ಇಂದ್ರ, ಚಂದ್ರ, ದೇವೇಂದ್ರನೆಂದು ನನ್ನ ಮುಂದೆ ಹೊಗಳಿ ಬೇಸರಪಡಿಸಿದಳು. ನನ್ನ ಭಾವನೆಯಲ್ಲಿ ಅವನಂತಹ ಮತಿಹೀನನು ಬೇರೊಬ್ಬನಿಲ್ಲ. ಆದರೆ, ನಿಮ್ಮಮ್ಮನ ಪಾಲಿಗೆ ಅವನು ಪೂರ್ಣಪ್ರಜ್ಞನು. ಅವನಂತಹ ಬುದ್ಧಿವಂತರು ಜಗತ್ತಿನಲ್ಲೇ ಯಾರೂ ಇಲ್ಲವಂತೆ !

ನಿರ್ಮ:—ಅವಳ ಅಭಿಮಾನವನ್ನು ಏನೆಂದು ಹೇಳಲಿ ? ಬಾಯಲ್ಲಿ ಹೇಳುವುದು ಮಾತ್ರವಲ್ಲ; ಮನಸಾ, ದುರ್ಮತಿಯನ್ನು ಸರ್ವಜ್ಞನೆಂದೇ ತಿಳಿದುಕೊಂಡಿರುವಳು. ನಿನ್ನ ಐಶ್ವರ್ಯವನ್ನು ನೋಡಿದರೆ, ಯಾರಿಗೆ ತಾನೆ ದುರ್ಬುದ್ಧಿಯು ಹುಟ್ಟುವುದಿಲ್ಲ ? ಜತೆಗೆ, ನಿನ್ನ ಐಶ್ವರ್ಯವೆಲ್ಲವೂ ನನ್ನ ತಾಯಿಯ ಸರ್ವಾಧಿಕಾರದಲ್ಲೇ ಇರುವುದು. ಆದುದರಿಂದ ಅದು ಮನೆಯನ್ನು ಬಿಟ್ಟುಹೋಗಕೂಡದೆಂದು ಅವಳು ಪ್ರಯತ್ನ ಪಡುವಳು. ಅದರಲ್ಲಿ ಆಶ್ಚರ್ಯವೇನು ?

ಕಮ:—ನನ್ನ ಆಸ್ತಿಯೆಲ್ಲವೂ ಜವಾಹಿರಿಯ ರೂಪದಲ್ಲಿದೆ. ಆದುದರಿಂದ ವಿಶೇಷ ದುರ್ಬುದ್ಧಿಯು ಹುಟ್ಟುವಂತಿಲ್ಲ. ಆದರೇನು? ನನ್ನ ಪ್ರಿಯಸೇನನು ಸತ್ಯವಂತನಾಗಿದ್ದರೆ ನಿನ್ನ ತಾಯಿಗೆ ಮೋಸಮಾಡುವುದೇನೂ ಕಷ್ಟವಲ್ಲ. ಅವಳಿಗೆ ನಾನು ನುಂಗಲಾರದ ತುತ್ತೇ ಆಗುವೆನು. ಅದುವರೆಗೂ ದುರ್ಮತಿಯನ್ನು ಪ್ರೀತಿಸುವಂತೆಯೇ ನಟಿಸುತ್ತಿರುವೆನು. ಮತ್ತೋರ್ವ ಯುವಕನಲ್ಲಿ, ನನ್ನ ಪ್ರೀತಿ, ನನ್ನ ಪ್ರಾಣ, ನನ್ನ ಸರ್ವಸ್ವವನ್ನು ನೆಲೆಸಿರುವೆನೆಂಬ ಅನುಮಾನವು ನಿಮ್ಮ ತಾಯಿಗೆ ಹುಟ್ಟಲು ಸ್ವಲ್ಪವೂ ಅವಕಾಶವನ್ನು ಕೊಡುವುದಿಲ್ಲ.

ನಿರ್ಮ:—ನಮ್ಮ ದುರ್ಮತಿ ಕೇವಲ ಹಟವಾದಿ. ನಿನ್ನನ್ನು ಈರೀತಿಯಾಗಿ ದ್ವೇಷಿಸುತ್ತಿರುವುದಕ್ಕಾಗಿಯೇ, ನಾನು ಅವನನ್ನು ಮೆಚ್ಚುತ್ತೇನೆ.

ಕಮ:—ದುರ್ಮತಿಯು ಹೃದಯದಲ್ಲೇನೋ ಸಾಧುಸ್ವಭಾವವುಳ್ಳವನು. ಅವನಿಗಲ್ಲದೆ ಮತ್ತಾರಿಗಾದರೂ ನನ್ನನ್ನು ಕೊಟ್ಟು ವಿವಾಹಮಾ

ಡುವುದು ಎಲ್ಲರಿಗೂ ಸಂತೋಷವನ್ನುಂಟುಮಾಡಬಹುದು. ಅದೊ ! ನಮ್ಮತ್ತೆಯು ಕೂಗುವಂತಿದೆ. ತೋಟದಲ್ಲಿ ಸ್ವಲ್ಪ ಸುತ್ತಾಡಿಬರಬೇಕು. ನಮ್ಮ ಕೆಲಸಕಾರ್ಯಗಳು ಬಹಳ ಅವ್ಯವಸ್ಥೆಯಲ್ಲಿರುವುವು. ಈ ಬಿಕ್ಕಟ್ಟಿನಲ್ಲಿ ಧೈರ್ಯವನ್ನವಲಂಬಿಸುವುದೇ ಅತ್ಯಾವಶ್ಯಕವಲ್ಲವೆ ?

ನಿರ್ಮ:—ದೇವರು ನಮಗೆ ಮಂಗಳವನ್ನುಂಟುಮಾಡಬೇಕು.

---

## II

[ಒಂದು ಸುರಾಪಾನಗೃಹ. ಕೆಲವು ಶೂಬಚರು ಪಾನಮಾಡುತ್ತ, ಹೊಗೆಬತ್ತಿಯನ್ನು ಸೇದುತ್ತ ಕುಳಿತಿರುವರು. ಎಲ್ಲರಿಗಿಂತಲೂ ಎತ್ತರವಾದ ಪ್ರದೇಶದಲ್ಲಿ ದುರ್ಮತಿಯು ಕಯ್ಯಲ್ಲೊಂದು ಕೊಡತಿಯನ್ನು ಹಿಡಿದು ಕುಳಿತಿರುವನು.]

ಎಲ್ಲರೂ:—ಜಯ! ಜಯ! ವಿಜಯ! ಶೂರನೆ! ಜಯ!

ಒಬ್ಬನು:—ಎಲ್ಲಿ? ಸಾಕು! ಸದ್ದುಮಾಡಬೇಡಿರಿ. ನಮ್ಮ ಯಜಮಾನರು ಹಾಡುತ್ತಾರೆ ಸ್ವಲ್ಪ ಸುಮ್ಮನಿರಿ.

ಎಲ್ಲರೂ:—ಓಹೊ! ಹಾಡು! ಹಾಡು!!

ದುರ್ಮ:—ಹಾಡುವುದಕ್ಕೆ ನನಗೆ ಬರುವುದಿಲ್ಲ. ನಾನು ಈ ಆನಂದ ಮಂದಿರದಮೇಲೆ ಒಂದು ಸ್ವಾರಸ್ಯವಾದ ಉಪನ್ಯಾಸವನ್ನು ಬಹಳ ಆಲೋಚಿಸಿ ಸಿದ್ಧಪಡಿಸಿರುವೆನು. ಕೇಳಿರಿ!

ವ್ಯಾಕರಣ, ವಾಕ್ಯ, ಸ್ವರ, ವ್ಯಂಜನಗಳ ಗೋಳನ್ನು ಕಟ್ಟಿಕೊಂಡು ಹಾಳು ಉಪಾಧ್ಯಾಯರು ಒದ್ದಾಡಲಿ! ಬಹಳಸೊಗಸಾದ ದ್ರಾಕ್ಷಾರಸವೇ ಮಾನವನಿಗೆ, ವಿಶೇಷ ಜಾಣ್ಮೆಯನ್ನು ಕೊಡುವುದೆಂದು ನನ್ನ ಸಿದ್ಧಾಂತವು. ಇಂದ್ರ, ಚಂದ್ರ, ದೇವೇಂದ್ರ, ಅಗ್ನಿ, ಇವರು ಹಾಳಾದರು; ಇವರ ತಲೆಯಮೇಲೆ ಕುಪ್ಪೆಬೀಳಲಿ! ಆನಂದಮಂದಿರದ ಶೂರರಿಗೆ ಈಪಾಡೊಂದೂ ಬೇಡ! ಏನನ್ನು ಹೇಳುವಿರಿ? ಹಾ! ಹಾ! ಹಾ!! ಪಾನವು ದೂಷ್ಯವೆಂದು ಬೋಧಿಸುವವನು ಪೂರ್ಣವಾಗಿಯೂ ಪಾನಮಾಡಿರಬೇಕು. ಇದೇ ನನ್ನ ಮತವು.

ನನ್ನ ಸಿದ್ಧಾಂತವು!! ಅದಕ್ಕಾಗಿ ಏನನ್ನಾದರೂ ಪಂತವಿಡುವೆನು. ಇಂತಹರಿಂದ ಮತಬೋಧನೆಯು ಕಾರ್ಯವೆ? ಅವರ ಸಂಬಂಧವು ನಮಗೆಬೇಡ. ಅವರು ಹಾಳಾಗಲಿ ! ಆನಂದಮಂದಿರಕ್ಕೆ ಮಿಗಿಲಾದುದುಂಟೆ? ಎಲ್ಲಿ? ಭರ್ಜರಿ, ಬಲು ಸೊಗಸಾದ, ಸೊಗಸಿನಮೇಲೆ ಸೊಗಸಾದ, ಹಳೆದ್ರಾಕ್ಷಾರಸವನ್ನು ತೆಗೆದುಕೊಂಡುಬನ್ನಿ ! ಕುಡಿದು ಕುಣಿದಾಡುವ! ಆನಂದಮಂದಿರಕ್ಕೆ ಎಂದೆಂದೂ ಆನಂದವಿರಲಿ! ಕೋಳಿಯುಜೂಜು, ಮೊಲದಬೇಟೆ, ಪಾರಿವಾಳದಆಟ, ಇವಕ್ಕೆಲ್ಲಾ, ಬನ್ನಿರಣ್ಣಾ, ಬನ್ನಿರೊ!! ಎಲ್ಲಿ? ಆನಂದಮಂದಿರದ ಶ್ರೇಯೋಭಿವೃದ್ಧಿಗಾಗಿ ಎಲ್ಲರೂ ಒಮ್ಮೆ ಪಾನಮಾಡಿರಿ! ಬನ್ನಿರೊ!! ಬನ್ನಿರೊ!! ಹೇಗಿದೆ? ಹೇಗಿದೆ ? (ಎಲ್ಲರೂ ಸುರೆಯನ್ನು ಪಾನಮಾಡುವರು.)

ಎಲ್ಲರೂ:—ಬಲುಸೊಗಸಣ್ಣಾ! ಬಲುಸೊಗಸು.

ಒಬ್ಬನು:—ನಮ್ಮ ದೊರೆಗೆ ಸರಸ್ವತಿಯು ಒಲಿದಿರುವಳು.

ಎರಡನೆಯವನು:—ನಮ್ಮ ದೊರೆಯ ಮಾತೇ ನನಗೆ ಅಮೃತವು. ಎಂದೂ ಕೀಳುವಿಚಾರವೇ ಇಲ್ಲವೊ?

ಮೂರನೆಯವನು:—ಕೀಳುವಿಚಾರವೆ? ಅದುಹಾಳಾಗಲಿ! ಅದನ್ನು ನಾನು ಸಹಿಸಲಾರೆನು.

ನಾಲ್ಕನೆಯವನು:—ಒಳ್ಳೆಯದು ಎಂದಿದ್ದರೂ ಒಳ್ಳೆಯದೇ! ದೊಡ್ಡ ಮನುಷ್ಯನು ಎಂದೂ ದೊಡ್ಡಮನುಷ್ಯನೇ!

ಮೂರನೆಯವನು:—ಅದೇ ನನಗೂ ಸಮ್ಮತವಾದ ಮಾತು.

ಎರಡನೆಯವನು:—ಏನು, ಅನ್ಯಾಯ ? ನಮ್ಮದೊರೆಯ ಆಸ್ತಿಯು ಇನ್ನೂ ಅವನ ವಶವಾಗಿಲ್ಲ, ಅವನ ವಶವಾದದಿನವೇ ನಮ್ಮಗಳ ಭಾಗ್ಯೋದಯವೂ ಆದಂತೆ ಭಾವಿಸಬಹುದು. ಹತ್ತು ಮೈಲಿ ಸುತ್ತಿನಲ್ಲಿರುವ ಮಿತ್ರರಿಗೆಲ್ಲಾ ಅಂದೇಹಬ್ಬ.

ದುರ್ಮ:—ಪ್ರಿಯಮಿತ್ರರೊಡನೆ ಆನಂದವಾಗಿರುವುದೆಂತೆಂದು ಅಂದು ನಾನು ಎಲ್ಲರಿಗೂ ತೋರಿಸುವೆನು.

ಒಬ್ಬನು:—ಇವನ ತಂದೆಯಂತಹವರನ್ನು ನಾನು ನೋಡಿಯೇ ಇಲ್ಲ. ಅವನ ಕಾಲದಲ್ಲಿ, ನಾಯಿ, ಕುದುರೆ, ಸೂಳೆಯರಿಗೆ ಕೊರತೆಯೇ ಇರಲಿಲ್ಲ.

ದುರ್ಮ:—ನನಗೂ ವಯಸ್ಸು ಬಂದು ನನ್ನ ಆಸ್ತಿಯು ನನ್ನ ಸ್ವಾಧೀನಕ್ಕೆ ಬರಲಿ ! ನಮ್ಮಪ್ಪನಿಗೆ ತಕ್ಕ ಮಗನೆನಿಸಿಕೊಳ್ಳದಿದ್ದರೆ, ನನ್ನ ಮಾತೇಕೆ ? ಹು ! ಎಲ್ಲರೂ ಪಾನಮಾಡಿರಿ ! ನಿಮಗೇನೂ ಧನವ್ಯಯವಿಲ್ಲವಷ್ಟೆ ? ಎಲ್ಲಿ ! ಎಲ್ಲರೂ ಆನಂದದಿಂದ ಪಾನಮಾಡಿ ಸುಖಿಗಳಾಗಿರಿ. (ಎಲ್ಲರೂ ಕುಡಿಯುವರು)

[ಪಾನಗೃಹಾಧ್ಯಕ್ಷನು ಬರುವನು.]

ಅಧ್ಯಕ್ಷ:—ಹೊರಗೆ ಇಬ್ಬರು ದೊಡ್ಡಮನುಷ್ಯರು ಟಪಾಲಗಾಡಿಯಲ್ಲಿ ಬಂದಿರುವರು. ಕಾಡಿನಲ್ಲಿ ಅವರಿಗೆ ದಾರಿಯು ತಪ್ಪಿರುವುದು. ಅವರು ದೇವದತ್ತನ ವಿಚಾರವಾಗಿ ಏನನ್ನೊ ಮಾತನಾಡುವಂತೆ ತೋರುವುದು.

ದುರ್ಮ:—ಓಹೋ ! ಅವರಲ್ಲೊಬ್ಬನು ನಮ್ಮ ನಿರ್ಮಲೆಯನ್ನು ಮದುವೆಯಾಗಲು ಬರಬೇಕಾಗಿರುವ ವರನಿರಬಹುದು. ಅವರೇನು ಪಟ್ಟಣವಾಸಿಗಳಂತೆ ತೋರುವರೊ ?

ಅಧ್ಯಕ್ಷ:—ಅಹುದು. ಚಂದ್ರನಗರದವರಾಗಿದ್ದರೂ ಆಗಿರಬಹುದು.

ದುರ್ಮ:—ಅವರನ್ನು ಒಳಕ್ಕೆ ಕರೆ. ಕಣ್ಣು ಮಿಟಕಿಸುವುದರೊಳಗೆ ಅವರನ್ನು ಸರಿಪಡಿಸುವೆನು. (ಅಧ್ಯಕ್ಷನು ಹೊರಟುಹೋಗುವನು.) (ಸ್ನೇಹಿತರ ಕಡೆಗೆ ತಿರುಗಿ) ಮಿತ್ರರೆ ! ಅವರು ನಮ್ಮ ಸಮಾಜಕ್ಕೆ ಸೇರಲು ಯೋಗ್ಯರಲ್ಲವಾದಕಾರಣ, ನೀವು ಹೊರಗೆ ನಡೆಯಿರಿ. ನಾನು ನಿಂಬೆಯಹಣ್ಣಿನ ಹೋಳನ್ನು ಹಿಸುಕಿ, ರಸವನ್ನು ತೆಗೆಯುವಷ್ಟು ಕಾಲದೊಳಗಾಗಿ ನಿಮ್ಮ ಜತೆಯನ್ನು ಸೇರುವೆನು. (ಗುಂಪು ತೆರಳುವುದು.)

ದುರ್ಮ:—(ಸ್ವಗತಂ) ನನ್ನ ಮಾವನು ಆರುತಿಂಗಳೊಳಗೆ ನನಗೆ ನಾಯಿ, ತೋಳ, ಕೋಣ ಎಂದು ಏನೇನನ್ನೊ ನಾಮಕರಣಮಾಡಿರುವನು.

ಅವನಮೇಲಿರುವ ಕಿಚ್ಚನ್ನು ತೀರಿಸಿಕೊಳ್ಳಲು ಇದೇ ತಕ್ಕುದಾದ ಸಮಯವು. ಆದರೆ, ನನ್ನ ಗತಿ ? ಗತಿಯೇನು ? ನನಗೇಕೆ ಹೆದರಿಕೆ ? ನನಗೆ ನನ್ನ ಆಸ್ತಿಯಮೇಲಿನ ಪೂರ್ಣಾಧಿಕಾರವು ಬರುವುದು. ಅದನ್ನು ತಪ್ಪಿಸಲು ಆ ಮುದಿಗೊಡ್ಡಿಗೆ ಸಾಮರ್ಥ್ಯವಿರುವುದೇನೊ, ನೋಡುವ.

[ಗೃಹಾಧ್ಯಕ್ಷನು, ರಾಮವರ್ಮ ಪ್ರಿಯಸೇನನೊಡನೆ ಬರುವನು]

ರಾಮ:—ಇದೇನು ? ಇಂದು ಇಷ್ಟು ಗೋಳು ? ಪ್ರಯಾಣದ ಬೇಸರವನ್ನೂ ತೊಂದರೆಯನ್ನೂ ಎಷ್ಟು ಹೇಳಿದರೂ ತೀರದು. ಅಡ್ಡದಾರಿಯಲ್ಲಿ ಪ್ರಯಾಣಮಾಡಿದರೆ ನಲವತ್ತು ಮೈಲಿ ಇರುವುದೆಂದು ಹೇಳಿದರು. ಅರವತ್ತು ಮೈಲಿಗಿಂತ ಹೆಚ್ಚಾಗಿಯೇ ಅಲೆದಿರುವೆವು.

ಪ್ರಿಯ:—ಮಾತನಾಡಿದರೆ ಮುತ್ತು ಸುರಿವುದೆಂದು ಹೆದರುತ್ತ ಜನರ ಗುಂಪಿಗೆ ದೂರವಾಗಿರುವ ನಿನ್ನ ಈ ವಿಚಿತ್ರಸ್ವಭಾವದಿಂದ ಈ ದುರವಸ್ಥೆಯು ಪ್ರಾಪ್ತವಾಗಿದೆ. ದಾರಿಹೋಕರನ್ನು ಆಗಾಗ ವಿಚಾರಿಸಿಕೊಂಡು ಬಂದಿದ್ದರೆ, ನಾವು ಸರಿಯಾದ ದಾರಿಯಲ್ಲೇ ಇರುತ್ತಿದ್ದೆವು !

ರಾಮ:—ಮಾರ್ಗದಲ್ಲಿ ಕಂಡಕಂಡವರಿಂದ ಉಪಕಾರವನ್ನು ಪಡೆದು ಅವರಿಗೆಲ್ಲಾ ಕೃತಜ್ಞನಾಗಿರುವುದೂ ಅಲ್ಲದೆ, ಕೆಲವರಿಂದ ಅವಮರ್ಯಾದೆಕರವಾದ ಉತ್ತರವನ್ನೂ ಕೇಳುವುದು ನನಗೆ ಸತ್ಯವಾಗಿಯೂ ಹಿತವಲ್ಲದ ಕಾರ್ಯವು.

ಪ್ರಿಯ:—ಈಗ ನಮ್ಮ ಪ್ರಶ್ನೆಗೆ ಉತ್ತರವನ್ನು ಕೊಡುವವರೇ ದಿಕ್ಕಿಲ್ಲವಲ್ಲ ?

ದುರ್ಮ:—ಸ್ವಾಮಿ ! ಅಸಮಾಧಾನಪಡಬೇಡಿರಿ ! 'ನೀವು 'ಈಪ್ರಾಂತದಲ್ಲಿ ದೇವದತ್ತನೆಂಬುವನು ಇರುವನೇ?' ಎಂಬದಾಗಿ ವಿಚಾರಿಸುತ್ತಿರುವಿರೆಂದು ಕೇಳಿದೆನು. 'ಈಗ ನೀವು ಎಲ್ಲಿರುವಿರಿ ?' ಎಂಬುದು ನಿಮಗೆಗೊತ್ತುಂಟೊ ?

ಪ್ರಿಯ.—ನಮಗೆ ತಿಳಿಯದು. ದಯವಿಟ್ಟು ಹೇಳಿದರೆ, ಕೃತಜ್ಞರಾಗಿರುವೆವು.

ದುರ್ಮ:—ನೀವು ಬಂದ ದಾರಿಯೂ ಗೊತ್ತಿಲ್ಲವೊ ?

ಪ್ರಿಯ:—ಇಲ್ಲವಯ್ಯ ! ನೀನು ದಯವಿಟ್ಟು ತಿಳಿಸುವುದಾದರೆ—

ದುರ್ಮ :—ಇದೇನು, ಸ್ವಾಮಿ ? ನೀವು ಎಲ್ಲಿಂದ ಬಂದಿರೊ, ಎಲ್ಲಿಗೆ ಹೋಗುವಿರೊ, ಎಂಬುದೇ ನಿಮಗೇ ಗೊತ್ತಿಲ್ಲವಾದರೆ, ನಾನು ಮೊದಲು ತಿಳಿಸತಕ್ಕುದು ಒಂದೇ ಒಂದು ವಿಶೇಷವಿಷಯವಿದೆ ! ಏನೆನ್ನು ವಿರೊ ? ನಿಮಗೆ ದಾರಿಯು ತಪ್ಪಿಹೋಗಿ ದಿಗ್ಭ್ರಮೆಯು ಹಿಡಿದಿರುವುದು. ಸರಿಯೊ ? ತಿಳಿಯಿತೊ ?

ರಾಮ:— ಇದನ್ನು ಹೇಳಲು ನಿಮ್ಮಂತಹ ಸರ್ವಜ್ಞರೇ ಆಗಬೇಕೊ ?

ದುರ್ಮ:—ಸ್ವಾಮಿ ! ನೀವು ಎಲ್ಲಿಂದ ಬಂದಿರೆಂದು ಪ್ರಶ್ನೆಮಾಡ ಬಹುದೊ ?

ಪ್ರಿಯ:—ನಾವು ಹೋಗಬೇಕಾಗಿರುವ ಮಾರ್ಗವನ್ನು ತೋರಿಸಲು ಈ ಪ್ರಶ್ನೆಯು ಆವಶ್ಯಕವಿಲ್ಲ.

ದುರ್ಮ:—ಆಗ್ರಹವು ಬೇಡಿ, ಸ್ವಾಮಿ ! ಒಂದು ಪ್ರಶ್ನೆಗೆ ಬದಲು ಇನ್ನೊಂದನ್ನು ಕೇಳುವುದೂ ನ್ಯಾಯವಲ್ಲವೆ ? ಸ್ವಾಮಿ ! ದೇವದತ್ತ ನೆಂಬವನು, ಪೂರ್ವಕಾಲದ ಪದ್ಧತಿಯನ್ನೇ ಆಚರಿಸುವ ವೃದ್ಧನಲ್ಲವೆ ? ವಿಚಿತ್ರವಾದ ನಡತೆ, ವಿಕಾರಮುಖ, ಅಲ್ಲವೆ ? ಅವನಿಗೊಬ್ಬಳು ಕುರೂಪಿ ಮಗಳೂ ಸುಂದರನಾದ ಸೋದರಳಿಯನೊಬ್ಬನೂ, ಇರುವರಲ್ಲವೆ ಸ್ವಾಮಿ!

ಪ್ರಿಯ:—ನಾವು ಅವರನ್ನು ನೋಡಿಲ್ಲ. ಅವನ ಕುಟುಂಬದಲ್ಲಿ ನೀನು ಹೇಳುವಂತೆ ಇಬ್ಬರಿರುವರು.

ದುರ್ಮ:—ಅವನ ಮಗಳು, ಉದ್ದಕ್ಕೆ, ಅವಲಕ್ಷಣವಾಗಿ ತೆಳ್ಳಗೆ ಇರುವ ಹರಟೆಯ ಮಲ್ಲಿಯಲ್ಲವೆ ? ಅಳಿಯನು, ಬಹುಸುಂದರಾಕಾರನೂ ಮನೋಹರನೂ, ಯೋಗ್ಯನೂ ಆಗಿ, ಸರ್ವರಿಗೂ ಮುದ್ದುಗೆಳೆಯನಾಗಿರು ವನು. ಅಲ್ಲವೊ ?

ರಾಮ:—ನಮಗೆ ತಿಳಿದುಬಂದಿರುವುದೇ ಬೇರೊಂದುರೀತಿ. ಮಗಳು

ಸುಶೀಲೆ, ಸುಂದರಿ ಎಂದೂ, ಅಳಿಯನು ಏಕಾರ ಸ್ವರೂಪನೆಂದೂ ಅವನ ಅತ್ತೆಯಿಂದಲೇ ಅವನು ಹಾಳಾಗಿರುವನೆಂದೂ ಕೇಳಿರುವೆವು.

ದುರ್ಮ:—ಹಂ, ಹೂಂ!! ಹಾಗಾದರೆ, ಸ್ವಾಮಿ, ನೀವು ಈ ರಾತ್ರಿ ದೇವದತ್ತನ ಮನೆಯನ್ನು ಸೇರುವದಿಲ್ಲವೆಂದು ನನಗೆ ಧೈರ್ಯವುಂಟು.

ಪ್ರಿಯ:—ಗ್ರಹಚಾರವೆ ?

ದುರ್ಮ:—ಅವನ ಮನೆಯ ಮಾರ್ಗವು ಬಹಳದೂರ. ಹಳ್ಳ, ಕೊಳ್ಳ, ಗುಡ್ಡ, ಹಾಳುರಸ್ತೆ, ಕಳ್ಳಕಾಕರ ಅಪಾಂತರವೂ ಹೆಚ್ಚು ; ಇಂತಹ ರಾತ್ರೆಯಲ್ಲಿ ಸಂಚರಿಸುವಂತೆ ಇಲ್ಲವೇ ಇಲ್ಲ. ಅಧ್ಯಕ್ಷನೆ ! ಇವರಿಗೆ ದೇವದತ್ತನ ಮನೆಯ ದಾರಿಯನ್ನು ಹೇಳು ! (ಅಧ್ಯಕ್ಷನನ್ನು ನೋಡಿ ಕಣ್ಣನ್ನು ಮಿಟಕಿಸಿ) ಕರೀಕಲ್ಲುಕುಂಟೆಯ ದೇವದತ್ತನಮನೆ ತಿಳಿಯಿತೊ ?

ಅಧ್ಯಕ್ಷ:—ದೇವದತ್ತನಮನೆಯ ? ಸರಿ ! ಸರಿ !! ಸ್ವಾಮಿ ! ನೀವೆಲ್ಲೊ ? ಅದೆಲ್ಲೊ ? ಸಂಬಂಧವೇ ಇಲ್ಲ. ನೀವು ಬೆಟ್ಟದ ತಪ್ಪಲಿಗೆ ಬಂದಿರಲ್ಲಾ—ಆಗಲೇ ಡೊಂಕು ಓಣಿಗೆ ಅಡ್ಡವಾಗಿ ಹೋಗಬೇಕಾಗಿತ್ತು.

ರಾಮ:—ಡೊಂಕು ಓಣಿಗೆ ಅಡ್ಡವಾಗಿಯೆ ?

ಅಧ್ಯಕ್ಷ:—ಅಹುದು. ಅನಂತರ ನೀವು ನಾಲ್ಕುರಸ್ತೆಗಳೂ ಕೂಡುವ ಸ್ಥಳದವರೆಗೂ ನೇರವಾಗಿ ಹೋಗಬೇಕಾಗಿತ್ತು.

ರಾಮ:—ನಾಲ್ಕುರಸ್ತೆಯೂ ಕೂಡುವಲ್ಲಿಗೇ ?

ಅಧ್ಯಕ್ಷ:—ಅಹುದು. ಆದರೆ ನೀವು ಅವುಗಳಲ್ಲಿ ಒಂದರಲ್ಲೇ ಪ್ರಯಾಣಮಾಡಬೇಕಾಗಿತ್ತು.

ರಾಮ:—ನಿನಗೆ ವಿನೋದವಾಗಿದೆ. ಆದರೆ ನಮಗೆ......

ದುರ್ಮ:—ಇಲ್ಲ, ಸ್ವಾಮಿ ! ಆ ಚೌಕಕ್ಕೆ ಹೋಗಿ, ಅನಂತರ ಬಲಕ್ಕೆ ಇದ್ದು, ಎಡಮಗ್ಗಲಿಗೇ ಹೋಗುತ್ತ, ಕೋಡಿಕಲ್ಲಿನ ಗುಡಿಯವರೆಗೂ ಪ್ರಯಾಣಮಾಡಬೇಕು. ಅಲ್ಲಿಂದ ಗಾಡಿಯಚಕ್ರದ ಗುರುತನ್ನೇ ಹಿಡಿದು, ದೈವದ ದಿಣ್ಣೆಯ ಹೊಲದವರೆಗೂ ಹೋಗಿ, ಅಲ್ಲಿ ಜ್ಞಾಪಕವಾಗಿ,

ಮರೆಯಬೇಡಿ, ಮೊದಲು ಬಲಕ್ಕೂ, ಆಮೇಲೆ ಎಡಕ್ಕೂ, ಅನಂತರ ಹಿಂದಕ್ಕೂ, ಪುನಃ ಬಲಕ್ಕೂ ಎಡಕ್ಕೂ ತಿರುಗಿ ಹಳೇ ಕಾರ್ಖಾನೆಯು ಸಿಕ್ಕುವವರಿಗೂ ಪ್ರಯಾ......

ರಾಮು:—ಅಯ್ಯೋ ! ತಮಾಷೆಯೆ ? ಗ್ರಹಚಾರವೇಸರಿ. ಇಷ್ಟು ಶ್ರಮಪಟ್ಟರೆ, ದಕ್ಷಿಣಮೇರುವನ್ನು ಕಂಡುಹಿಡಿಯಬಹುದು.

ಪ್ರಿಯ:—ರಾಮುವರ್ಮನೆ ! ಮುಂದೇನುಗತಿ ?

ರಾಮು:—ಈ ಮಂದಿರದ ಅಧ್ಯಕ್ಷನು ನಮಗೆ ಈ ರಾತ್ರಿ ಇಲ್ಲಿಯೇ ಇರಲು ಅವಕಾಶವನ್ನು ಕೊಟ್ಟರೂ, ನಮಗೆ ಬೇಕಾದ ಅನುಕೂಲ್ಯಗಳೆಲ್ಲವೂ ದೊರೆವಂತೆ ತೋರುವುದಿಲ್ಲ.

ಅಧ್ಯಕ್ಷ:—ಸ್ವಾಮಿ ! ಈ ಮಂದಿರದಲ್ಲಿ ಈಗ ಒಂದೇ ಒಂದು ಕೋಣೆಯು ಬರಿದಾಗಿದೆ.

ದುರ್ಮ:—ಆ ಹೊಸಬರು ಅಲ್ಲಿರುವರೆಂದು ನನಗೆ ನೆನಪು. (ಒಂದು ಘಳಿಗೆ ಸುಮ್ಮನಿದ್ದು) ಸರಿ, ಸರಿ. ನನಗೆ ಒಂದುಮಾರ್ಗವು ಸರಿಯಾಗಿರುವಂತೆ ಕಾಣುವುದು. ಇವರಿಗೆ ನಿನ್ನ ಪತ್ನಿಯು ಒಲೆಯಪತ್ತಿರ ಸ್ಥಳವನ್ನು ಕೊಡಲಾರಳೆ ? ಅಲ್ಲಿ ಮೂರುಕುರ್ಚಿ, ಒಂದುಸೀಸೆ –

ರಾಮು:—ಪ್ರಿಯಸೇನ ! ಒಲೆಯ ಬಳಿಯಲ್ಲಿ ಮಲಗುವುದು—ಥೂ ! ಸರ್ವಾಸಹ್ಯ !

ಪ್ರಿಯ:—ನಿನ್ನ ಮೂರುಕುರ್ಚಿ, ಸೀಸೆಗಳಿಗೆ, ಬೆಂಕಿಬೀಳಲಿ. ನಮಗೆ ಸರಿಯಾದ ಉತ್ತರವನ್ನು ಕೊಡು.

ದುರ್ಮ:—ಹಾಗೊ ? ಸರಿ. ಹಾಗಾದರೆ, ಆಲೋಚಿಸುವ ! ನೀವು ಒಂದು ಮೈಲಿದೂರ ನಡೆದು ಕ್ಷೇಮವಾಗಿ "ಸುಖನಿವಾಸ" ಕ್ಕೇಕೆ ಹೋಗಬಾರದು ? ಆ ಗುಡ್ಡದ ಮೇಲಿರುವ ಸುಖನಿವಾಸ. ಈ ಸುತ್ತಿನಲ್ಲಿ ಅಂತಹ ಪ್ರಸಿದ್ಧಿಯನ್ನು ಹೊಂದಿರುವ ಭೋಜನಶಾಲೆಯು ಬೇರೊಂದಿಲ್ಲ.

ಪ್ರಿಯ:—ಹಾಗಾದರೆ, ಈ ದಿನದ ರಗಳೆಯು ಕೊನೆಗಾಣುವಂತಿದೆ.

ಅಧ್ಯಕ್ಷ:—(ರಹಸ್ಯವಾಗಿ) ದುರ್ಮತಿಯೆ, ನಿಮ್ಮ ಮಾವನ ಮನೆಗೆ ಇವರನ್ನು—ಅದು ಭೋಜನಶಾಲೆಯೆಂಬ ಭ್ರಾಂತಿಯನ್ನು ಹುಟ್ಟಿಸಿ—ಕಳುಹಿಸುವೆಯೇನು ?

ದುರ್ಮ:—ಹೂಂ. ಹುಚ್ಚಾ. ಕೂಗಬೇಡ. ಅವರೇ ಗುಟ್ಟನ್ನು ಗೊತ್ತುಮಾಡಿಕೊಳ್ಳಲಿ. (ಪ್ರಯಾಣಿಕರನ್ನು ಕುರಿತು) ನೀವು ನೇರವಾಗಿ ರಸ್ತೆಯಲ್ಲಿ ಹೋದರೆ, ರಸ್ತೆಯಪಕ್ಕದಲ್ಲಿ ಹಳೆ ಕಟ್ಟಡವೊಂದು ಸಿಲ್ಕುವುದು. ಜಿಂಕೆಯತಲೆ, ಕೋಡುಗಳು, ಮನೆಯಮೇಲಿನೆ "ಬೋರ್ಡು" ಇಲ್ಲ. ಅದೇ ಆ ಭೋಜನಶಾಲೆಗೆ ಗುರುತು. ಅಂಗಳಕ್ಕೆ ಗಾಡಿಯನ್ನು ಹೊಡಿಸ ಬಹುದು. ಒಂದು ಕೂಗನ್ನು ಹಾಕಿದರೆ—

ಪ್ರಿಯ:—ಅಯ್ಯಾ ! ನಿನಗೆ ನಾವು ಕೃತಜ್ಞರಾಗಿರುವೆವು. ಇನ್ನು ಸೇವಕರು ದಾರಿಯನ್ನು ತಪ್ಪಿಸಿಕೊಂಡು ಹೋಗುವಂತಿಲ್ಲವಲ್ಲವಷ್ಟೆ ?

ದುರ್ಮ:—ಇನ್ನು ಆ ಸಂಭವವಿಲ್ಲ. ನಾನು ಹೇಳುವುದನ್ನು ಕೇಳಿರಿ. ಸುಖನಿವಾಸದ ಅಧ್ಯಕ್ಷನು ಹಣವಂತನು. ಈಗ ಆ ಕೆಲಸವನ್ನು ಬಿಟ್ಟು ಬಿಡುವುದರಲ್ಲಿರುವನು. ನಮ್ಮಂತೆಯೇ ಗಣ್ಯನೆನಿಸಿಕೊಳ್ಳಲು, ಬಹಳ ಆಶೆ ಪಡುತ್ತಿರುವನು. ಹಿ ! ಹಿ !! ನಿಮ್ಮ ಸರಿಸಮಾನನಂತೆ, ನಿಮ್ಮ ಜತೆಯಲ್ಲೇ ಇರಲು ಪ್ರಯತ್ನಿಸುವನು. ನೀವು ಅವನ ಹರಟೆಯನ್ನೇ ಕೇಳುತ್ತ ಕುಳಿತರೆ, ತನ್ನ ತಾಯಿಯು ಶ್ರೀಮಂತಳಾಗಿದ್ದಳೆಂದೂ ತನ್ನ ಚಿಕ್ಕಪ್ಪನು ನ್ಯಾಯಾಧೀಶನಾಗಿದ್ದನೆಂದೂ ಹೇಳಿಕೊಳ್ಳಲು ಮೊದಲು ಮಾಡುವನು.

ಅಧ್ಯಕ್ಷ:—ಅಹುದು, ಬಲು ತಂಟೆಯ ಮುದುಕ. ಆದರೂ, ಈ ಸುತ್ತಿನಲ್ಲಿ ಅವನಷ್ಟು ಉತ್ತಮವಾದ ಭೋಜನಶಾಲೆಯನ್ನಿಟ್ಟಿರುವನು ಇನ್ನೊಬ್ಬನಿಲ್ಲ. ಅವನಲ್ಲಿರುವಂತಹ ದ್ರಾಕ್ಷಾರಸ ಮತ್ತು ತಿಂಡಿಗಳು, ಮತ್ತೊಬ್ಬನಲ್ಲಿ ಇಲ್ಲವೇ ಇಲ್ಲ.

ರಾಮ:—ನಮಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಕೊಟ್ಟರೆ ಸಾಕು. ಅವನ ರಗಳೆಯು ನಮಗೇಕೆ ? ನಾವು ಬಲಕ್ಕೆ ತಿರುಗಬೇಕೆಂದು

ಹೇಳಿದೆಯಲ್ಲವೆ ?

ದುರ್ಮ:—ಇಲ್ಲ. ನೇರವಾಗಿ ಹೊರಡಿರಿ. ಸ್ವಾಮಿ ! ನಾನೇ ಸ್ವಲ್ಪ ದೂರ ಮಾರ್ಗವನ್ನು ತೋರಿಸುವೆನು. (ಅಧ್ಯಕ್ಷನನ್ನು ನೋಡಿ) ಹೂಂ, ಹೂಂ ! (ಅವರ ಸಂಗಡ ಹೋಗುವರು.)

ಅಧ್ಯಕ್ಷ—ಆಹಾ ! ಎಂತಹ ಮಧುರವೂ, ವಿನೋದವೂ, ಮೃದುವೂ, ಆದ ಹೃದಯ ! ಮನೆಹಾಳ ! ದುರ್ಮಾರ್ಗ ! ನೀಚ !! ಪಾಪಿ !!

(ತೆರಳುವರು)

## ಎರಡನೆಯ ಅಂಕ

### I

[ದೇವದತ್ತನಮನೆ. ದೇವದತ್ತನು ಮೂರುನಾಲ್ಕು ಮಂದಿ ಮಂಕರಾದ ಸೇವಕರೊಡನೆಬರುವನು.

ದೇವ:—ಭೋಜನಕಾಲದಲ್ಲಿ ನೀವು ಏನೇನನ್ನು ಮಾಡಬೇಕೆಂದ ನಾನು ಈ ಮೊದಲೇ, ಮೂರು ದಿನಗಳಿಂದಲೂ, ಹೇಳಿಕೊಡುತ್ತಲಿದ್ದರೂ ಚೆನ್ನಾಗಿ ತಿಳಿದುಕೊಳ್ಳಲಿಲ್ಲವಲ್ಲ ? ನೀವು ಇರಬೇಕಾದ ಸ್ಥಳ, ಮಾಡಬೇಕಾದ ಉದ್ಯೋಗ, ಎಲ್ಲವೂ ತಿಳಿದಿರುವುದೊ ? ಮನೆಯನ್ನು ಬಿಟ್ಟು ಅಡ್ಡಾಡದಿದ್ದರೂ, ಮನೆಗೆ ದೊಡ್ಡವರು ಬಂದಾಗ ಯಾವರೀತಿ ನಡೆಯಬೇಕೆಂಬುದು, ನಿಮಗೆ ಚೆನ್ನಾಗಿ ಅನುಭವವಿರುವಂತೆ ತೋರ್ಪಡಿಸುವಿರಲ್ಲವೆ ?

ಎಲ್ಲರೂ:—ಓ ! ಓಹೋ!!

ದೇವ:—ನೀವು, ನಾನುಮುಂದೆ ತಾನುಮುಂದೆ ಎಂದು, ಓಡಿಬಂದು ಬಾಯಿ ಬಿಟ್ಟುಕೊಂಡು ನಿಂತಿರಬಾರದು. ಅಥವಾ ಬೆದರಿದ ಮೊಲಗಳು ಹೊಲದಲ್ಲಿ ಓಡುವಂತೆ ಓಡಲೂ ಬಾರದು.

ಎಲ್ಲರೂ:—ಇಲ್ಲ! ಇಲ್ಲ!!

ದೇವ:—ಚಂಡಗುಪ್ತನೆ! ನಿನ್ನನ್ನು ಹೊಲದಕೆಲಸದಿಂದ ತಪ್ಪಿಸಿ ಇಲ್ಲಿಗೆ ಕರೆತಂದಿರುವೆನು. ನಿನಗೇ ಮನೆಯ ಪಾರುಪತ್ಯವನ್ನು ಕೊಟ್ಟಿರುತ್ತೇನೆ. ನೀನು ಯಾವಾಗಲೂ ನನ್ನಮಗ್ಗುಲಿನಲ್ಲೇ ಇರಬೇಕು. ಉಳುವ ಕೆಲಸದಲ್ಲಿದ್ದ

ರಕ್ತಾಕ್ಷನೆ! ನೀನು ನನ್ನ ಬೆನ್ನಿನ ಹಿಂದೆಯೇ ಇರಬೇಕು. (ರಕ್ತಾಕ್ಷನು ತಲೆಯಮೇಲೆ ಕಯ್ಯನ್ನು ಇಟ್ಟುಕೊಂಡು ನಿಂತಿರುವನು) ಛೀ! ಹಾಗೆ ಕಯ್ಯನ್ನು ಇಟ್ಟುಕೊಂಡಿರಬಾರದು. ಎಲೋ, ಮಡೆಯಾ! ತಲೆಯಮೇಲಿನ ಕಯ್ಯನ್ನು ತೆಗೆ! ಅಲ್ಲಿನೋಡು, ಚಂಡಗುಪ್ತನು ಕಯ್ಯನ್ನು ಹೇಗೆ ಇಟ್ಟುಕೊಂಡಿರುವನು? ಆ ರೀತಿ ಕಟ್ಟೆಗೆಯಂತೆಯೂ ಇರಬಾರದು. ಆದರೂ ಚಿಂತೆಯಿಲ್ಲ.

ಚಂಡ:—ನೋಡಿರೊ! ನಾನು ನನ್ನ ಕಯ್ಗಳನ್ನು ಹೇಗೆ ಇಟ್ಟುಕೊಂಡಿರುವೆನು. ನಾನು ಸಿಪಾಯಿಕೆಲಸದಲ್ಲಿದ್ದಾಗ, ಕವಾಯಿತುಮಾಡಿ ಕಲಿತಿರುವೆನಪ್ಪಾ ! ಇವೆಲ್ಲ ಸುಮ್ಮನೆ ಬರುವುದಿಲ್ಲವಪ್ಪಾ. ಕವಾಯಿತು ಮಾಡುತ್ತೆ ............

ದೇವ:—ಚಂಡನೆ! ನೋಡಿದಿಯಾ ? ನೀನು ಅಷ್ಟೊಂದು ಹರಟಬಾರದು. ಮನೆಗೆಬಂದಿರುವರು ಏನನ್ನು ಹೇಳುವರೊ, ಅದನ್ನು ಕೇಳಲು ಬಹಳ ಎಚ್ಚರಿಕೆಯಿಂದಿರಬೇಕು. ನಾವು ಆಡುವ ಮಾತುಗಳನ್ನು ಕೇಳುತ್ತಿರಬೇಕಲ್ಲದೆ, ನೀನೇ ಮಾತನಾಡುವ ಆಲೋಚನೆಯನ್ನು ಮಾಡಬಾರದು. ನಾವು ಕುಡಿಯುತ್ತಿದ್ದರೆ, ನೀನು ಸುಮ್ಮನೆ ನೋಡುತ್ತಿರಬೇಕು. ನೀನೂ ಕುಡಿಯುವ ಆತುರದಲ್ಲಿರಬಾರದು. ನಾವು ಊಟಮಾಡುತ್ತಿದ್ದರೆ, ಸುಮ್ಮನೆ ನೋಡುತ್ತಿರಬೇಕೇ ಹೊರತು, ನೀನೂ ಊಟಮಾಡಲು ಆಶೆಪಡಬಾರದು. ತಿಳಿಯಿತೊ ?

ಚಂಡ:—ದೇವರಾಣೆಗೂ ಅದು ಅಸಾಧ್ಯವಾದ ಕೆಲಸ. ಭೋಜನವಾಗುವ ಎಡೆಯಲ್ಲಿ ನಾನಿದ್ದರೆ ನನಗೂ ಒಂದು ತುತ್ತು ಸಿಕ್ಕಲೆಂದೇ ಇರುವೆನು. ಆಸೆಪಡದೆ ಇರಲು ನನಗೆ ಸಾಧ್ಯವೇ ಇಲ್ಲ.

ದೇವ:—ಅಯ್ಯೋ! ಮರುಳೆ!! ಅಡುಗೆಯ ಮನೆಯಲ್ಲಿ ಊಟಮಾಡಿದರೂ ಹಜಾರದಲ್ಲಿ ನಮ್ಮೊಡನೆ ಊಟಮಾಡುವಂತೆಯೇ ಹೊಟ್ಟೆಯು ತುಂಬುವುದಲ್ಲವೆ ? ಹಾಗೆ ತಿಳಿದುಕೊಂಡು ನಿನ್ನ ಹಸಿವನ್ನೂ ತಿಂಡಿಪೋತತನವನ್ನೂ ಸಹಿಸಿಕೊಂಡಿರು.

ಚಂಡ:—ಹಾಗಾದರೆ, ಸ್ವಾಮಿ! ಮಗ್ಗಲಲ್ಲಿರುವ ಓಣಿಗೆ ಹೋಗಿ ಒಂದು ರೊಟ್ಟಿಯನ್ನು ತಿಂದು ಹಸಿವನ್ನು ಕಳೆದುಕೊಂಡು ಬರುವೆನು.

ದೇವ:—ನೀನು ಯಾವಾಗಲೂ ಹರಟೆಯುವಲ್ಲ! ಇರಲಿ, ನಾನು ಭೋಜನಕಾಲದಲ್ಲಿ ಏನಾದರೊಂದು ಕಥೆಯನ್ನು ಹೇಳಿದರೆ, ಇಲ್ಲವೆ, ತಮಾಷೆಯಾಗಿ ಮಾತನಾಡಿದರೆ, ನಮ್ಮಂತೆಯೇ ನೀವೂ ಕೇಕೇ ಹಾಕಿಕೊಂಡು ನಗಬಾರದು.

ಚಂಡ:—ಹಾಗಾದರೆ, ಸ್ವಾಮಿ! ದಯಯಿಟ್ಟು ಆ ಗಂಗೆಯ ಕಥೆಯನ್ನು ಮಾತ್ರ ಹೇಳಬೇಡಿರಿ. ದೇವರಾಣೆ! ನೀವೇನಾದರೂ, ಆ ಕಥೆಯನ್ನು ಹೇಳಿದರೆ, ನಾನು ನಗದೆ ಇರಲು ಆಗುವುದೇ ಇಲ್ಲ. ನಾವು ಇಪ್ಪತ್ತು ವರ್ಷಗಳಿಂದಲೂ ಆ ಕಥೆಯನ್ನು ಕೇಳಿ ಕೇಳಿ, ಬೇಕಾದಷ್ಟು ನಕ್ಕು ನಕ್ಕು ಸಾಕಾಗಿದ್ದರೂ, ಅದನ್ನು ನೆನೆಸಿಕೊಂಡಾಗಲೆಲ್ಲಾ ನಗುವು ಬರುವುದು. ಹಾ! ಹಾ! (ನಗುವನು.)

ದೇವ:—ಹಾ! ಹಾ! ಹಾ!! ಆ ಕಥೆಯು ಬಹು ಸ್ವಾರಸ್ಯವಾಗಿದೆಯಲ್ಲವೆ? ಹೋಗಲಿ, ಅದೊಂದಕ್ಕೆ ಮಾತ್ರ ನೀನು ನಗಬಹುದು. ಇನ್ನೇನು? ಆದರೂ ನೀನು ಬಹಳ ಎಚ್ಚರಿಕೆಯಿಂದಿರಬೇಕು. ಮರೆಯಬೇಡ. ಒಳ್ಳೆಯದು, ಎಲ್ಲಿ? ನಮ್ಮ ಅತಿಥಿಗಳಲ್ಲಿ ಯಾರಾದರೊಬ್ಬರು, ಒಂದು ಬಟ್ಟಲು ಪಾನಕವನ್ನು ಅಪೇಕ್ಷಿಸುವರೆಂದು ಊಹಿಸುವ! (ಚಂಡನನ್ನು ನೋಡಿ) ಒಂದು ಬಟ್ಟಲು ಪಾನಕವನ್ನು ಕೊಡುವಿರಾ? (ಚಂಡನು ಸುಮ್ಮನೆ ನಿಂತಲ್ಲೇ ನಿಂತಿರುವನು) ಹೂ, ಅದೇಕೆ, ಚಲಿಸದೆ ಸುಮ್ಮನಿರುವೆ?

ಚಂಡ:—ಇದು ನಕಲಿಯ ವಿಷಯ! ನಿಜವಾಗಿ ಎಲ್ಲರೂ ಊಟಕ್ಕೆ ಕುಳಿತುಕೊಳ್ಳಲಿ, ಆಗ ನಾನು ಪಾದರಸದಂತೆ, ಸಿಂಹದಂತೆ, ಧೈರ್ಯವಾಗಿ ಓಡಾಡುವೆನು. ಹೆದರುವುದೇ ಇಲ್ಲ.

ದೇವ:—ಏನು, ಯಾರೂ ಚಲಿಸುವ ಹಾಗಿಲ್ಲವೊ?

ಗನೆಯ ಸೇವಕ:—ನಾನು ಈ ಸ್ಥಳವನ್ನು ಬಿಟ್ಟುಹೊರಡಕೂಡದಷ್ಟೆ?

೨ ನೆಯ ಸೇವಕ:—ಅದು ನನ್ನ ಕೆಲಸವಲ್ಲವಲ್ಲ ?

೩ ನೆಯ ಸೇವಕ:—ಅದೇನೊ, ನನ್ನ ಕೆಲಸವಲ್ಲವೇ ಅಲ್ಲ.

ಚಂಡ:—ಸರಿ, ಅದು ಖಂಡಿತವಾಗಿಯೂ ನನ್ನ ಕೆಲಸವಲ್ಲ.

ದೇವ:—ಎಲೊ, ಮುಠ್ಠಾಳರಾ ! ನಿಮ್ಮ ಕೆಲಸವೇ ನಿಮಗೆ ತಿಳಿಯದೆ ಹೊಡೆದಾಡುತ್ತಿರುವಿರಾ ? ಸರಿ! ಭೋಜನಕ್ಕೆ ಕುಳಿತವರು ಉಪವಾಸ ಮಾಡಬೇಕಾಗುವುದು ! ಅದೇನು ? ಅಂಗಳಕ್ಕೆ ಗಾಡಿಯು ಬಂದಂತಿದೆ. ಗಾಂಪರಾ ! ನಿಮ್ಮ ನಿಮ್ಮ ಕೆಲಸಕ್ಕೆ ನೀವು ಹೊರಡಿರಿ. ನಾನು ಹೋಗಿ ಬಾಗಿಲಲ್ಲೇ ನನ್ನ ಮಿತ್ರನ ಮಗನನ್ನೂ ಅವನ ಸ್ನೇಹಿತನನ್ನೂ ಇದಿರ್ಗೊಂಡು ಕರೆತರುವೆನು.

(ದೇವದತ್ತನು ಹೊರಟುಹೋಗುವನು)

ಚಂಡ:—ಭಗವಂತನಾಣೆ ! ನನ್ನ ಕೆಲಸವೇನೆಂಬುದೇ ನನಗೆ ಮರೆತುಹೋಯಿತು.

೧ ಸೇ:—ನನ್ನ ಆ ಹಾಳು ಜಾಗವು ಯಾವದಪ್ಪಾ ?

೨ ಸೇ:—ನನ್ನ ಕೆಲಸವೇನು ? ಎಲ್ಲೆಲ್ಲೂ ಇರಬೇಕಾದುದಲ್ಲವೆ? ಸರಿ, ಸರಿ. ನನಗೆ ಇಷ್ಟಬಂದಲ್ಲಿ ಇರುವೆನು.

[ಸೇವಕರು ಹೆದರಿದವರಂತೆ ಸಿಕ್ಕಸಿಕ್ಕಲ್ಲಿಗೆ ದಿಕ್ಕೆಟ್ಟು ಓಡಿಹೋಗುವರು.
ಒಬ್ಬ ಸೇವಕನು ಕಯ್ಯಲ್ಲಿ ಲಾಂದ್ರವನ್ನು ಹಿಡಿದು, ರಾಮವರ್ಮ, ಪ್ರಿಯಸೇನರೊಡನೆ ಬರುವನು.]

ಸಂಗಡ ಬಂದ ಸೇವಕನು:—ಸ್ವಾಮಿ ! ಹೀಗೆ ದಯಮಾಡಬೇಕು.

ಪ್ರಿಯ:—ಈ ದಿನದ ರಗಳೆಗಳು ಕೊನೆಗೊಂಡಂತಾಯಿತು. ಈಗಲಾದರೂ ಸುಖಪ್ರಾಪ್ತಿಯಾಗಬಹುದಲ್ಲವೆ ? ರಾಮವರ್ಮನೆ ! ಈ ಭೋಜನ ಶಾಲೆಯು ಬಹಳ ಚೊಕ್ಕಟವಾಗಿದೆ. ಹಳೆಯದಾದರೇನು ? ಮನಸ್ಸಿಗೆ ಹರ್ಷವನ್ನು ಕೊಡುತ್ತಿದೆ.

ರಾಮ:—ಇದೇ, ದೊಡ್ಡ ದೊಡ್ಡ ಮಂದಿರಗಳ ಗತಿ ? ಆಡಂಬರ

ದಿಂದ ಯಜಮಾನನು ದರಿದ್ರನಾದರೆ, ಕೊನೆಗೆ ಆ ಮನೆಯು ಪ್ರಯಾಣಿಕರಿಂದ ತೆರಿಗೆಯನ್ನು ತೆಗೆದುಕೊಳ್ಳುವ ಬಡಭೋಜನಶಾಲೆಯಾಗುವುದು.

ಪ್ರಿಯ:—ಅಹುದು. ಈ ಶೃಂಗಾರಗಳಿಗೆಲ್ಲಾ ನಾವು ತಾನೆ ದುಡ್ಡನ್ನು ತೆರಬೇಕು ಎಷ್ಟೋ ಭೋಜನಶಾಲೆಗಳನ್ನು ನಾನು ನೋಡಿರುವೆನು. ಬಳಿಯಕಲ್ಲಿನ ಮೇಜಾಗಳು, ಸೋಫಾಗಳು, ತಸ್ವೀರುಗಳು, ಕುರ್ಚಿಗಳು, ಏನೇನೋ ಇರುವುವು. ಅದೆಲ್ಲಾ ನಮಗೆ ಉಪಯೋಗವಿಲ್ಲದಿದ್ದರೂ ನಾವು ಕೊಡಬೇಕಾಗುವ ಹಣವು ಮಾತ್ರ ಬಹಳ ಹೆಚ್ಚೇ ಆಗುವುದು.

ರಾಮ:—ಪ್ರಿಯಸೇನ ! ಪ್ರಯಾಣಿಕರು ಎಲ್ಲಿಗೆ ಹೋದರೂ ದಂಡವನ್ನು ತೆರಲೇಬೇಕು. ಭೇದವೇನೆಂದರೆ, ಉತ್ತಮವಾದ ಭೋಜನಶಾಲೆಗಳಲ್ಲಿ ದುಡ್ಡನ್ನು ತೆಗೆದುಕೊಂಡರೂ, ಒಳ್ಳೆಯ ಪದಾರ್ಥಗಳನ್ನು ಕೊಡುತ್ತಾರೆ. ಕಷ್ಟವಿಲ್ಲ. ಕೆಟ್ಟ ಸ್ಥಳಗಳಲ್ಲಿ ದುಡ್ಡನ್ನು ತೆಗೆದುಕೊಂಡರೂ ಹೊಟ್ಟೆಗೆ ಹಾಕದೆ ಕಳುಹಿಸುತ್ತಾರೆ. ಅಷ್ಟೇ ತಾರತಮ್ಯವು.

ಪ್ರಿಯ:—ನೀನು ಭೋಜನಶಾಲೆಗಳಲ್ಲಿಯೇ ಬಳೆದವನು. ಆದರೂ, ನನಗೊಂದು ವಿಷಯವು ಪರಮಾಶ್ಚರ್ಯವಾಗಿದೆ. ನಿನಗೆ ಜಾಣ್ಮೆಯೂ, ಬೇಕಾದಷ್ಟು ಅವಕಾಶವೂ ಇದ್ದರೂ ನೀನೇಕೆ ಸ್ತ್ರೀಸಮುದಾಯದಲ್ಲಿ ಧೈರ್ಯಹೀನನಾಗಿ ವರ್ತಿಸುವಿ ?

ರಾಮ:—ಅದೇ ನನಗೆ ಬರುವ ಗೋಳು. ನೀನೇ ಹೇಳು ? ನಾನು ಕಾಲೇಜು, ತಪ್ಪಿದರೆ, ಭೋಜನಶಾಲೆ, ಇವುಗಳಲ್ಲೇ ಬಳೆದಿರುತ್ತೇನೆ. ನನಗೆ ಸುಂದರಿಯರಾದ ಸ್ತ್ರೀಯರಲ್ಲಿ ವಿಶೇಷ ಬಳಿಕೆಗೆ ಅವಕಾಶವೇ ಇಲ್ಲ. ನನ್ನ ತಾಯಿಯಲ್ಲದೆ, ಬೇರೊಬ್ಬ ಗೌರವಸ್ಥಳಾದ ಸ್ತ್ರೀಯೊಡನೆ ನಾನು ಎಂದೂ ಇರಲಿಲ್ಲ. ನನಗೆ ಧೈರ್ಯವು ಹೇಗೆ ಬಂದೀತು ? ಇನ್ನೊಂದು ಬಗೆಯ ಸ್ತ್ರೀಯರಲ್ಲಿ ನಿನಗೆ ತಿಳಿದಿದೆಯಷ್ಟೆ ?

ಪ್ರಿಯ:—ಆ ಜನರಲ್ಲಿ, ಓಹೊ! ಹೊ! ನಿನ್ನ ಹಾವಳಿಯೇ ಹಾವಳಿ.

ರಾಮು:—ಅವರು ನಮ್ಮವರಷ್ಟೆ ?

ಪ್ರಿಯ:—ಮಾನಿಷ್ಟರಾದ ಕುಲಸ್ತ್ರೀಯರ ಸಮುದಾಯಲ್ಲಿ, ಅದೇಕೆ ನೀನು ಹುಚ್ಚುಹುಚ್ಚಾಗಿ ಬೆದರಿ ನಡುಗುವಿ ? ಅವರ ಕಣ್ಣೆದುರಿನಿಂದ ತಪ್ಪಿಸಿ ಕೊಂಡು ಓಡಲು ಸರ್ವಪ್ರಯತ್ನವನ್ನೂ ಮಾಡುವಂತೆ ಕಾಣಿಸುವೆಯಲ್ಲವೆ ? ಅದೇಕೆ ?

ರಾಮು:—ಏತಕ್ಕೆಂದು ಹೇಳಲಿ ? ಅವರೆದುರಿಗೆ ಇರುವುದು ನನಗೆ ಹಿತಕರವಾಗಿರುವುದಿಲ್ಲ. ಆದುದರಿಂದಲೇ ಓಡಿಹೋಗಲು ಪ್ರಯತ್ನಪಡು ತ್ತೇನೆ. ಸ್ತ್ರೀಸಮೂಹದಲ್ಲಿ ಮೌನವನ್ನು ತ್ಯಜಿಸಬೇಕೆಂದು ಎಷ್ಟೆಷ್ಟೋ ಪ್ರಯತ್ನಪಡುತ್ತೇನೆ. ಎಷ್ಟೋ ದೃಢಸಂಕಲ್ಪಮಾಡುತ್ತೇನೆ. ಆದರೆ ಸ್ತ್ರೀಯೊಬ್ಬಳ ಕಡೆಗಣ್ಣಿನ ನೋಟವು ನನ್ನ ಮೇಲೆ ಬಿದ್ದರೆ, ನನ್ನ ಸಂಕಲ್ಪವು ಹಾರಿಹೋಗುವುದು ; ಬಾಯಿಂದ ಮಾತೇ ಹೊರಡುವುದಿಲ್ಲ. ಪೋಕರಿ ಯಾದವನು ವಿನಯಸಂಪನ್ನನಂತೆ ನಟಿಸಬಹುದು. ವಿನಯಸಂಪನ್ನನು ಪೋಕರಿಯಂತೆ ನಟಿಸಲು ಬಹಳ ಕಷ್ಟವಲ್ಲವೆ ? ಅದು ಎಂದಿಗೂ ಸಾಧ್ಯ ವಲ್ಲವೆಂದು ನನಗೆ ತೋರುವುದು.

ಪ್ರಿಯ:—ಭೋಜನಶಾಲೆಯ ಚಾಕರಳೊಡನೆಯೂ, ಮುಸುರೆಯ ನ್ನು ತೊಳೆಯುವಳೊಡನೆಯೂ, ಕೋಣನಮುಂದೆ ಕಿನ್ನರಿ ಬಾರಸಿದರು— ಎನ್ನುವಂತೆ, ಏನೇನೊ ಸೊಗಸೂ ಸ್ವಾರಸ್ಯವೂ ಆದ ವಿಷಯಗಳನ್ನು ಹೇಳುವಿಯಲ್ಲವೆ ? ಅದರಲ್ಲಿ ಅರ್ಧಭಾಗವನ್ನಾದರೂ, ಘನತೆಯುಳ್ಳ ಸ್ತ್ರೀ ಯರೊಡನೆ ಹೇಳಿದರೆ.........

ರಾಮು:—ಅದೇ ನನ್ನ ಕಯ್ಯಲ್ಲಾಗದ ಕಾರ್ಯವು. ಅವರನ್ನು ಕಂಡೊಡನೆಯೇ ನನಗೆ ರಕ್ತಚಲನೆಯು ನಿಧಾನವಾಗುವುದು. ಧೂಮ ಕೇತು ಜ್ವಾಲಾಮುಖಿಗಳೊಡನೆಯಾದರೂ ಮಾತನಾಡುವೆನು, ಅಲಂಕೃತ ಳಾಗಿ ಶೋಭಿಸುವ ಸಭ್ಯಸ್ತ್ರೀಯೊಡನೆ ಒಂದು ಮಾತನ್ನೂ ಆಡಲಾರೆನು.

ಅವಳು ನನ್ನ ಭಾವನೆಗೆ ಅತ್ಯದ್ಭುತವಸ್ತುವು. ಜಗತ್ಸೃಷ್ಟಿಯಲ್ಲಿ ಅಂತಹ ವಸ್ತುವು ಮತ್ತೊಂದಿಲ್ಲ.

ಪ್ರಿಯ:—ಹಾಗಾದರೆ, ನಿನಗೆ ಅಂತ ಸ್ತ್ರೀಯೊಡನೆ ವಿವಾಹವಾಗುವ ಸಂಭವವೆಲ್ಲಿ ?

ರಾಮು:—ಇಲ್ಲವೇ ಇಲ್ಲ. ಮಹಾರಾಜರುಗಳು ಅಥವ ಚಕ್ರವರ್ತಿಗಳಿಗಾಗಿ ರಾಯಭಾರಿಗಳು ಕೆಲಸಮಾಡುವಂತೆ, ನನಗೋಸುಗ ಯಾರಾದರೂ ಸಹಾಯಮಾಡಿ ವಿವಾಹವನ್ನು ಮಾಡಿಸಬೇಕು. ಇಲ್ಲವಾದರೆ ನಮ್ಮ ಪೂರ್ವಿಕರಲ್ಲಿದ್ದ ಪದ್ಧತಿಯಂತೆ ವಿವಾಹಾನಂತರವೇ ದಂಪತಿಗಳಿಗೆ ಪರಿಚಯವಾಗಬೇಕು. ಒಬ್ಬ ಸ್ತ್ರೀಯನ್ನು ತಿಂಗಳುಗಟ್ಲೆ ಆಶ್ರಯಿಸಿ, ಸವಿನುಡಿಗಳನ್ನಾಡಿ, ಮೆಚ್ಚಿಸಿ "ನನ್ನನ್ನು ಮದುವೆಯಾಗುವೆಯಾ ?" ಎಂದು ಕೇಳುವುದೆ ? ಚೀ! ನನ್ನಿಂದ ಈ ಕೆಲಸಗಳು ಎಂದಿಗೂ ಆಗವು.

ಪ್ರಿಯ:—ಅಯ್ಯೋ, ಪಾಪ ! ನೀನು ಈಗ ನಿಮ್ಮಪ್ಪನ ಮಾತನ್ನು ಮಿೂರಲಾರದೆ ಬಂದಿರುವೆ. ನಿರ್ಮಲೆಯೊಡನೆ ಹೇಗೆ ಮಾತುಕಥೆಗಳನ್ನು ಆಡಬೇಕೆಂದು ನಿಶ್ಚೈಸಿರುವೆ ?

ರಾಮು:—ನಿಶ್ಚಯವೇನು? ಎಲ್ಲರೊಡನೆ ಇರುವಂತೆಯೇ ಇರುವೆನು. ಏನನ್ನಾದರೂ ಪ್ರಶ್ನೆಮಾಡಿದರೆ, ಉಂಟು ಅಥವಾ ಇಲ್ಲ, ಎರಡರೊಳಗೊಂದು ಉತ್ತರವನ್ನು ಕೊಡುವೆನು. ಉಳಿದ ವಿಷಯಗಳಲ್ಲಿ, ಅವಳ ಮುಖವನ್ನು ಸಹ ನೋಡುವುದಿಲ್ಲ. ನನಗೆ ಅಷ್ಟು ಧೈರ್ಯವೇ ಇಲ್ಲ.

ಪ್ರಿಯ:—ಏನಾಶ್ಚರ್ಯ ! ಮಿತ್ರರಲ್ಲಿ ಅಸಾಧಾರಣಪ್ರೀತಿವಿಶ್ವಾಸಗಳನ್ನುಳ್ಳ ನಿನಗೆ ಪ್ರಣಯದಲ್ಲೇಕೆ ಅನಾದರಣೆ ?

ರಾಮು:—ಮುಚ್ಚುಮರೆಯೇಕೆ ? ನಿನ್ನ ಸುಖವನ್ನು ಪೂರ್ತಿಮಾಡಲೋಸುಗವೇ, ನಿನ್ನೊಡನೆ ಈರಾತ್ರಿ ಹೊರಟುಬಂದೆನು. ಸ್ವಾರ್ಥದಿಂದೆಂದಿಗೂ ಅಲ್ಲ. ಕಮಲಾವತಿಯು ನಿನ್ನನ್ನು ನೋಡಿದಾಗಲಿಂದಲೂ ಪ್ರೀತಿಸುತ್ತಿರುವಳು. ನಿಮ್ಮ ಮನೆಯವರಿಗೆ ಆ ಸಂಗತಿಯು ತಿಳಿಯದು.

ಪ್ರಿಯ:—ರಾಮನೆ! ನನ್ನ ವ್ಯಾಮೋಹವನ್ನು ಅಡಗಿಸಿಕೊಳ್ಳು ವೆನು. ನಾನು ಧನಾಕಾಂಕ್ಷಿಯಾದ ಚಂಡಾಲಪಾಪಿಯಾಗಿದ್ದರೆ, ನಿನ್ನ ಸಾಹಾಯ್ಯವನ್ನು ಖಂಡಿತವಾಗಿಯೂ ಬೇಡುತ್ತಿರಲಿಲ್ಲ. ಕಮಲಾವತಿಯೊ ಬ್ಬಳೇ ನನಗೆ ಬೇಕಾಗಿರುವುದು. ಅವಳ ಆಸ್ತಿಯಲ್ಲ. ಅವಳ ತಂದೆಯ ಅನುಮತಿಯಿಂದಲೂ ಅವಳ ಒಪ್ಪಿತದಿಂದಲೂ, ಕಮಲಾವತಿಯು ನನ್ನವಳೇ ಅಲ್ಲವೆ?

ರಾಮ:—ಭಾಗ್ಯಶಾಲಿಯೆ! ನಿನ್ನನ್ನು ನೋಡಿ ಮೋಹಪರವಶಳಾ ಗದ ಸ್ತ್ರೀಯು ಇರುವಳೆ? ಸ್ತ್ರೀಜಾತಿಯನ್ನು ನಾನು ಪೂಜಿಸದಿದ್ದರೇನಾದುದು? ನಾನು ಯಾರನ್ನು ಹೆಚ್ಚಾಗಿ ಪ್ರೀತಿಸುತ್ತೇನೊ, ಅವರೊಡನೆಯೇ ಮಾತ ನ್ನಾಡಲು ಹೆದರುವುದು ನನ್ನ ಹಣೆಯಬರಹವಲ್ಲವೆ? ಮಾತನಾಡಲುಪಕ್ರಮಿಸಿ ದರೆ, ಬಿಕ್ಕಲುಬಂದು, ಪ್ರಾಣವೇ ಹೋಗುವಂತಾಗುವುದು. ಮುಖವು ಜೋಲುಬೀಳುವುದು. ಆಗ ಯಾವಳು ನನ್ನನ್ನು ನೋಡಿದರೂ ಪ್ರೀತಿಸಳು. ನಾನು ಘನತೆಯುಳ್ಳ ಸ್ತ್ರೀಯರನ್ನು ಪ್ರೀತಿಸಲು ಎಷ್ಟು ಪ್ರಯತ್ನಿಸುವೆನೋ? (ದೇವದತ್ತನು ಬರುತ್ತಿರುವನು) ಛಿ! ನಮ್ಮನ್ನು ಹಿಂಸಿಸಲು ಇವನೊ ಬ್ಬನು ಬರುವನು.

(ದೇವದತ್ತನು ಬರುವನು)

ದೇವ:—ಸ್ವಾಮಿ, ಸ್ವಾಗತ. ಸುಸ್ವಾಗತ. ರಾಮವರ್ಮರಾರು? (ಪ್ರಿಯನನ್ನು ಕುರಿತು) ತಾವೊ? ಅವರೊ? ನನ್ನ ಪದ್ಧತಿಗಳನ್ನು ನೋಡಿ ದಿರಷ್ಟೆ? ಆಪ್ತರನ್ನೂ ಇಷ್ಟರನ್ನೂ ಬಾಗಿಲಿನಲ್ಲೇ ಇದಿರ್ಗೊಂಡು ಒಳಕ್ಕೆ ಕರೆತರುತ್ತೇನೆ. ಅವರ ಕುದುರೆ, ಪೆಟ್ಟಿಗೆ, ಸಾಮಾನುಗಳನ್ನು ಬಹಳ ಜೋಪಾ ನವಾಗಿಡಲು ತಕ್ಕ ಏರ್ಪಾಡನ್ನು ಮಾಡಿರುತ್ತೇನೆ. ಎಲ್ಲವೂ ಸರಿಯಷ್ಟೆ?

ರಾಮ:—(ಸ್ವಗತಂ)—ಪ್ರಾಯಶಃ ಸೇವಕರಿಂದ ನನ್ನ ಹೆಸರನ್ನು ಇವನು ತಿಳಿದುಕೊಂಡಿರಬಹುದು (ಪ್ರಕಾಶಂ)—ನಿನ್ನ ಎಚ್ಚರಿಕೆಯನ್ನೂ, ಸತ್ಕಾರವನ್ನೂ ನಾನು ಮೆಚ್ಚಿದೆನು. (ಪ್ರಿಯಸೇನನನ್ನು ನೋಡಿ) ಪ್ರಿಯನೆ!

ಬೆಳಗಾದ ಕೂಡಲೇ ಈ ಕೊಳಕು ಬಟ್ಟೆಯನ್ನು ತೆಗೆದುಹಾಕಬೇಕು ನನಗೆ ಇದರಿಂದ ಬಹಳ ನಾಚಿಕೆಯಾಗುವುದು.

ದೇವ:—(ಸ್ವಗತಂ)ಇವನೇ ರಾಮುವರ್ಮನಿರಬಹುದು. (ಪ್ರಕಾಶಂ) ರಾಮುವರ್ಮನೆ, ನೀನು ಇಲ್ಲಿ ಸರ್ವಸ್ವತಂತ್ರವನ್ನೂ ವಹಿಸಿ ಇರಬಹುದು. ನಿನ್ನ ಮನೆಯೆಂದೇ ಭಾವಿಸು.

ಪ್ರಿಯ:—(ರಾಮುವರ್ಮನಿಗೆ) ನೀನು ಹೇಳಿದುದೇಸರಿ. "ಮೊದಲೇಟು ಬಲವಾದರೆ, ಅರ್ಧಜಯು" ಎಂಬುದೇ ನಿಜ. ನಾನೂ ಬಿಳೀಜರತಾರಿಯುಬಟ್ಟೆಯಿಂದಲೇ ಕಾರ್ಯ್ಯಾರಂಭಮಾಡುವೆನು.

ದೇವ:—ರಾಮುವರ್ಮ ಪ್ರಿಯಸೇನರೆ ! ನೀವು ಸ್ವಲ್ಪವೂ ಸಂಕೋಚಪಡಲಾಗದು. ಇದು ಸ್ವೇಚ್ಛಾವಿಹಾರದ ಸುಖನಿವಾಸವು. ಇಲ್ಲಿ ನಿಮ್ಮ ಮನವೊಪ್ಪುವಂತೆ ನೀವು ವರ್ತಿಸಬಹುದು.

ರಾಮು:—(ಪ್ರಿಯಸೇನನಿಗೆ) ನಾವು ಮೊಟ್ಟಮೊದಲೇ ಕದನವನ್ನು ಭಯಂಕರವಾಗಿ ಆರಂಭಿಸಿದರೆ, ಕದನವು ಮುಗಿಯುವುದರೊಳಗಾಗಿ ಯುದ್ಧಸಾಮಗ್ರಿಗಳು ಮುಗಿಯಬಹುದು. ಗೆಲುವ ಸಂಭವವಿಲ್ಲದೆ ಓಡಿಹೋಗಬೇಕಾದರೆ, ಜರತಾರಿಯ ಉಡುಪು ಸಾಹಾಯ್ಯಮಾಡುವುದರಿಂದ ಅದನ್ನು ಹಾಗೆಯೆ ಕಾಪಾಡಿಟ್ಟಿರುತ್ತೇನೆ.

ದೇವ:—ಏನು, ಏನು ? ಯುದ್ಧದಿಂದ ಓಡಿಹೋಗುವ ವಿಷಯವನ್ನು ಕುರಿತು ಮಾತನಾಡಿದಿರಲ್ಲವೆ ? ನಿಮ್ಮ ಮಾತನ್ನು ಕೇಳಿ ನನಗೆ, ನಾವು ದಿಂಬ ಕೋಟೆಯನ್ನು ಮುತ್ತಿಗೆ ಹಾಕಲು ಹೊರಟಾಗ, ಸೇನಾನಾಯಕನಾಗಿದ್ದ ವೀರವರ್ಮನ ವಿಷಯವು ನೆನಪಿಗೆ ಬಂತು. ಅವನು ಸೈನಿಕರನ್ನು ಬರಮಾಡಿ.........

ರಾಮು:—(ಪ್ರಿಯಸೇನನಿಗೆ) ನಾನೂ ಊದಾಬಣ್ಣದಂಗಿಯನ್ನು ತೊಟ್ಟರಾಗದೋ ?

ದೇವ:—ನಾನು ಹೇಳುವುದನ್ನು ಕೇಳಿರಿ. ಅವನು ಮೊದಲು ಸೈನಿ

ಕರನ್ನು ಬರಮಾಡಿ, ಸೈನ್ಯದಲ್ಲಿ ಸುಮಾರು ೫,೦೦೦ ಜನರಿದ್ದರು—ಏನು...

ಪ್ರಿಯ:—(ರಾಮವರ್ಮನಿಗೆ) ಆಗದು. ಅದು ನಿನಗೆ ಚೆನ್ನಾಗಿ ಒಪ್ಪುವುದಿಲ್ಲ.

ದೇವ:—ಛೀ! ನಾನು ಹೇಳುವುದನ್ನೇ ಕೇಳುವುದಿಲ್ಲವಲ್ಲ! ಸ್ವಾಮಿ ಇಲ್ಲಿ ಕೇಳಿರಿ. ನಾನು ಹೇಳುತ್ತಿದ್ದಂತೆ ಸುಮಾರು ೫,೦೦೦ ಜನರಿದ್ದ ಸೈನ್ಯವೆಲ್ಲವನ್ನೂ ಬರಮಾಡಿ........

ರಾಮ:—(ದೇವತ್ತನ ಮಾತನ್ನು ಲಕ್ಷಿಸದೆ, ಪ್ರಿಯಸೇನನನ್ನು ಕುರಿತು) ಹುಡುಗಿಯರು, ಒಳ್ಳೆ ಬಟ್ಟೆಯನ್ನು ಹಾಕಿಕೊಂಡಿರುವರನ್ನು ಕಂಡರೆ.........

ದೇವ:—ಛೀ! ನಾನು ಹೇಳುವುದನ್ನು ಕೇಳುವುದೇ ಇಲ್ಲವೆ! (ಗಟ್ಟಿಯಾಗಿ) ಸೈನ್ಯದಲ್ಲಿ ಸುಮಾರು ೫.೦೦೦ ಜನರಿದ್ದರು. ಮದ್ದು ಗುಂಡುಗಳೂ ಫಿರಂಗಿಯೂ ಇದ್ದುವು. ಉಳಿದ ಸಾಮಗ್ರಿಗಳೂ ಬಹಳವಾಗಿದ್ದುವು. ವೀರವರ್ಮನು ಬಲಸೇನನನ್ನು ನೋಡಿ, ಬಲಸೇನನು ಆರೆಂಬುದು ತಮಗೆ ತಿಳದೇ ಇರಬಹುದು—ಆಃ! ಬಲಸೇನನೆ! ಏನು ಹೇಳಲಿ? ಅಷ್ಟು ಸೈನ್ಯವಿದ್ದರೂ ಅದರಿಂದ ಒಂದು ತೊಟ್ಟು ರಕ್ತವಾದರೂ ಕೆಳಗಬೀಳದಂತೆ, ನಡೆಯಿಸಿಕೊಂಡು ಹೋಗದಿದ್ದರೆ ನನಗೆ ಬೇರೆ ಹೆಸರನ್ನು ಇಡಿ. ಹಾಗೆಶ...

ರಾಮ:—(ದೇವದತ್ತನನ್ನು ಕುರಿತು) ನನಗೊಂದು ಬಟ್ಟಲು ಷರಬತ್ತನ್ನು ದಯಪಿಟ್ಟು ಕೊಡಿ. ನಾವು ತಮ್ಮ ಮುತ್ತಿಗೆಯ ವಿವರವನ್ನು ಆಮೇಲೆ ಕೇಳುವೆವು.

ದೇವ:—ಷರಬತ್ತೆ! (ಸ್ವಗತಂ) ಎಂತಹ ವಿಚಿತ್ರ. ಇಂತಹ ವಿನಯಸಂಪನ್ನನನ್ನು ಕಂಡೇ ಇರಲಿಲ್ಲ.

ರಾಮ:—ಅಹುದು, ನಾವು ದಣಿದು ಬಂದಿರುವುದರಿಂದ ಷರಬತ್ತು ಬಹಳ ಹಿತಕರವಾಗಿರುತ್ತೆ. ಇದು ಸ್ವೇಚ್ಛಾವಿಹಾರದ ಸುಖನಿವಾಸವಷ್ಟೆ!

ದೇವ:—(ತೆಗೆದುಕೊಂಡುಬಂದು) ಸ್ವೀಕರಿಸಿ.

ರಾಮು:—(ಸ್ವಗತಂ) ಇದು ಹೆಸರಿಗೆಮಾತ್ರ ಸ್ವೇಚ್ಛಾವಿಹಾರ ಸುಖ ನಿವಾಸವು. ಇವನು ನಾನು ಕೇಳಿದ್ದಷ್ಟಲ್ಲದೆ ಮತ್ತೇನನ್ನೂ ಕೊಡುವಂತೆ ತೋರುವುದಿಲ್ಲ.

ದೇವ:—(ತಾನೊಂದು ಒಟ್ಟಲನ್ನು ಹಿಡಿದು) ಷರಬತ್ತು ರುಚಿ ಯಾಗಿದೆಯಷ್ಟೆ? ಇದನ್ನು ನಾನೇ, ಸ್ವತಃ, ತಯಾರ್ಮಾಡಿದ್ದೇನೆ ಅದಕ್ಕೆ ಹಾಕಿರುವ ಸಾಮಗ್ರಿಗಳೆಲ್ಲವೂ ಸರಿಯಾಗಿವೆಯಷ್ಟೆ? ನಾನು ಷರಬತ್ತನ್ನು ಚೆನ್ನಾಗಿ ತಯಾರ್ಮಾಡುವೆನಲ್ಲವೆ? ನಿಮಗೆ ಸುಖವಾಗಲೆಂದು ನಾನು ಕುಡಿಯುತ್ತೇನೆ. ನನಗೆ ಸುಖವುಂಟಾಗಲೆಂದು ನೀವು ಕುಡಿಯಿರಿ. (ಕುಡಿ ಯುವನು)

ರಾಮು:—(ಸ್ವಗತಂ) ಇದೇನು ನಾಜುಕಿಗೇಡು? ಇದೆಲ್ಲೊ ವಿಚಿತ್ರ ವಸ್ತು! ಆದರೂ ಬಲು ಹಾಸ್ಯಗಾರನೆಂದು ತೋರುವುದು. ಸ್ವಲ್ಪ ವಿನೋದವನ್ನು ಮಾಡುವ. (ಪ್ರಕಾಶಂ) ಆಗಲಪ್ಪಾ ಕುಡಿಯುತ್ತೇನೆ. (ಕುಡಿಯುವನು)

ಪ್ರಿಯ:—(ಸ್ವಗತಂ) ಇದೇನು? ಇದೇನು? ಈ ಅಧ್ಯಕ್ಷನು ನಮಗೆ ಸರಿಸಮಾನನಂತೆ ಇರಲು ಪ್ರಯತ್ನಪಡುತ್ತಿರುವನು. ನಮಗೆ ಆ ಮನೆ ಯಲ್ಲಿ ದಾರಿಯನ್ನು ತೋರಿಸಿದವನು ಹೇಳಿದಮಾತು ನಿಜ. ಇವನು ಮಾನ ಮರ್ಯಾದೆಗಳನ್ನು ಮರೆತಂತಿದೆ. ಭೋಜನಶಾಲಾಧ್ಯಕ್ಷನಿಗೆ ಇಷ್ಟು ಅಟ್ಟ ಹಾಸವೇಕೆ?

ರಾಮು:—ಈ ಸುತ್ತಿನಲ್ಲಿ ನಿಮಗೇ ಕೆಲಸವು ಹೆಚ್ಚೆಂದು ತೋರು ವುದು. ಪ್ರಜಾಪ್ರತಿನಿಧಿಗಳನ್ನು ಚುನಾಯಿಸುವಾಗ ನಿಮಗೆ ಕೆಲಸದ ಗಲಭೆ ಯು ಬಹಳವಲ್ಲವೆ?

ದೇವ:—ನಾನು ಅದನ್ನೆಲ್ಲಾ ಬಿಟ್ಟಿರುವೆನು. ನಮಗಿಂತ ಉತ್ತಮ ರಾಗಿರುವವರು, ತಾವು ತಾವೇ ಚುನಾಯಿಸಿಕೊಂಡು ತಮ್ಮಲ್ಲೇ ಯಾರಾ ದರೂ ಪ್ರತಿನಿಧಿಗಳಾಗುವರು. ಬಡವರಾದ ನಮಗೆ ಅದರಲ್ಲೇನೂ ಕೆಲಸವಿಲ್ಲ.

ರಾಮು:—ಹಾಗಾದರೆ ರಾಜಕೀಯ ವಿಚಾರದಲ್ಲಿ ನಿಮಗೆ ವಿಶೇಷ ಅಕ್ಕರೆಯಿರುವಂತೆ ಕಾಣುವುದಿಲ್ಲ.

ದೇವ:—ನನಗೇನೋ ಸ್ವಲ್ಪವೂ ಅಕ್ಕರೆಯಿಲ್ಲ. ಪೂರ್ವದಲ್ಲಿ ನಾನು ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಬಹಳ ಹೊಡೆದಾಡುತ್ತಿದ್ದೆನು. ದಿನೇದಿನೇ ಕೆಡುತ್ತಾಬರುವ ರಾಜ್ಯಕ್ರಮಕ್ಕೆ ನಾನೊಬ್ಬನೇ ಹೊಡೆದಾಡಬೇಕಾಯಿತಲ್ಲದೆ, ಸ್ಥಿತಿಯೇನೋ ಅಭಿವೃದ್ಧಿಗೆ ಬರುವಂತೆ ಕಂಡು ಬರಲಿಲ್ಲ. ಆದುದರಿಂದ ಅದರ ಹಣೆಯಲ್ಲಿ ಬರದಂತೆ ಆಗಲೆಂದು ಎಲ್ಲವನ್ನೂ ಬಿಟ್ಟು ದೂರವಾದೆನು. ಅಂದಿನಿಂದ, ಹೈದರಾಲಿ, ಅಲ್ಲೀಖಾನ್, ಇವರುಗಳ ರಗಳೆಯನ್ನು ಕೇಳುವುದೇ ಇಲ್ಲ. ನನಗೆ ಇನ್ನೇನಾಗಬೇಕು, ಸ್ವಾಮಿ ?

ಪ್ರಿಯ:—ಉಪ್ಪರಿಗೆಯಮೇಲೆ ಉಂಡು, ಕೆಳಗೆ ಕುಡಿದು, ಒಳಗೆ ಮಿತ್ರರನ್ನು ಸತ್ಕರಿಸುತ್ತ, ಹೊರಗೆ ಅವರನ್ನು ಸಂತೋಷಪಡಿಸುತ್ತ, ನೀನೂ ಸಂತೋಷವಾಗಿ ಸಡಗರದಿಂದ ಜೀವಿಸುವೆಯಲ್ಲವೆ ?

ದೇವ:—ಸಡಗರವೇನೋ ಹೆಚ್ಚೇ ! ನನ್ನ ಮನೆಯ ಹಜಾರದಲ್ಲಿ ಪ್ರತಿದಿನವೂ, ಈ ಊರಿನಲ್ಲಿ ನಡೆಯುವ ಜಗಳಗಳ ಪಂಚಾಯಿತಿಯು ಇದ್ದೇ ಇರುವುದು. ಅರ್ಧ ಅಥವಾ ಮೂರುಪಾಲು ವ್ಯಾಜ್ಯಗಳನ್ನೆಲ್ಲಾ ನಾನೇ ತೀರ್ಮಾನಿಸುವೆನು.

ರಾಮು:—ನಿಮಗೆ ತರ್ಕಜ್ಞಾನವು ಚೆನ್ನಾಗಿರುವಂತಿದೆ !

ದೇವ:—ಅಹುದು. ತತ್ವಜ್ಞಾನವಿದೆ.

ರಾಮು:—(ಸ್ವಗತಂ)-ಭೋಜನಶಾಲಾಧ್ಯಕ್ಷನಿಗೂ ತತ್ವಜ್ಞಾನವಿರುವುದೆಂದು ಕೇಳಿದುದು ಈಗಳೇ !

ಪ್ರಿಯ:—ಅನುಭವಸ್ಥನಾದ ಸೇನಾನಾಯಕನಂತೆ ನೀನುಪ್ರಾಯಶಃ ಅವರ ಮೇಲೆ ನಾಲ್ಕೂಕಡೆಯಿಂದ ಬೀಳುವಿ. ಅವರಿಗೆ ನ್ಯಾಯಜ್ಞಾನವಿದ್ದರೆ, ತತ್ವಜ್ಞಾನದಿಂದ ಇದಿರಿಸುವಿ. ಅವರಿಗೇ ತತ್ವಜ್ಞಾನವಿದ್ದರೆ ಆಗೇನು ಮಾಡುವಿ? ತತ್ವಜ್ಞನೆ ! ನಿನಗೆ ಆಯುಸ್ಸು ಹೆಚ್ಚಲಿ.

ದೇವ:—ಬಹಳಸೊಗಸು. ಬಹು ಸಂತೋಷವಾಯಿತು. ನೀನು ಸೇನಾನಾಯಕನೆಂದು ಹೇಳಲು, ನನಗೆ ಬೆಲ್ಲಗಡಯುದ್ಧದಲ್ಲಿ ಸೇನಾನಾಯಕನಾಗಿದ್ದ ಪ್ರತಾಪವರ್ಮನ ನೆನಪು ಬರುವುದು. ಆ ಯುದ್ಧವನ್ನು ವರ್ಣಿಸುವೆನು ಕೇಳಿರಿ.

ರಾಮು:—ಆ ಯುದ್ಧವನ್ನು ವರ್ಣಿಸುವುದು ಹಾಗಿರಲಿ. ತತ್ವಜ್ಞರಾದ ತಮ್ಮ ಮನೆಯಲ್ಲಿ ಈಗ ಕೈಗೂ ಬಾಯಿಗೂ ಯುದ್ಧವನ್ನು ನಡೆಯಿಸಲು ಏನೇನು ಸಾಮಗ್ರಿಗಳು ಸಿದ್ಧವಾಗಿವೆ ?

ದೇವ:—ಭೋಜನವೊ ? (ಸ್ವಗತಂ) ನನ್ನ ಮನೆಗೆ ಬಂದ ಇವರು ನನ್ನನ್ನೇ ಹೀಗೆ ಕೇಳುವುದು ಬಲುಚೆನ್ನಾಗಿದೆ ?

ರಾಮು:—ಅಹುದು. ನನಗೆ ಹಸಿವು ಹೆಚ್ಚು. ಎರಡೇ ಹೊತ್ತಿನ ಊಟವನ್ನು ಈಗ ಒಂದೇವೇಳೆ ಮಾಡುವ ನಂಬಿಕೆ ಇದೆ.

ದೇವ:—(ಸ್ವಗತಂ) ಇಂತಹ ಲಜ್ಜೆಯಿಲ್ಲದ ನಾಯಿಗಳನ್ನು ನಾನೆಲ್ಲಿಯೂ ನೋಡಿಲ್ಲ. (ರಾಮುವರ್ಮನನ್ನು ನೋಡಿ) ಊಟದ ವಿಚಾರವು ನನಗೆ ತಿಳಿಯದು. ಅದನ್ನು ನನ್ನ ಹೆಂಡತಿಯೂ ಅವಳ ಸೇವಕಳೂ ನೋಡಿಕೊಳ್ಳುವರು. ಈ ವಿಷಯಕ್ಕೆ ಸಂಬಂಧಪಟ್ಟ ಸರ್ವಸ್ವಾತಂತ್ರ್ಯವನ್ನೂ ನಾನು ಅವರಿಗೇ ವಹಿಸಿಬಿಟ್ಟಿರುವೆನು.

ರಾಮು:—ಹೂ ! ಹೂ ! ಹಾಗೊ ?

ದೇವ:—ಅಹುದು. ಅವರೇ ಊಟಕ್ಕೆ ಏನೇನನ್ನು ಸಿದ್ಧಗೊಳಿಸಬೇಕೆಂದು ಯೋಚಿಸುತ್ತಿರಬಹುದು.

ರಾಮು:—ಹಾಗಾದರೆ ಅವರಿಗೆ ಕೆಲವು ಸಲಹೆಗಳನ್ನು ಕೊಡಲು ನಾನು ತಮ್ಮ ಅನುಮತಿಯನ್ನು ಕೇಳಿಕೊಳ್ಳುವೆನು. ಅದೇ ನನ್ನ ಪದ್ಧತಿಯು. ಪ್ರಯಾಣಕಾಲದಲ್ಲಿ ಊಟದ ಏರ್ಪಾಡುಗಳನ್ನು ನಾನೇ ಮಾಡಿಕೊಳ್ಳುವೆನು. ಎಲ್ಲಿ, ಅಡುಗೆಯವರನ್ನು ಬರಮಾಡಿರಿ. ಆಕ್ಷೇಪಣೆ ಏನೂ ಇರಲಾರದಷ್ಟೆ?

ದೇವ:—ಏನೂ ಇಲ್ಲ. ಆದರೂ ನನಗೆ ಒಂದು ಸಂದೇಹವುಂಟು. ನಮ್ಮ ಪರಿಚಾರಕಳಿಗೆ ಇಂತಹವೇಳೆಯಲ್ಲಿ ಮಾತುಕಥೆಗಳು ಬೇಡವಾಗಿರುವುವು. ಈಗ ನಾವು ಅವಳನ್ನು ಬರಮಾಡಿದರೆ ಅವಳು ನಮ್ಮನ್ನೆಲ್ಲಾ ಗದರಿಸಿ ಮನೆಯಿಂದ ಹೊರಗೆ ಓಡಿಸಿಬಿಡುವಳು.

ಪ್ರಿಯ:—ಎಲ್ಲಿ ? ಊಟಕ್ಕೆ ಯಾವಯಾವ ಪದಾರ್ಥಗಳು ಸಿದ್ಧವಾಗಿವೆ ? ನಿನ್ನಲ್ಲಿ ಪಟ್ಟಿಯಿದ್ದರೆ ಅದನ್ನು ನಮಗೆ ದಯವಿಟ್ಟು ಕೊಡು. ವ್ಯಾಕುಲಪಡಬೇಕಾಗಿಲ್ಲ. ನಾನು ಯಾವಾಗಲೂ ಅಡುಗೆಗೆ ತಕ್ಕಂತೆ ನನ್ನ ರುಚಿಯನ್ನು ಸರಿಮಾಡಿಕೊಳ್ಳುವೆನು.

ರಾಮ:—(ಆಶ್ಚರ್ಯದಿಂದ ದೇವದತ್ತನನ್ನು ನೋಡುತ್ತ) ಅಹುದು. ಅವನು ಹೇಳುವುದೇ ಸರಿ. ನನ್ನ ಪದ್ಧತಿಯೂ ಅದೇ ಆಗಿದೆ.

ದೇವ:—ಸ್ವಾಮಿ ! ನನಗೆ ನೀವು ಆಜ್ಞೆಯನ್ನು ಕೊಡಬಹುದು. ಈ ಸ್ಥಳದಲ್ಲಿ ತಮಗೆ ಅಧಿಕಾರವಿದೆ. ರಕ್ತಾಕ್ಷನೆ, ಈರಾತ್ರಿಯ ಊಟದ ಸಾಮಗ್ರಿಗಳ ಪಟ್ಟಿಯನ್ನು ತೆಗೆದುಕೊಂಡುಬಾ. ಪಟ್ಟಿಯನ್ನು ಬರೆದಿರುವೆಯಷ್ಟೆ ? ಪ್ರಿಯಸೇನನೆ, ನಿನ್ನ ನಡೆನುಡಿಗಳನ್ನು ನೋಡಿದರೆ, ನನ್ನ ಚಿಕ್ಕಪ್ಪ, ಸೇನಾಧೀಶ ಶ್ರೀಮಂತ ವರ್ಧಮಾನನ ನೆನಪು ಬರುವುದು. "ಊಟವು ಪೂರೈಸುವವರೆಗೂ ಅದರ ನಂಬುಗೆಯು ಇಲ್ಲ" ಎಂದು ಅವನು ಹೇಳುತ್ತಿದ್ದನು.

ಪ್ರಿಯ:—(ಸ್ವಗತಂ) ಎಲ್ಲದರಲ್ಲಿಯೂ ದೊಡ್ಡಸ್ಥಿಕೆಯೆ ! ಚಿಕ್ಕಪ್ಪನು ಶ್ರೀಮಂತನೂ ಸೇನಾಧೀಶನೂ ಆಗಿದ್ದನಂತೆ. ಇನ್ನೇನು ? ಅವನ ತಾಯಿಯು ಶ್ರೀಮಂತವಂಶದವಳೆಂದು ಹೇಳಬಹುದು. (ಪ್ರಕಾಶಂ) ಸರಿ. ಪಟ್ಟಿಯನ್ನು ಕೊಡು, ನೋಡುವ !

ರಾಮ:—(ಪಟ್ಟಿಯನ್ನು ಓದಿ) ಇದೇನು—ವಿಪರೀತ ? ಒಂದನೆಯ ಸಲಕ್ಕೆ–ಹೊ ! ಹೊ ! ಎರಡನೆಯ ಆವರ್ತಿಗೆ ಸರಿ. ಸರಿ. ಹೋ! ಹೋ! ಊಟವಾದ ಮೇಲೆ ತಿನ್ನಲು ಹಣ್ಣುಗಳು, ಇದೇನು ? ನಾವೇನು, ನಮ್ಮ

ಸಂಗಡ ನಾಟಕೋಟಿ ಶೆಟ್ಟಿಗಳನ್ನೂ ಶ್ರೀಮಂತರನ್ನೂ ಕರೆತಂದಿರುವೆವೆ? ಇಷ್ಟೆಲ್ಲಾ ನಮಗೇಕೆ? ಒಂದೆರಡು ಚೊಕ್ಕಟವಾದ ತಿಂಡಿಗಳಾದರೆ ಸಾಕು.

ಪ್ರಿಯ:—ಇರಲಿ. ಎಲ್ಲಿ, ಪಟ್ಟಿಯನ್ನು ಕೊಡು.

ರಾಮ:—(ಓದುವನು)ಮೊದಲನೆಯ ಸಲಕ್ಕೆ, ಕಡಬು, ರಸಾಯನ.

ಪ್ರಿಯ:—ನಿನ್ನ ಕಡಬನ್ನು ಭಾವಿಗೆಹಾಕು.

ರಾಮ:—ನಿನ್ನ ರಸಾಯನವನ್ನು ಒಲೆಗೆ ಹುಯ್ಯಿ—

ದೇವ:—ಸರಿ. ಹಸಿವಿನಿಂದ ಪೀಡಿತರಾದವರಿಗೆ ಇದರಂತಹ ಭೋಜ್ಯವಸ್ತುವು ಬೇರೊಂದಿಲ್ಲ.

ರಾಮ:—ಪಟ್ಟಿಯ ಬುಡದಲ್ಲಿ 'ರೊಟ್ಟಿ, ಖೀರು, ಲಾಡು' ಎಂದಿದೆ.

ಪ್ರಿಯ:—ಥೂ! ಲಾಡು ಅಜೀರ್ಣಕಾರಿ!

ರಾಮ:—ಲಾಡುವನ್ನು ನಿನ್ನ ತಲೆಯಮೇಲೆ ಹಾಕಿಕೋ!

ದೇವ:—(ಸ್ವಗತಂ) ಈ ತುಂಟಾಟವನ್ನು ನೋಡಿದವರಿಗೆ ಹುಚ್ಚು ಹಿಡಿಯುವುದು. (ಅವರನ್ನು ನೋಡಿ) ನೀವು ನನ್ನ ಅತಿಥಿಗಳು. ನಿಮಗೆ ಮನವೊಪ್ಪುವಂತೆ ಒದಲಾಯಿಸಬಹುದು. ನಿಮಗೆ ಇಷ್ಟವಾದುದನ್ನು ಧಾರಾಳವಾಗಿ ತಿಳಿಸಬಹುದು. ಯಾವ ಪದಾರ್ಥವನ್ನು ಅಪೇಕ್ಷಿಸಿದರೂ ಹೊಸದಾಗಿ ತಯಾರ್ಮಾಡಿಸಿ ಸಿದ್ಧಗೊಳಿಸುವೆನು.

ರಾಮ:—ಪಲ್ಯಗಳು, ಮೇಲೋಗರಗಳು, ಮಸಾಲೆಯನ್ನುಹಾಕಿದ ಭೋಜ್ಯವಸ್ತುಗಳು, ಗಟ್ಟಿಯಾದ ಹಾಲಿನಕೆನೆ, ಅಥವಾ ಫೇಡ ಇವೊಂದೂ ಇಲ್ಲ.

ಪ್ರಿಯ:—ಇದೇನು ಬಿಯ್ಯಗರ ಔತನವೆ! ನನಗೆ ಸಾಮಾನ್ಯವಾದ ಊಟವಾದರೆ ಸಾಕು.

ದೇವ:—ಸ್ವಾಮಿ! ತಮಗೆ ಬೇಕಾದ ಪದಾರ್ಥವು ನನ್ನ ಮನೆಯಲ್ಲಿರುವಂತಿಲ್ಲ. ಆದರೂ ತಮಗೆ ಯಾವುದರಲ್ಲಿ ಹೆಚ್ಚು ಅಕ್ಕರೆಯೆಂಬುದನ್ನು ತಿಳಿಸಿದರೆ.....

ರಾಮು:—ನಿನ್ನ ಪಟ್ಟಿಯಲ್ಲಿರುವ ಪದಾರ್ಥಗಳೆಲ್ಲಾ ಒಂದಕ್ಕಿಂತ ಮತ್ತೊಂದು ರುಚಿಕರವಾಗಿದೆ. ಯಾವುದನ್ನೂ ಬೇಡವೆನ್ನುವಂತಿಲ್ಲ. ನಿನ್ನ ಮನಸ್ಸಿಗೆ ಬಂದುದನ್ನು ಬಡಿಸು. ಊಟದ ಏರ್ಪಾಡೇನೊ, ಆದಂತಾಯಿತು. ಇನ್ನು ನಮ್ಮ ಸಾಮಾನುಗಳನ್ನೆಲ್ಲಾ ಸರಿಮಾಡಿ ಹಾಸುಗೆಯ ಧೂಳನ್ನು ಹೊಡೆದು, ಚೆನ್ನಾಗಿ ಗಾಳಿಬೀಸುವೆಡೆ ಹಾಸುವಂತೆ ಏರ್ಪಾಡು ಮಾಡುವೆನು.

ದೇವ:—ದಯೆಮಾಡಿ ಆ ಕೆಲಸವನ್ನೆಲ್ಲಾ ನನ್ನ ಪಾಲಿಗೆ ಬಿಡಿರಿ. ತಾವು ಅದಕ್ಕಾಗಿ ಶ್ರಮಪಡಬೇಕಾಗಿಲ್ಲ.

ರಾಮು:—ನಿನಗೆ ಬಿಡುವುದೆ ? ದಯಮಾಡಿ ಮನ್ನಿಸಬೇಕು. ನನ್ನ ಕೆಲಸಗಳನ್ನು ನಾನೇ ಮಾಡಿಕೊಳ್ಳುತ್ತೇನೆ.

ದೇವ:—ಆ ವಿಚಾರದಲ್ಲಿ ತಾವು ಸ್ವಲ್ಪವೂ ದಾಕ್ಷಿಣ್ಯಪಡದೆ ಧಾರಾಳವಾಗಿರಬೇಕೆಂದು ನಾನು ಬಲವಂತಪಡಿಸುವೆನು.

ರಾಮು:—ಖಂಡಿತವಾಗಿಯೂ ಆ ಕೆಲಸವನ್ನು ನಾನೇ ಮಾಡಬೇಕು. (ಸ್ವಗತಂ) ಕೊನೆಗೂ ಇಂದು ಎಂತಹ ಕೆಟ್ಟವರ ಸ್ನೇಹವು ದೊರೆಕಿತು ?

ದೇವ:—ಹಾಗಾದರೆ, ನಾನು ನಿನ್ನ ಜತೆಯಲ್ಲಾದರೂ ಇರಬೇಕೆಂದು ಸಂಕಲ್ಪಿಸಿರುವೆನು. (ಸ್ವಗತಂ) ಇದು ಈಕಾಲದ ನಿಯಮವಿರಬಹುದು. ಪೂರ್ವಕಾಲದಲ್ಲಿ ಇದಕ್ಕೆ ಮಿಂಚಿದ ಪಟಿಂಗತನವೇ ಇರಲಿಲ್ಲ.

[ರಾಮವರ್ಮ ದೇವದತ್ತ ರಕ್ತಾಕ್ಷರು ಹೊರಟು ಹೋಗುವರು]

ಪ್ರಿಯ:—(ಸ್ವಗತಂ) ಇವನ ಮಾನಮರ್ಯಾದೆಗಳು ನಮ್ಮ ಪ್ರಾಣವನ್ನು ತೆಗೆಯುವಂತಿವೆ. ಆದರೆ, ಅವನಿಗೇನೋ ಸಂತೋಷಾತಿಶಯವಾಗಿರುವಂತಿದೆ. ಆಗಲಿ, ಪಾಪ! ಇದಾರು, ಕಮಲಾವತಿಯೆ ? ಇದೇನಾಶ್ಚರ್ಯ! ಇವಳು ಇಲ್ಲೇಕಿರುವಳು ?

[ಕಮಲಾವತಿಯು ಬರುವಳು.]

ಕಮಲಾ:—ಪ್ರಿಯನೆ! ಇದೇನು, ಇಲ್ಲಿಗೇಕೆ ಬಂದಿರುವೆ? ನನಗಿರುವ ಆನಂದವನ್ನು ಎಷ್ಟೆನ್ನಲಿ? ನಿನ್ನನ್ನು ನೋಡುವ ಪುಣ್ಯವು ಇಂದು ಪ್ರಾಪ್ತವಾಯಿತೆ?

ಪ್ರಿಯ:—ಪ್ರಿಯೆ! ಆ ಪ್ರಶ್ನೆಯನ್ನೇ ನಾನೂ ಕೇಳಬೇಕಾಗಿದೆ. ನನ್ನ ಪ್ರೇಮಪಾತ್ರಳಾದ ನೀನು ಈ ಭೋಜನಶಾಲೆಯಲ್ಲಿರಲು ಕಾರಣವೇನು?

ಕಮ:—ಭೋಜನಶಾಲೆಯೆ? ಇದೇನು ಚೋದ್ಯ! ನನ್ನ ಪೋಷಕರಾದ ದೇವದತ್ತ ದಂಪತಿಗಳು ವಾಸಮಾಡುವುದು ಇಲ್ಲೇ ಅಲ್ಲವೆ? ಇದನ್ನು ಭೋಜನಶಾಲೆಯೆಂದು ತಿಳಿದುಕೊಳ್ಳಲು ಏನು ಭ್ರಾಂತಿಬಂತು?

ಪ್ರಿಯ:—ರಾಮವರ್ಮನೂ ನಾನೂ ಇಲ್ಲಿಗೆ ಬರುತ್ತಿದ್ದಾಗ ದಾರಿಯಲ್ಲಿ ಒಬ್ಬ ಯುವಕನು ನಮಗೆ ಇದೊಂದು ಭೋಜನಾಲಯವೆಂದು ಹೇಳಿ ಕಳುಹಿಸಿದನು.

ಕಮಲ:—ಸರಿ ಸರಿ. ತಿಳಿಯಿತು. ಅದು ನಮ್ಮ ದುರ್ಮತಿಯ ಕುಚೇಷ್ಟೆಯಾಗಿರಬೇಕು ಅದೇನು ವಿಚಿತ್ರವಸ್ತುವೊ? ಅವನಾರೆಂಬುದನ್ನು ಬಲ್ಲೆಯಷ್ಟೆ? ಹಿ-ಹಿ-ಹಿ

ಪ್ರಿಯ:—ಅವನೋ ನನ್ನ ಪ್ರತಿವಾದಿಯು! ಅವನಿಗೇನೋ ನಿಮ್ಮತ್ತೆಯು ನಿನ್ನನ್ನು ಕೊಟ್ಟು ಮದುವೆಮಾಡಬೇಕೆಂದಿರುವದು?

ಕಮ:—ಆದರಿಂದ ನನಗೇನೂ ಭಯವಿಲ್ಲ. ಪ್ರಿಯನೆ, ನನ್ನನ್ನು ವರಿಸುವುದರಲ್ಲಿ ಅವನಿಗೆಷ್ಟು ಶ್ರದ್ಧೆಯಿದೆಯೆಂಬುದು ನಿನಗೆ ತಿಳಿದರೆ, ನೀನು ಅವನನ್ನು ಪೂಜಿಸುವೆ. ಅವನ ಮನೋಗತವು ನಮ್ಮತ್ತೆಗೆ ತಿಳಿಯದು. ಆದುದರಿಂದ ಅವಳು ಒಂದು ಪದೇ ಪದೇ ನನ್ನ ಅನುಮತಿಯನ್ನು ಪಡೆದು ಹೋಗುವಳು. ತನ್ನ ಪ್ರಯತ್ನವು ಕೈಗೂಡಿತೆಂದೇ ಅವಳು ನಂಬಿರುವಳು.

ಪ್ರಿಯ:—ಎಲ, ಎಲಾ! ಮುದ್ದು ಮೋಸಗಾತಿ! ರಾಮವರ್ಮನು

ಇಲ್ಲಿಗೆ ಹೊರಟಿದ್ದನು. ಇಂತಹ ಸಮಯವು ಇನ್ನು ದೊರೆಯಲಾರದೆಂದು ನಾನೂ ಅವನೊಡನೆ ಹೊರಟೆನು. ನಾವು ತಂದಿರುವ ಕುದುರೆಗಳ ದಣಿವು ಆರಿದೊಡನೆಯೇ, ನಾವಿಬ್ಬರೂ ಚಂದ್ರನಗರಿಗೆ ಹೋಗಿ ವಿವಾಹಿತರಾಗುವ ! ಅಲ್ಲಿ, ಗುಲಾಮರಲ್ಲಿಯೂ ವಿವಾಹಸಂಬಂಧವಾದ ನ್ಯಾಯನಿಯಮಗಳಿಗೆ ಗೌರವವುಂಟು.

ಕಮ:—ನಾನು ನಿನ್ನ ಆಜ್ಞಾಧಾರಕಳೇ ಆದರೂ ನನ್ನ ಅಲ್ಪ ಮನವು ಐಶ್ವರ್ಯವನ್ನು ಬಿಟ್ಟು ಹೊರಡಲು ಹಿಂದೆಗೆಯುತ್ತಿರುವುದು. ನನ್ನ ಐಶ್ವರ್ಯವೆಲ್ಲವೂ ಜವಾಹಿರಿಯ ರೂಪದಲ್ಲಿರುವದು. ಅದನ್ನು ಧರಿಸಲು ನಮ್ಮ ಅತ್ತೆಯ ಅನುಜ್ಞೆಯನ್ನು ಬೇಡುತ್ತಿರುವೆನು. ಅವಳು ಅನುಮತಿ ಯನ್ನು ಕೊಡುವ ಸಂಭವವೂ ಇರುವುದು. ಆ ನಗಗಳೆಲ್ಲವನ್ನೂ ನನ್ನ ವಶಕ್ಕೆ ಕೊಟ್ಟೊಡನೆಯೆ, ಅವೂ, ನಾನೂ, ಎಲ್ಲವೂ, ನಿನ್ನವೇ !

ಪ್ರಿಯ:—ನಿನ್ನ ಆ ಒಡವೆಗಳು ಹಾಳಾಗಲಿ. ನಾನು ನಿನ್ನನ್ನೇ ಪ್ರೀತಿಸುವುದು ಆ ನಗನಾಣ್ಯಗಳನ್ನಲ್ಲ. ನನಗೆ ಬೇಕಾದ ವಸ್ತುವು ನೀನೊಬ್ಬಳೇ ! ಈಗಲೇ ನಾವು ಇಲ್ಲಿನ ನಿಜಸ್ಥಿತಿಯನ್ನು ರಾಮವರ್ಮನಿಗೆ ತಿಳಿಸಬಾರದು. ನಮ್ಮ ಅಭಿಪ್ರಾಯವು ತಪ್ಪಾದುದೆಂದು ಈಗಲೇ ಹೇಳಿ ಬಿಟ್ಟರೆ, ಅವನ ವಿಚಿತ್ರಸ್ವಭಾವಗಳನ್ನು ನಾನು ಒಲ್ಲೆನು—ನನ್ನ ಇಷ್ಟಾರ್ಥವು ಕೈಗೂಡುವುದರೊಳಗಾಗಿಯೇ, ಇಲ್ಲಿಂದ ಹೇಳದೆ ಕೇಳದೆ, ಅವನು ಓಡಿ ಹೋಗುವನು.

ಕಮ:—ಅವನಿಗೆ ತಿಳಿಯದಂತೆ ಈ ವಿಷಯವನ್ನು ಗೋಪ್ಯವಾಗಿ ಇಟ್ಟಿರುವುದು ಹೇಗೆ ? ಹೊರಗೆ ಸುತ್ತಾಡಲು ಹೋಗಿದ್ದ ನಿರ್ಮಲೆಯು ಈಗ ತಾನೆ ಬಂದಿರುವಳು. ನಾವು ರಾಮವರ್ಮನಿಗೆ ಇನ್ನೂ ಸ್ವಲ್ಪಕಾಲ ಮೋಸಮಾಡಿದರೆ ಆಗುವುದಾದರೂ ಏನು? ಹೇಗೆ ಬಾ ! ಅಲ್ಲಿ ಯಾರೋ ಬರುತ್ತಿರುವರು.

[ರಾಮವರ್ಮನು ಬರುವನು.]

ರಾಮ:—(ಸ್ವಗತಂ) ಈ ಜನರ ಉಪಚಾರವು ನನಗೆ ಸಾಕಾಯಿತು. ಇನ್ನು ಸಹಿಸಲಾಗುವುದಿಲ್ಲ. ಈ ಭೋಜನಾಲಯದ ಅಧ್ಯಕ್ಷನು, ನಮ್ಮನ್ನು ಒಂಟಿಯನ್ನಾಗಿ ಬಿಡುವುದೂ ಮರ್ಯಾದೆಯಲ್ಲವೆಂದು ಭಾವಿಸಿ, ಪತ್ನೀಸಮೇತನಾಗಿ ನಮ್ಮ ಬೆನ್ನು ಹಿಂದೆಯೇ ಅಲೆಯುತ್ತಿರುವನು. ನಮ್ಮೊಡನೆಯೇ ಊಟಮಾಡುವರಂತೆ! ನಮ್ಮೊಡನೆಯೇ ಇರುವರಂತೆ! ಇನ್ನೂ ಮನೆಯಲ್ಲಿ ಆರಾರು ಇರುವರೊ? ಆರಾರೊಡನೆ ಏನೇನು ಕಷ್ಟಗಳನ್ನನುಭವಿಸಬೇಕೊ? ಛೀ! ಸಾಕು! (ಪ್ರಕಾಶಂ) ಅದಾರಲ್ಲಿ?

ಪ್ರಿಯ:—ರಾಮು! ನಿನ್ನ ಪುಣ್ಯಕ್ಕೆ ಎಣೆಯಿಲ್ಲ. ಎಂತಹ ಅನಿರೀಕ್ಷಣೆಯ ಭಾಗ್ಯವು ಲಭಿಸಿರುವುದು? ಈಗತಾನೆ ಗಾಡಿಯಿಂದ ಇಳಿದು ಒಳಗೆ ಬಂದವರಾರೆಂದು ಬಲ್ಲೆಯ?

ರಾಮ:—ನನಗೆ ತಿಳಿಯದು.

ಪ್ರಿಯ:—ನಮ್ಮ ಪತ್ನಿಯರು, ನಿರ್ಮಲೆ, ಕಮಲಾವತಿಯರಲ್ಲವೆ? ಇದೊ! (ಕಮಲಾವತಿಯ ಕಡೆಗೆ ಕೈ ತೋರಿಸಿ) ಈಕೆಯೇ ನನ್ನ ಕಮಲಾವತಿಯು. ನಿರ್ಮಲೆಯು ಪಕ್ಕದ ಕೊಠಡಿಯಲ್ಲಿರುವಳು. ಅವಳೂ ಇಲ್ಲಿಗೆ ಬರುವಳು. ನಾವು ಅದೃಷ್ಟಶಾಲಿಗಳಲ್ಲವೆ?

ರಾಮ:—(ಸ್ವಗತಂ) ನನಗೆ ಈಗಲೇ ಹುಚ್ಚು ಹಿಡಿದಿರುವುದು. ಜತೆಗೆ ಅವಳೊಬ್ಬಳು ಬಂದು ಸೇರಿಬಿಟ್ಟರೆ, ನನ್ನ ಅವಸ್ಥೆಯು ಯಾರಿಗೂಬೇಡ.

ಪ್ರಿಯ:— ಇದಕ್ಕಿಂತ ಉತ್ತಮವಾದ ಅದೃಷ್ಟವಿದೆಯೆ?

ರಾಮ:—ಅಡ್ಡಿಯೇನು? ನಾವು ಬಹು ಅದೃಷ್ಟಶಾಲಿಗಳು! ಪರಮಾನಂದವಾಯಿತು. ನನ್ನ ಬಟ್ಟೆಗಳು ಸರ್ವಾಸಹ್ಯವಾಗಿವೆ. ನಾಳೆಯವರೆಗೂ ಆ ನಿರ್ಮಲೆಯನ್ನು ನೋಡದಿದ್ದರೇನು? ನಾಳೆಯದಿನ ಅವಳ ಮನೆಯಲ್ಲೇ ಅವಳನ್ನು ನೋಡುವ ಪುಣ್ಯವಿರಲಿ. ಅದೇ, ಎಲ್ಲಾ ಭಾಗದಲ್ಲಿಯೂ ಅನುಕೂಲವೆಂದೂ ಗೌರವವೆಂದೂ ನನಗೆ ತೋರುವುದು; ನಾಳೆಯೇ ಆಗಲಿ.

ಈಗ ಬೇಡ (ಹೊರಟುಹೋಗಲು ಪ್ರಯತ್ನಿಸುವನು.)

ಕಮಲ:—ಛೀ ! ಹಾಗಾಗಕೂಡದು ! ಈ ನಾಚುಕೆಯ ಪ್ರಕೃತಿಯನ್ನು ಬಿಡದಿದ್ದರೆ ಅವಳಿಗೆ ಬಹು ಅಸಮಾಧಾನವಾಗುವುದು. ನಿಮ್ಮ ಒಟ್ಟೆಯು ಅಂದವಾಗಿಲ್ಲದಿದ್ದರೇನು ? ಪ್ರೇಮಬಂಧವು ಉಡುಗೆ ತೊಡುಗೆಗಳನ್ನು ಅಪೇಕ್ಷಿಸುವುದಿಲ್ಲ. ತಾವು ಇಲ್ಲಿರುವುದು ಅವಳಿಗೆ ತಿಳಿದು ಬಂದಿರುವುದರಿಂದ ಅವಳು ತಮ್ಮ ಭೇಟಿಗೆ ಈಗಲೇ ಬರುವಳು.

ರಾಮ:—(ಸ್ವಗತಂ) ಗ್ರಹಚಾರವೆ ! ಈಗೇನುಗತಿ ? ಹೆಂ,–ಹೆಂ,–(ಪ್ರಕಾಶಂ) ಪ್ರಿಯಸೇನನೆ ! ಇಲ್ಲಿಯೇ ಇರಬೇಕೆ ? ಹಾಗಾದರೆ, ನೀನು ನನಗೆ ಸಾಹಾಯ್ಯವನ್ನು ಮಾಡಬೇಕು. ನನಗೆ ಬುದ್ಧಿಯೇ ಓಡುವುದಿಲ್ಲ. ಇದೇನು ತಂಟೆಯಪ್ಪ ! ಆಗಲಿ, ಧೈರ್ಯವನ್ನು ವಹಿಸುವೆನು.

ಪ್ರಿಯ:—ಮೊದಲಿನಲ್ಲಿ ಸ್ವಲ್ಪ ಧೈರ್ಯವಾಗಿದ್ದರೆ ಸರಿ , ಅವಳೂ ಹೆಂಗಸಲ್ಲವೆ ? ಹೆದರಲೇಕೆ ?

ರಾಮ:—ಯಾವ ಹೆಂಗಸನ್ನು ನೋಡಬೇಕೆಂದರೂ ನನಗಿಷ್ಟು ಭಯವಾಗಲಿಲ್ಲ .

[ನಿರ್ಮಲೆಯು ಪ್ರವೇಶಿಸುವಳು.]

ಪ್ರಿಯ:—(ರಾಮವರ್ಮನನ್ನು ತೋರಿಸಿ) ನಿರ್ಮಲೆ, ಇದೊ ಇವನೇ ನಿನ್ನ ರಾಮವರ್ಮನು. ರಾಮವರ್ಮ, ಇದೊ, (ನಿರ್ಮಲೆಯನ್ನು ತೋರಿಸಿ) ಇವಳೇ ನಿನ್ನ ನಿರ್ಮಲೆಯು. ಇಬ್ಬರಿಗೂ ಪರಿಚಯವಾದರೆಸಾಕು. ಪರಸ್ಪರ ಪ್ರೀತಿವಿಶ್ವಾಸಗಳಿಂದ ಗೌರವಿಸಲುಳ್ಳ ನಿಮ್ಮಿಬ್ಬರನ್ನೂ ಒಟ್ಟಿಗೆ ಸೇರಿಸಿದುದು ನನ್ನ ಸುಕೃತವೇ ಸರಿ.

ನಿರ್ಮ:—(ಸ್ವಗತಂ) ವಿನಯಸಂಪನ್ನನೂ ಗಂಭೀರಸ್ವನೂ ಆದ ಈತನ ಪರಿಚಯವು ಅತ್ಯವಶ್ಯಕವು. (ಪ್ರಕಾಶಂ) ನೀವು ಸುಖವಾಗಿ ಬಂದು ಇಲ್ಲಿಗೆ ಸೇರಿದುದರಿಂದ ಪರಮಸಂತೋಷವಾಯಿತು. ಮಾರ್ಗದಲ್ಲಿ ಕೆಲವು ತೊಂದರೆಗಳು ಸಂಭವಿಸಿದುವೆಂದು ಕೇಳಿದೆನು.

ರಾಮು:—ಒಂದೆರಡು! ಇಲ್ಲ, ಕೆಲವು! ಅಹುದು, ನಿರ್ಮಲೆ! ಬಹಳ ಅಸಂಭವಗಳು ಪ್ರಾಪ್ತವಾದುವು. ಈರೀತಿ ಸುಖವಾಗಿ ಪರಿಣಮಿಸಿದ—ಹೂ—ಈ ಅಸಂಭವಗಳಿಗಾಗಿ ನಾವು ವ್ಯಸನಪಡದೆ ಸಂತೋಷಿಸಬೇಕಾಗಿದೆ.

ಪ್ರಿಯ:—(ರಾಮುನನ್ನು ಕುರಿತು) ನೀನು ಇದುವರೆಗೆ ನಿನ್ನ ಜೀವಮಾನದಲ್ಲಿ ಇಷ್ಟು ಚೆನ್ನಾಗಿ ಮಾತನಾಡಿದುದೇ ಇಲ್ಲ. ಹೂ—ಹಾಗೆಯೇ ಮಾತನಾಡು. ಜಯವು ದೊರೆವುದು. ಹೂ—

ನಿರ್ಮ:—ನೀವು ಹೊಗಳುವಿರಿ. ಪ್ರಪಂಚವನ್ನೆಲ್ಲಾ ತಿರುಗಾಡಿ ದೊಡ್ಡ ದೊಡ್ಡ ಮನುಷ್ಯರ ಗುಂಪಿನಲ್ಲಿದ್ದ ನಿಮಗೆ ಈ ಹಳ್ಳಿಯ ಜನರು ಸ್ನೇಹಕ್ಕೆ ಸರಿಹೋಗುವರೆ?

ರಾಮು:—(ಧೈರ್ಯವನ್ನು ತಂದುಕೊಂಡು) ನಾನು ಎಲ್ಲೇ ಇದ್ದರೂ ಜನರಗುಂಪಿಗೆ ಸೇರುವುದೇ ಬಹಳ ಕಡಿಮೆಯೆಂದು ಹೇಳಬೇಕು. ಇತರರು ಸುಖವಾಗಿ ತಮ್ಮ ಜೀವಮಾನವನ್ನು ಕಳೆಯುತ್ತಿದ್ದರೆ, ನಾನು ದೂರದಲ್ಲೇ ಅವರೆಲ್ಲರನ್ನೂ ನೋಡುತ್ತ ಜೀವನ ತತ್ವವನ್ನು ವಿಮರ್ಶೆ ಮಾಡಿಕೊಳ್ಳುತ್ತೇನೆ.

ಕಮು:—ಕೊನೆಗೆ ಸುಖವಾಗಿ ಬಾಳಲು, ಅದೇ ಸರಿಯಾದ ಮಾರ್ಗವೆಂದು ನಾನು ಕೇಳಿರುವೆನು.

ಪ್ರಿಯ:—(ರಾಮುವರ್ಮನನ್ನು ಉದ್ದೇಶಿಸಿ) ಎಂತಹ ವಾಗ್ಮಿರಿ? ಇನ್ನೊಂದು ಸಾರಿ ಹೀಗೆಯೇ ಮಾತನಾಡು. ಧೈರ್ಯವು ಬಂದೇ ಬರುವುದು.

ರಾಮು:—(ಪ್ರಿಯಸೇನನನ್ನು ಕುರಿತು) ಹೂ-ಆಗಲಿ. ನೀನು ನನ್ನ ಮಗ್ಗುಲಿನಲ್ಲಿಯೇ ಇರು. ನಾನೇನಾದರೂ ಪೆಚ್ಚು ಬೀಳುವ ಸಂಭವವು ಬಂದರೆ, ಸರಿಪಡಿಸು

ನಿರ್ಮ:—ಮಾನವರ ಜೀವಮಾನವನ್ನು ಪರಿಶೋಧಿಸುವುದು ಬಹುಹಿತಕರವಾಗಿರಲಾರದು. ಏಕೆಂದರೆ, ನೀವು ನೋಡಿ ಮೆಚ್ಚುವ ಗುಣಕ್ಕಿಂತಲೂ, ದೋಷಗಳು ಹೇರಳವಾಗಿರುವುವಲ್ಲವೆ?

ರಾಮು:—ನಿರ್ಮಲೆ, ಹಾಗಲ್ಲ; ಮನ್ನಿಸು. ಯಾವಾಗಲೂ ವಿನೋದ

ವಾಗಿರಬೇಕೆಂಬುದೇ ನನ್ನ ಮತವು. ಇತರರ ಹುಚ್ಚಾಟವನ್ನು ನೋಡಿದರೆ, ಮನಸ್ಸಿಗೆ ತೊಂದರೆಯಾಗುವುದಿಲ್ಲ. ತಮಾಷೆಯಾಗಿಯೇ ಪರಿಣಮಿಸುವುದು.

ಪ್ರಿಯ:—(ರಾಮನನ್ನು ಕುರಿತು) ಧೀರನೇ ಅಹುದು. ರಾಮು! ನೀನೇ ಧೀರ !! ಹುಟ್ಟಿದಂದಿನಿಂದಲೂ ಇಷ್ಟು ಬುದ್ಧಿಯನ್ನುಪಯೋಗಿಸಿ ಹೆಂಗಸರ ಮುಂದೆ ನೀನು ಮಾತನಾಡಿರಲಿಲ್ಲ. (ನಿರ್ಮಲೆಯನ್ನು ಉದ್ದೇಶಿಸಿ) ನಿರ್ಮಲೆ, ನೀವಿಬ್ಬರೂ ಸೇರಿದರೆ ಮಾತು ಕಥೆಗಳು ಬಹಳ ಚೆನ್ನಾಗಿ ನಡೆವಂತಿದೆ ನಾವು ಇದ್ದರೆ ನಿಮಗೆ ತೊಂದರೆಯೇವಿನಾ ಸುಖವೇನೂ ಇಲ್ಲ.

ರಾಮು:—(ಪ್ರಿಯಸೇನನನ್ನು ಕುರಿತು) ಎಂದಿಗೂ ಇಲ್ಲ. ನಿನ್ನ ಜತೆಯಲ್ಲಿರುವುದೇ ನನಗೆ ಹಿತಕರವಾಗಿದೆ ನೀನು ನನ್ನನ್ನು ಬಿಟ್ಟು ಹೋಗಬೇಡ.

ಪ್ರಿಯ:—ನಾವು ಇಲ್ಲದ್ದರೆ ನಿಮ್ಮ ಸಂಭಾಷಣೆಗೆ ಅಡ್ಡಿಮಾಡಿದಂತಾಗುವುದು. ಆದುದರಿಂದ ಮಗ್ಗುಲಕೋಣೆಯಲ್ಲಿ ಇರುವೆವು. (ರಾಮನನ್ನು ನೋಡಿ) ನಾವು ನಮ್ಮ ವಿಚಾರವನ್ನು ಸ್ವಲ್ಪ ಮಾತನಾಡಿಕೊಳ್ಳಬೇಕೆಂಬುದನ್ನು ಮರೆತೆಯೊ ?

[ಕಮಲಾವತಿ ಪ್ರಿಯಸೇನರು ಹೊರಟುಹೋಗುವರು]

ನಿರ್ಮಲೆ:—(ಅರೆಗಳಿಗೆ ಸುಮ್ಮನಿದ್ದು) ನಾವು ಕೇವಲ ಪರಿಶೋಧಕರಾದರ ಸಾಲದು. ತಾವು ಸ್ತ್ರೀಸಮುದಾಯದಲ್ಲಿ ಸ್ವಲ್ಪ ಸ್ವಾಂತಂತ್ರ್ಯವನ್ನು ವಹಿಸಬೇಕು.

ರಾಮು:— (ಗಾಬರಿಗೆ ಮೊದಲಾಗುವುದು) ನಿರ್ಮಲೆ, ಇಲ್ಲ. ನಾನು ಸ್ತ್ರೀಸಮೂಹಕ್ಕೆ ಸೇರಲು ಅರ್ಹ—ನಾ......ನಾ......ಗುವಂತೆ—ಊ ......ಊ... ಯೋಗ್ಯತೆಯನ್ನು ಪಡೆಯಲು ಪ್ರಯತ್ನ—ಊ.....ಊ.... ಪಡುತ್ತಿದೇನೆ.

ನಿರ್ಮಲೆ:—ಹಾಗೆಮಾಡುವುದರಿಂದ ಸ್ತ್ರೀಯರಲ್ಲಿ ಪ್ರೇಮವನ್ನು ಗಳಿಸಲು ಸಾಹಾಯ್ಯವಾದಂತಾಗುವುದಿಲ್ಲ.

ರಾಮು:—ಇರಬಹುದು. ಸ್ತ್ರೀಯರಲ್ಲಿಯೂ, ಬಹಳ ಗಂಭೀರಭಾವವನ್ನುಳ್ಳ ವಿವೇಕಿಗಳೊಡನೆಮಾತ್ರ ಮಾತನಾಡಲು ನನಗೆ ಬಹಳ ಆಶೆಯುಂಟು. ನಾನು ನಿನಗೆ ಬೇಸರವನ್ನು ಹುಟ್ಟಿಸುತ್ತಿರಬಹುದು.

ನಿರ್ಮ:—ಪ್ರಿಯ, ಇಲ್ಲ; ಇಲ್ಲ. ಗಾಂಭೀರ್ಯದಿಂದ ಕೂಡಿದ ಸಂಭಾಷಣೆಗಿಂತ ಮತ್ತಾವುದರಲ್ಲಿಯೂ ನನಗೆ ಹೆಚ್ಚು ಪ್ರೇಮವೂ ಅಭಿಮಾನವೂ ಇಲ್ಲ. ಇಂತಹ ಮಾತುಗಳನ್ನು ಎಷ್ಟುಹೊತ್ತಾದರೂ ಆಡುತ್ತಲೇ ಇರುವೆನು. ಉತ್ತೇಜವಾದ ಮನೋಭಿಪ್ರಾಯವುಳ್ಳವರು, ಮನಸ್ಸಿಗೆ ತಟ್ಟದಿರುವ ಅಲ್ಪಸುಖಗಳನ್ನು ಮೆಚ್ಚುವುದು ನನಗೆ ಆಶ್ಚರ್ಯಕರವಾದುದಾಗಿದೆ.

ರಾಮು:—ಅದು, ಅದು,...ಅದೊಂದು ವಿಧವಾದ ಮನೋವಿಕಾರ. ಲೋಕದ ಭಿನ್ನರುಚಿಯಲ್ಲಿ ಕೆಲವರು ಇದರ-ಆ-ಸ್ವಾರಸ್ಯವನ್ನು ತಿಳಿದುಕೊಳ್ಳಲಾರರು. ಇದ್ದೇ ಇರಬೇಕು... . ಊ.....

ನಿರ್ಮ:—ನೀವು ಹೇಳುವುದು ತಿಳಿಯಿತು ಕೆಲವರು ಸಂತೋಷಸುಖವನ್ನು ತಿಳಿಯದೆ, ತಾವು ರುಚಿನೋಡಿ ಅನುಭವಿಸಲಾರದ ಸಂಗತಿಗಳನ್ನು ಹೀನಗಳೆಯುವರಂತೆ ನಟಿಸುವರು.

ರಾಮು:—ಅದೇ ನನ್ನ ಅಭಿಪ್ರಾಯವು. ಆದರೆ, ನೀನು ಅದನ್ನು ನನಗಿಂತಲೂ ಸಾವಿರಪಾಲು ಚೆನ್ನಾಗಿ ವಿವರಿಸಿ ಹೇಳಿರುವೆ ! ಇದೆಲ್ಲವನ್ನೂ ನೋಡಿ ನಾನು........

ನಿರ್ಮ:—(ಸ್ವಗತಂ) ಇವನನ್ನು ವಿನಯಸಂಪನ್ನನಲ್ಲವೆಂದು ಯಾರು ತಾನೆ ಹೇಳಬಲ್ಲರು ? (ಪ್ರಕಾಶಂ) ನೀವು ಏನನ್ನೋ ಹೇಳಲು ಪ್ರಾರಂಭಿಸಿದಿರಲ್ಲವೆ ?

ರಾಮು:—ನಾನು ಹೇಳಲು ಪ್ರಾರಂಭಿಸಿದುದು ಏನೆಂದರೆ:—ಊ-ಊ-ಅದು ಮರೆತುಹೋಯಿತು.

ನಿರ್ಮ:—(ಸ್ವಗತಂ) ನನಗೂ ಮರೆಯಿತು. (ಪ್ರಕಾಶಂ) ಕಾಪ

ಟ್ಯವು ಎಲ್ಲೆಲ್ಲೂ ಹರಡಿರುವ ಈ ಕಾಲದಲ್ಲಿ......ಏನೊ ಕಪಟದ ವಿಚಾರ ವಾಗಿ ಮಾತನಾಡಿದಂತೆ ಇದ್ದಿತು.

ರಾಮ:—ಈ ಕಪಟಕಾಲದಲ್ಲಿ ಸರಿಯಾಗಿ ವಿಚಾರಮಾಡಿ ನೋಡಿದರೆ ಕೆಲವರೇ....ಆ–ಆ....

ನಿರ್ಮ:—ನೀವು ಹೇಳಬೇಕೆಂದಿರುವುದು ಚೆನ್ನಾಗಿ ತಿಳಿಯಿತು.

ರಾಮ:—(ಸ್ವಗತಂ) ಅಯ್ಯೋ ! ದೇವರೆ !! ನನಗೇ ಅದು ಚೆನ್ನಾಗಿ ಗೊತ್ತಿಲ್ಲವಲ್ಲ ?

ನಿರ್ಮ:—"ಅಂತರಂಗದಲ್ಲಿ ದುರಾಚಾರಗಳನ್ನು ನಡೆಯಿಸುತ್ತ, ಬಹಿ ರಂಗದಲ್ಲಿ ಸುಗುಣ ಸದಾಚಾರಗಳನ್ನು ಹೊಗಳಿದ ಮಾತ್ರದಿಂದಲೇ ಧರ್ಮ ಕಾರ್ಯವನ್ನು ಮಾಡಿದಂತಾಯಿತೆಂದು ಆಲೋಚಿಸದೆ ಇರುವರೂ ಅತಿ ವಿರಳರು." ಎಂಬುದಲ್ಲವೆ ತಮ್ಮ ಅಭಿಪ್ರಾಯವು ?

ರಾಮ:—ನಿಜ. ನೀನು ಹೇಳಿದುದು ನಿಜ. ಬಾಯಿನಲ್ಲಿ ಮಾತ್ರ ಸದ್ಗುಣಗಳನ್ನು ಹೊಗಳುತ್ತ, ಸದ್ಗುಣಿಗಳಂತೆ ನಟಿಸುವವರು ನಿಜವಾಗಿಯೂ ಸದ್ಗುಣಿಗಳಾಗಿರುವುದಿಲ್ಲ. ಪ್ರಾಯಶಃ ನಾನು ನಿನ್ನನ್ನು ನಿಜವಾಗಿಯೂ ಬೇಸರಪಡಿಸುತ್ತಲಿರಬಹುದು.

ನಿರ್ಮ:— ನನಗೆ ಸ್ವಲ್ಪವೂ ಬೇಸರವಿಲ್ಲ. ನೀವು ಹೇಳುವುದೆಲ್ಲವೂ ಸ್ವಾರಸ್ಯವಾಗಿಯೂ ಹಿತಕರವಾಗಿಯೂ ಚೆನ್ನಾಗಿಯೊ ಇರುವುದರಿಂದ ದಯಮಾಡಿ ಮಾತನಾಡುತ್ತಿರಬೇಕೆಂದು ಪ್ರಾರ್ಥಿಸುತ್ತೇನೆ.

ರಾಮ:—ನಾನು ಹೇಳಬೇಕಾದ ಮತ್ತೊಂದು ಸಂಗತಿಯೇನೆಂದರೆ:- ಧೈರ್ಯವು ಸಾಲದೆಹೋದರೆ, ಕೆಲವುವೇಳೆ, ಎಲ್ಲವೂ, ಊ–ಊ–ಹಾಳು.

ನಿರ್ಮ:—ಸರಿ. ನಿಮ್ಮ ಅಭಿಪ್ರಾಯವು ನನಗೂ ಸಮ್ಮತವಾದುದೆ. ಧೈರ್ಯಹೀನರಾದವರಿಗೆ ಅನೇಕವೇಳೆ ತೊಂದರೆಯು ಪ್ರಾಪ್ತವಾಗುವುದು. ಅದನ್ನು ತಿಳುವಳಿಕೆಯ ಅಭಾವವೆನ್ನುವರು. ಅಲ್ಲದೆ, ನಾವು ಇಲ್ಲದ ದೊಡ್ಡಸ್ತಿಕೆಯನ್ನು ಬಯಸಿದರೆ, ಮತ್ತಷ್ಟು ಕಷ್ಟಕ್ಕೆ ಸಿಲ್ಕಿಕೊಳ್ಳಬೇಕಾ

ಗುವುದು. ನೀವು ಹೇಳಬೇಕಾದುದು ಮತ್ತೇನು ?

ರಾಮ:—ಅಹುದು. ನ್ಯಾಯವಾಗಿಯೂ ಹಾಗೆಯೆ ! ನಮ್ಮ ಆಗ ಮನವನ್ನು ಕಮಲಾವತಿಯು ನಿರೀಕ್ಷಿಸುತ್ತಿರಬಹುದು. ನಾನು ಹೀಗೆ ಮಾತ ನಾಡುತ್ತ ನಿಂತಿರುವುದು ನ್ಯಾಯವಲ್ಲವೆಂದು ತೋರುವುದು.

ನಿರ್ಮ:—ಇದುವರೆಗಣ ನನ್ನ ಜೀವಮಾನದಲ್ಲಿ ನನ್ನೊಡನೆ ಎಂದೂ ಇಷ್ಟು ಹಿತವಾಗಿ ಯಾರೂ ಮಾತನಾಡಿರಲಿಲ್ಲ. ನಾವು ಇನ್ನೂ ಸ್ವಲ್ಪ ಕಾಲ ಮಾತನಾಡುತ್ತಿರಬಾರದೇಕೆ ?

ರಾಮ:—ಊ ...ಊ...ಅಹುದು. ಕಮಲಾವತಿಯು ನಮ್ಮನ್ನು ಕೂಗುವಳು. ನಾನೂ ನಿನ್ನ ಜತೆಯಲ್ಲೇ ಬರಲೊ?

ನಿರ್ಮ:—ನೀವೇ ಮುಂದೆ ಹಜ್ಜೆಯನ್ನು ಹಾಕಿರಿ. ನಾನು ಬರುತ್ತೇನೆ.

ರಾಮ:—(ಸ್ವಗತಂ) ಈ ಮೃದುಮಧುರವಾಕ್ಯಗಳು ಸಾಕಾದುವು. (ಹೊರಟು ಹೋಗುವನು)

ನಿರ್ಮ:—(ಸ್ವಗತಂ) ಹಾ, ಹಾ!! ಏನುಗಾಂಭೀರ್ಯ? ಎಷ್ಟು ಮಧುರ ವಾದ ವಾಣಿ? ಎಂತಹ ಮೃದುಭಾಷಣ! ನನ್ನನ್ನು ಒಂದು ಬಾರಿಯಾದರೂ ಕಣ್ಣೆತ್ತಿಸಹಾ ನೋಡಲಿಲ್ಲವೆಂದು ನನಗೆ ಭರವಸೆಯಿದೆ. ಇವನು ನಾಚು ಕೆಯೊಂದನ್ನು ಬಿಟ್ಟರೆ ಸಾಕು. ಸ್ಫುರದ್ರೂಪಿಯು. ಜಾಣ್ಮೆಯು ಇವನಲ್ಲಿ ಪೂರ್ಣವಾಗಿರುವುದು. ಇವನಲ್ಲಿರುವ ಮರುಳಾಟಕ್ಕಿಂತ ಜಾಣ್ಮೆಯೇ ಅವ ನನ್ನು ಹುಚ್ಚನನ್ನಾಗಿ ಮಾಡುತ್ತಲಿದೆ. ಇವನಿಗೆ ಧೈರ್ಯವಾಗಿರುವದೊಂದನ್ನು ಕಲಿಸಿಬಿಟ್ಟರೆ, ನನಗೆ ತಿಳಿದವರೊಬ್ಬರಿಗೆ ಮಹದುಪಕಾರವನ್ನು ಮಾಡಿದಂತಾ ಗುವುದು; ಆ ಒಬ್ಬರುಯಾರು? ನಿಜವಾಗಿಯೂ ಆ ಪ್ರಶ್ನೆಗೆ ನಾನೇ ಉತ್ತ ರವನ್ನು ಹೇಳಲಾರದವಳಾಗಿರುವೆನು. (ಹೊರಟು ಹೋಗುವಳು)

(ದುರ್ಮತಿಯೂ ಕಮಲಾವತಿಯೂ ಪ್ರವೇಶಿಸುವರು ಹಿಂದೆ ಚಂಡಿಯೂ ಪ್ರಿಯಸೇನನೂ ಬರುವರು)

ದುರ್ಮ:—ಕಮಲೆ, ಆದೇಕೆ ನನ್ನ ಬೆನ್ನಿನಹಿಂದೆಯೇ ಬರುವಿ? ಹೀಗೆ ನನ್ನನ್ನು ಕಾಡಲು ನಿನಗೆ ನಾಚುಕೆಯಿಲ್ಲವೆ?

ಕಮಲಾ:—ನಾವು ನಂಟರು. ಒಬ್ಬರನ್ನೊಬ್ಬರು ಮಾತನಾಡಿಸಬಾರದೆ ? ಅದರಲ್ಲಿ ದೋಷವೇನು?

ದುರ್ಮ:—ನಾನು ನಿನಗೆ ಯಾವತೆರನಾದ ನಂಟನಾಗಬೇಕೆಂದು ನಿನ್ನ ಅಪೇಕ್ಷೆಯಿದೆಯೋ, ಅದನ್ನು ನಾನು ಚೆನ್ನಾಗಿ ಬಲ್ಲೆನು. ನನ್ನ ಮಾತನ್ನು ಕೇಳು. ಅದೂ ಎಂದಿಗೂ ನಡೆಯದ ವಿಷಯ. ನೀನು ದೂರವಾಗಿರಬೇಕು. ನಿನ್ನೊಡನೆ ನನಗೆ ಸಮೀಪಬಾಂಧವ್ಯವು ಅವಶ್ಯಕವಿಲ್ಲ. ತಿಳಿಯಿತೆ ?

(ದುರ್ಮತಿಯ ಹಿಂದೆಯೇ ಕಮಲಾವತಿಯೂ ಹೋಗುವಳು. ಇಬ್ಬರೂ ಹೊರಟುಹೋಗುವರು.)

ಚಂಡಿ:—ನಿನ್ನ ಮಾತುಗಳು ಬಹಳ ಸ್ವಾರಸ್ಯವಾದುವುಗಳಾಗಿವೆ. ನಾನು ದೊಡ್ಡಪಟ್ಟಣದಲ್ಲಿ ವಾಸಮಾಡದೆ ಇದ್ದರೂ ಅಲ್ಲಿಯ ವೃತ್ತಾಂತಗಳನ್ನು ಕೇಳಲು ನನಗೆ ಬಹಳ ಆದರವುಂಟು.

ಪ್ರಿಯಸೇನ:—ನೀನು ಪಟ್ಟಣಗಳಲ್ಲಿ ವಾಸಮಾಡಿಯೇ ಇಲ್ಲವೆ ? ಇದೇನು? ಅಲ್ಲಿನವರಿಗಿಂತಲೂ ವಿಶೇಷವಾಗಿ ವಿಷಯಗಳನ್ನು ತಿಳಿದುಕೊಂಡಿರುವಿಯಲ್ಲ ?

ಚಂಡಿ:—ನನಗೇನೋ ಷಹರಂದರೆ ಬಹುಆಶೆ. ಅಲ್ಲಿಗೆ ಹೋಗಿಬರುವುದರಿಂದಲೂ ವೃತ್ತಾಂತಪತ್ರಿಕೆಗಳಿಂದ ಆ ಎಲ್ಲಾ ವರ್ತಮಾನಗಳನ್ನೂ ನವನಾಗರಿಕತೆಯ ಸಂಗತಿಗಳನ್ನೂ ಹೊಸಹೊಸ ಉಡುಗೆತೊಡಗೆಗಳ ತರಹೆಯನ್ನೂ ತಿಳಿದುಕೊಳ್ಳುವೆನು.

ಪ್ರಿಯ:—ನಿಮ್ಮ ಸಂಗತಿಗಳೆಲ್ಲಾ ಆಶ್ಚರ್ಯಕರವಾದುವುಗಳಾಗಿವೆ! ನಿಮ್ಮ ಉಡುಪನ್ನು ಮಾಡಿದವರಾರು? ಅವುಗಳನ್ನು ಪಟ್ಟಣಗಳಿಂದ ತರಿಸಿದಿರೇನು?

ಚಂಡಿ:—ಇಲ್ಲ; ಇಲ್ಲ. ಎಲ್ಲವನ್ನೂ ಪತ್ರಿಕೆಗಳಲ್ಲಿ ಓದಿ ಕಲಿತು ನಾನೇ ಮಾಡಿಕೊಳ್ಳುತ್ತೇನೆ.

ಪ್ರಿಯ:—ನಿನ್ನ ಬುದ್ಧಿ ಕುಶಲತೆಯನ್ನೂ ನಾಜೋಕನ್ನೂ ಎಷ್ಟು ಹೊಗಳಿದರೂ ಸಾಲದು.

ಚಂಡಿ:—ಏನಿದ್ದರೇನು? ನನ್ನ ಪುರಾತನಪದ್ಧತಿಯ ಗಂಡನು ಹೊಸ ವಿಷಯಗಳಿಗೆಲ್ಲಾ ಅಡ್ಡಿಬರುವನು. ನಾನೊಂದನ್ನು ಹೇಳಿದರೆ ತಾನೊಂದನ್ನು ಹೇಳುವನು. ನಾಜೋಕು ನಯ ನೈಪುಣ್ಯಗಳು ಅವನ ಸಮೀಪಕ್ಕೆ ಬರಲೂ ಆಗದು. ಮುದುಕನಾಗುತ್ತ ಹೋದಂತೆಲ್ಲಾ ಅವನಿಗೆ ಇವುಗಳಲ್ಲಿ ಅಶ್ರದ್ಧೆಯು ಹೆಚ್ಚುತ್ತಲಿದೆ.

ಪ್ರಿಯ:—ಗಂಡಸರು ಮುದುಕರೆಂದೂ ಹೆಂಗಸರು ಕುರೂಪಿಗಳೆಂದೂ ತಾವಾಗಿಯೇ ಒಪ್ಪಿಕೊಳ್ಳುವ ಮುದುಕಗಂಡಸರೂ ಕುರೂಪಿ ಹೆಂಗಸರೂ ಎಲ್ಲಿಯಾದರೂ ಇರುವರೆ ?

ಚಂಡಿ:—ಓಹೊ! ಜ್ಞಾಪಕಕ್ಕೆ ಬಂತು. ಪಟ್ಟಣಗಳಲ್ಲಿ ಈಗ ಯಾವ ವಯಸ್ಸಿನ ಹೆಂಗಸರ ಸೌಂದರ್ಯಕ್ಕೆ ಗೌರವವು ಹೆಚ್ಚು ?

ಪ್ರಿಯ:—ಇದುವರೆಗೂ ೪೦ (ನಲವತ್ತು) ವರುಷದವರೆಗೂ ಹೆಂಗಸರಿಗೆ ಸೌಂದರ್ಯಕ್ಕಾಗಿ ಗೌರವವನ್ನು ಕೊಡುತ್ತಿದ್ದರು. ಇನ್ನು ಮುಂದೆ ಅದೇರೀತಿ ೫೦ (ಐವತ್ತು) ವರ್ಷದವರೆಗೂ ನಡೆಯಿಸಬೇಕೆಂದು ಸ್ತ್ರೀಸಮೂಹವು ಸಿದ್ಧಾಂತಮಾಡಿದಂತೆ ಇದೆ.

ಚಂಡಿ:—ಹಾಗಾದರೆ ನಾನು ಇನ್ನೂ ಮುದುಕಿಯಾಗಿಲ್ಲವಷ್ಟೆ ?

ಪ್ರಿಯ:—ನಲ್ವತ್ತುವರ್ಷಗಳು ಕಳೆಯುವವರೆಗೂ ಯಾವ ಹೆಂಗಸೂ ಒಡವೆಗಳನ್ನು ಧರಿಸುವುದಿಲ್ಲ. ಇನ್ನು, ನಿಮ್ಮ ಕಮಲಾವತಿಯು ಸ್ತ್ರೀಸಮಾಜದಲ್ಲಿ ಶಿಶುಪ್ರಾಯಳು.

ಚಂಡಿ:—ನೋಡು! ನನ್ನ ಸೊಸೆ ಕಮಲೆಯು ತಾನೊಬ್ಬವಯಸ್ಸು ಮೀರಿದಹೆಂಗಸೆಂದು ಭಾವಿಸಿ, ಜವಾಹಿರಿಯನ್ನು ಧರಿಸಲು ನಮ್ಮಂತೆ ಆಶೆಪಡುವಳು. ಏನು ಹೇಳಲಿ ?

[ದುರ್ಮತಿ ಕಮಲಾವತಿಯರು ಬರುವರು.]

ಪ್ರಿಯ:—ನಿನ್ನ ಸೊಸೆಯೆ? ಸರಿ; ಸರಿ. ಅವನಾರು? ನಿನ್ನ ತಮ್ಮನೊ?

ಚಂಡಿ:—ಇಲ್ಲ. ನನ್ನ ಸೋದರಳಿಯನು. ಅವರಿಬ್ಬರಿಗೂ ಶೀಘ್ರ

ದಲ್ಲಿಯೇ ವಿವಾಹವಾಗುವುದು. ಈಗಲೇ ಇವರು ಗಂಡಹೆಂಡರಂತೆ ದಿನಕ್ಕೆ ಹತ್ತಾರುಸಾರಿ ಕಚ್ಚಾಡಿ ಮರಳಿ ಒಂದಾಗುವರು. (ದುರ್ಮತಿಯನ್ನು ಕುರಿತು) ದುರ್ಮತಿ, ಮಗೂ, ಕಮಲೆಗೆ ಏನೇನು ವಿಶೇಷ ಮೃದುವಿಷಯ ಗಳನ್ನು ಹೇಳುವಿ ?

ದುರ್ಮ:—ನಾನು ಮೃದುವಿಷಯಗಳನ್ನಾಗಲೀ ಮೃದುನುಡಿಗಳ ನ್ನಾಗಲೀ ಹೇಳುತ್ತಿಲ್ಲ. ಅವಳು ಬೆನ್ನುಹತ್ತಿ ಸುಮ್ಮನೆ ಕಾಡುವಳು. ಅರೆ ಗಳಿಗೆಯಾದರೂ ಸುಖವಾಗಿರಬೇಕೆಂದರೆ ನನಗೆ ಮನೆಯಲ್ಲಿ ಸ್ಥಳವಿಲ್ಲ. ಮನೆಗೆ ಬಂದರೆ ಸುಮ್ಮನೆ ಕಾಡಿಸುವಳು. ನಾನು ತಬೇಲಿಗೆ ಹೋದರೆ ಅಲ್ಲಿ ಯಾವ ತೊಂದರೆಯೂ ಇರುವುದಿಲ್ಲ.

ಚಂಡಿ:—ಕಮಲೆ, ಅವನ ಮಾತಿಗೆ ಗಮನಕೊಡಬೇಡ. ನಿನ್ನ ಬೆನ್ನಿನ ಹಿಂದೆ ಅವನು ಬೇರೊಂದುರೀತಿ ಹೇಳುವನು.

ಕಮ:—ನಮ್ಮ ದುರ್ಮತಿಯು ಬಹು ಧಾರಾಳಸ್ವಭಾವದವನು. ನಾಲ್ವರೆದುರಿಗೆ ಜಗಳವಾಡಿ ಗೋಪ್ಯವಾಗಿ ಕ್ಷಮೆಯನ್ನು ಬೇಡುವನು.

ದುರ್ಮ:—ಇದೊಂದು ಸುಳ್ಳು ? ಮನೆಹಾಳಿ !

ಚಂಡಿ:—ಎಲ, ಎಲಾ! ನೀನೊಳ್ಳೆಯ ಕೊರಮನೊ! (ಪ್ರಿಯಸೇನ ನನ್ನು ಕುರಿತು) ಪ್ರಿಯಸೇನ, ಅವರ ಮುಖಭಾವವನ್ನು ನೋಡು. ಅವರಿಬ್ಬ ರಿಬ್ಬರಗೂ ಹೋಲಿಕೆಯು ಚೆನ್ನಾಗಿಲ್ಲವೆ? ಚೆನ್ನಾಗಿ ಒಪ್ಪುವುದಿಲ್ಲವೆ ? ಎತ್ತರವೂ ಸರಿಯಾಗಿದೆ. ಎಲ್ಲಿ ಮಗೂ, ನಿನ್ನ ಬೆನ್ನಿಗೆ ಅವಳ ಬೆನ್ನನ್ನು ಸೇರಿಸಿ ನಿಲ್ಲು. ನೋಡುವ. ದುರ್ಮತಿ, ಹೀಗೆ ಬಾ, ಪ್ರಿಯಸೇನನು ನೋಡಲಿ, ನಿಂತುಕೊ.

[ದುರ್ಮತಿಯು ಕಮಲಾವತಿಯ ಬೆನ್ನಿಗೆ ತನ್ನ ಬೆನ್ನನ್ನು ಸೇರಿಸಿ ನಿಲ್ಲುವನು.]

ದುರ್ಮ:—ನನಗೇನು ಗೋಳುಬಂತಪ್ಪ ! (ಉಳತೆಯನ್ನು ಮಾಡಲು ತಲೆಯನ್ನು ಹಿಂದಕ್ಕೆ ಸರಿಸುವನು)

ಕಮು:—ಅಯ್ಯೋ ! ಅಯ್ಯೋ !! ನನ್ನ ತಲೆಯನ್ನು ಇವನು ಒಡೆದು ಹಾಕುವನು !!

ಚಂಡಿ:—ಛಾ, ಪಾಪಿ ! ಪ್ರಾಪ್ತವಯಸ್ಕನಾದ ಗಂಡಸಾಗಿ ಹೀಗೆ ಮಾಡಬಹುದೇನೋ ? ನಾಚುಕೆಕೇಡು !! ಛೀ !!

ದುರ್ಮ:—ನಾನು ಪ್ರಾಪ್ತವಯಸ್ಕನೊ ? ಹಾಗಾದರೆ ನನ್ನ ಆಸ್ತಿಯನ್ನು ನನ್ನ ಸ್ವಾಧೀನಕ್ಕೆ ಕೊಟ್ಟುಬಿಡು. ನನ್ನ ಆಸ್ತಿಯು ನನ್ನ ವಶವಾದರೆ ಯಾರಿಂದಲೂ ಪೀಡಿಸಿಕೊಳ್ಳಬೇಕಾದುದೇ ಇಲ್ಲ ; ನನ್ನ ಹೊಟ್ಟೆಯನ್ನು ನೀವೆಲ್ಲಾ ಉರಿಸುತ್ತಿರುವಿರಿ ?

ಚಂಡಿ:—ನಿನಗೆ ವಿದ್ಯೆಯನ್ನು ಹೇಳಿಸಿದ ಶ್ರಮಕ್ಕೆ ಇದೇನೂ ಪ್ರತಿಫಲ ? ನನ್ನ ಮಗನಾಗದಿದ್ದಮಾತ್ರಕ್ಕೆ ಏನಾಯಿತು? ನಿನ್ನನ್ನು ಬಾಲ್ಯದಿಂದಲೂ ಪೋಷಿಸಿ ಸಲಹಿದವರಾರು ? ನೀನು ವ್ಯಾಧಿಗ್ರಸ್ತನಾದಾಗ ನಾನು ಅತ್ತಿಲ್ಲವೆ ? ವೈದ್ಯದ ಪುಸ್ತಕವನ್ನೆಲ್ಲಾ ಓದಿ ಔಷಧವನ್ನು ತಯಾರಿಸಿ ಕೊಟ್ಟಿಲ್ಲವೆ ?

ದುರ್ಮ:—ಹುಟ್ಟಿದಂದಿನಿಂದ ನೀನು ನನ್ನನ್ನು ಪ್ರೀತಿಸುತ್ತಿರುವುದರಿಂದ ನೀನು ಅಳಲೇಬೇಕು. ವೈದ್ಯಪುಸ್ತಕದಲ್ಲಿ ಮದ್ದನ್ನು ಒಂದಾವರ್ತಿ ಕುಡಿಸಬೇಕೆಂದು ಇದ್ದರೆ ಹತ್ತುಸಾರಿ ಕುಡಿಸುವಿ. ಇನ್ನುಮೇಲೆ ನಿನ್ನ ರಗಳೆಗಳು ಸಾಕು.

ಚಂಡಿ:—ನಿನಗೆ ಒಳ್ಳೆಯದಾಗಬೇಕೆಂದಲ್ಲವೆ ಅದನ್ನೆಲ್ಲವನ್ನು ಮಾಡಿದುದು ? ಯಾರಿಗಾಗಿ ಮಾಡಿದೆನೆಂಬುದು ನಿನಗೆ ತಿಳಿಯದೊ ?

ದುರ್ಮ:—ನೀನು ನನ್ನ ಒಳ್ಳೆಯದನ್ನೂ ಕೆಟ್ಟದನ್ನೂ ಕಟ್ಟಿಕೊಂಡು ಅಳುವುದೇಕೆ ? ನಿನಗಾಗಬೇಕಾದುದೇನು ? ನಾನು ಸಂತೋಷವಾಗಿರುವಾಗ ನೀನು ಅಡ್ಡಮಾಡುವುದೇಕೆ ! ನನಗೆ ಒಳ್ಳೆಯದಾಗುವದಿದ್ದರೆ ಆಗುವಕಾಲಕ್ಕೆ ಆಗಲಿ; ಇಲ್ಲವಾದರೆ ಹೋಗಲಿ. ನೀನು ಸುಮ್ಮನೇ ಹೇಳಿ ಹೇಳಿ ಕಾಡಿಸುವುದೇಕೆ ?

ಚಂಡಿ:—ನೀನು ಹೇಳುವುದೆಲ್ಲಾ ಸುಳ್ಳು, ನೀನು ಉತ್ಸಾಹದಿಂದ ಸಂತೋಷವಾಗಿದ್ದುದನ್ನು ನಾನು ನೋಡಿಯೇ ಇಲ್ಲ. ನೀನು ಆನಂದಮಂದಿರಕ್ಕೋ, ಎಲ್ಲಿಗೋ, ಹೋಗಿ, ಕುಡಿದು ಕುಳಿತಿರುವಿ. ನಾನು ನಿನ್ನೊಡನೆ ಸಂತೋಷವಾಗಿ ಕಾಲವನ್ನು ಕಳೆಯುವದೆಂದು ?

ದುರ್ಮ:—ಆ ಕಾಲವು ಬಂದಾಗ !

ಚಂಡಿ:—ಇದೆಲ್ಲಾದರೂ ಉಂಟೆ ? ಇವನ ನಡತೆಯನ್ನು ನೋಡಿದರೆ ಎದೆಯು ಒಡೆದುಹೋಗುವುದು.

ಪ್ರಿಯ:—ಎಲಾ ತಾಯಿ, ನಾನು ಸ್ವಲ್ಪ ಧರ್ಮಬೋಧೆಯನ್ನು ಮಾಡಿ ಈತನಲ್ಲಿ ಕರ್ತವ್ಯಜ್ಞಾನವನ್ನು ಹುಟ್ಟಿಸಲು ಪ್ರಯತ್ನಪಡುವೆನು.

ಚಂಡಿ:—ಕಮಲೆ, ಬಾ. ನಾವು ಹೋಗುವ. ಪ್ರಿಯಸೇನನೆ, ನನ್ನ ದುರವಸ್ಥೆಯನ್ನು ನೋಡಿದಿಯಾ ? ಇಂತಹ ಮುದ್ದು ಸುಂದರನಾದ, ಮತ್ತು ಕ್ರೋಧವು ಹುಟ್ಟುವಂತೆ ಮಾಡುವ, ಅವಿಧೇಯನಿಂದ ತೊಂದರೆಗೊಳಗಾಗುತ್ತಿರುವ ಹೆಂಗಸು ಮತ್ತೆಲ್ಲಾದರೂ ಇರುವಳೆ ? ಅಯ್ಯೋ ! ಹಣೆಯಬರಹ.

(ಚಂಡಿ ಕಮಲೆಯರು ತೆರಳುವರು.)

ದುರ್ಮ :—(ಕುಣಿದಾಡುತ್ತ) ಅವಳು ಅಳಲಿ ! ಹಾಗೆಯೇ ಮಾಡಬೇಕು !! ಅವಳು ಅತ್ತರೇ ನನಗೆ ಸಂತೋಷ !! ಅವರು ಒಂದು ಪುಸ್ತಕವನ್ನು ಹಿಡಿದುಕೊಂಡು ಒಂದು ದಿನವನ್ನೆಲ್ಲಾ ಕಳೆಯುವರು. ಅನಂತರ ಒಂದು ಹಗಲೆಲ್ಲಾ ಅಳುವರು. ಅಳಿಸುವ ಪುಸ್ತಕವೇ ಬಹು ಸೊಗಸಾದ ಪುಸ್ತಕವಂತೆ !

ಪ್ರಿಯ:—ನಿನಗೆ ಹೆಂಗಸರ ವಿಷಯದಲ್ಲಿ ವಿಶೇಷ ವಿಶ್ವಾಸವಿರುವಂತೆ ತೋರುವುದಿಲ್ಲ.

ದುರ್ಮ:—ಅವರಿಗೆ ಅಷ್ಟೇ ಸಾಕು. ಅವರನ್ನು ಅಷ್ಟರಲ್ಲಿಯೇ ಇಟ್ಟಿರಬೇಕು. ತಿಳಿಯಿತೆ ?

ಪ್ರಿಯ:—ನೀನು ವರಿಸಬೇಕಾಗಿರುವ ಸ್ತ್ರೀಯ ಮೇಲೂ ಈ ರೀತಿಯಾ

ದ ಮಮತೆಯು ಇರಲಾರದು ! ಕಮಲೆಯು ಸುಂದರಳೂ, ಶಾಂತಿಸ್ವಭಾವ ದವಳೂ ಆಗಿರುವಂತಿದೆ.

ದುರ್ಮ:—ಅಹುದು ; ಅಹುದು. ಆ ವಿಷಯಗಳು ನಿನಗೇನು ಗೊತ್ತು ? ಅವಳ ಸ್ವಭಾವಗಳನ್ನು ಎಳ್ಳಷ್ಟೂ ತಪ್ಪಿಲ್ಲದೆ ನಾನು ಚೆನ್ನಾಗಿ ಬಲ್ಲೆನು. ಅವಳು ಶಾಂತಳೆ ? ಅಬ್ಬಾ ! ಅವಳ ರಗಳೆ, ನಸಿನಸಿ, ಅಸಹ್ಯದ ಕೃತ್ಯಗಳು, ಥೂ ! ಅವಳಂತಹ ವಸ್ತುವು ಪೃಥ್ವಿಯಲ್ಲಿಯೇ ಇಲ್ಲ.

ಪ್ರಿಯ:—(ಸ್ವಗತಂ) ಪ್ರಣಯಿಗೆ ಒಳ್ಳೆಯ ಪ್ರೋತ್ಸಾಹವಲ್ಲವೆ ?

ದುರ್ಮ :—ಸಣ್ಣ ಹುಡುಗಿಯಾಗಿದ್ದಾಗಿನಿಂದಲೂ ಅವಳನ್ನು ನಾನು ಚೆನ್ನಾಗಿ ಬಲ್ಲೆನು. ಪೊದರಿನಲ್ಲಿರುವ ಮೊಲ, ನಡಿಗೆಯನ್ನು ಕಲಿಯುತ್ತಿರುವ ಕುದುರೆಗಳಿಗಿಂತಲೂ ಹೆಚ್ಚಾಗಿ ಅವಳಲ್ಲಿ ಚೇಷ್ಟೆಗಳಿವೆ.

ಪ್ರಿಯ :—ಅವಳು ಮಿತಭಾಷಿಣಿಯೆಂದು ಕೇಳಿರುವೆನು.

ದುರ್ಮ :—ನಾಲ್ವರೆದುರಿಗೆ ಅವಳು ಹಾಗಿರುವಳು. ಜತೆಗಾರರ ಸಂಗಡ ಅವಳ ಆರ್ಭಟವನ್ನು ನೋಡಬೇಕು !

ಪ್ರಿಯ :—ಅವಳಲ್ಲಿರುವ ವಿನಯವನ್ನು ನೋಡಿದರೆ ನನಗೆ ಅಕ್ಕರೆಯು ಹುಟ್ಟುವುದು.

ದುರ್ಮ :—ಅವಳ ಇಷ್ಟಕ್ಕೆ ಸ್ವಲ್ಪವಾದರೂ ವಿರೋಧವಾಗಿ ನಡೆದವರನ್ನು ಅವಳು ಒದೆದು ಬಚ್ಚಲಿಗೆ ನೂಕಬಿಡುವಳು. ಅವಳು ಸಾಮಾನ್ಯಳಾದ ಸ್ತ್ರೀಯಲ್ಲ.

ಪ್ರಿಯ :—ಹೋಗಲಿ ! ಅವಳು ಸುಂದರಿಯು ಅಹುದೊ ಅಲ್ಲವೊ? ಅದನ್ನಾದರೂ ಒಪ್ಪುವಿಯೊ ಇಲ್ಲವೊ?

ದುರ್ಮ :—ಆಹಾಹಾ ? ಏನುಹೇಳಲಿ ? ಅದೂ ಒಂದು ಸೌಂದರ್ಯವೆ? ಈ ಪ್ರಾಂತದಲ್ಲಿ ಕಲಾಮಣಿಯನ್ನು ಬಿಟ್ಟರೆ, ಬೇರೆ ರೂಪವಂತರಿಲ್ಲ ! ಅವಳಿಗಿಂತ ರೂಪವಂತರು ಬೇರೆ ಇರುವರೆ ? ಥೂ ! ಕಮಲೆಯ ಕಣ್ಣೆರಡೂ ಕಾಡಿಗೆಯಹಾಗೆ ಕಪ್ಪಗಿವೆ. ಕೆನ್ನೆಗಳು ಕೆಂಪಗೆ ವರಗುದಿಂಬ

ನಂತೆ ಇವೆ. ಸಾಮಾನ್ಯ ಹೆಂಗಸರಿಗಿಂತ ಎರಡುಪಾಲು ರೂಪವು ಕಲಾಮ ಣಿಯಲ್ಲಿದೆ.

ಪ್ರಿಯ :—ನಿನಗೆ ಒದಗಿರುವ ತೊಂದರೆ, ಗಂಡಾಂತರ, ನಿಮ್ಮ ಸ್ತ್ರೀಯ ರಗಳೆಗಳನ್ನು ತಪ್ಪಿಸುವ ಮಿತ್ರನಿಗೆ ಏನನ್ನು ಕೊಡುವಿ ?

ದುರ್ಮ :—ಏನು, ಏನು ? ಮತ್ತೊಮ್ಮೆ ಹೇಳು

ಪ್ರಿಯ :—ಕಮಲಾವತಿಯನ್ನು ಇಲ್ಲಿಂದ ಕರೆದುಕೊಂಡು ಹೋಗಿ ನೀನು ಕಲಾಮಣಿಯೊಡನೆ ಸುಖವಾಗಿರುವಂತೆ ಮಾಡಿಕೊಡುವ ಮಿತ್ರನನ್ನು ವಂದಿಸಿ ಅವನ ಉಪಕಾರವನ್ನು ಸ್ಮರಿಸುವೆಯೊ ?

ದುರ್ಮ :—ಕಮಲಾವತಿಯನ್ನು ಹೊತ್ತುಕೊಂಡು ಹೋಗುವವರೂ ಇರುವರೊ ?

ಪ್ರಿಯ :—ಅವನೇ ನಾನು. ನೀನು ಸಾಹಾಯ್ಯ ಮಾಡುವುದಾದರೆ ನಾನು ಅವಳನ್ನು ಕರೆದುಕೊಂಡು ಚಂದ್ರಪುರಿಗೆ ಓಡಿಹೋಗುವೆನು ಪುನಃ ನೀನು ಕಮಲಾವತಿಯನ್ನು ನೋಡುವ ಭಯವಿಲ್ಲ.

ದುರ್ಮ :—ಸಾಹಾಯ್ಯವೆ ! ನನ್ನ ಪ್ರಾಣವೇ ಹೋಗುವುದಾದರೂ ಲಕ್ಷ್ಯಮಾಡದೆ ನಿಮಗೆ ನನ್ನ ಕಯ್ಯಿಲ್ಲಾದ ಸಾಹಾಯ್ಯವನ್ನು ಮಾಡುವೆನು. ಒಂದೇಒಂದು ಗಳಿಗೆಗೆ ಗಾವುದದೂರ ಓಡುವ ಕುದುರೆಗಳನ್ನು ಕಟ್ಟಿ ಗಾಡಿ ಯನ್ನು ಸಿದ್ಧಪಡಿಸುವೆನು. ಜತೆಗೆ ನೀವು ಅಪೇಕ್ಷಿಸದೆಯೂ ನಿಮ್ಮ ನಿರೀ ಕ್ಷಣೆಯಲ್ಲಿ ಇಲ್ಲದೆಯೂ ಇರುವ ಕಮಲೆಯ ಜವಾಹಿರಿಯ ಪೆಟ್ಟಿಗೆಯನ್ನೂ ತಂದುಕೊಡುವೆನು. ಏನು ಹೇಳುವಿ ?

ಪ್ರಿಯ :—ನೀನು ನಿಜವಾಗಿಯೂ ಧೀರನೇ ಅಹುದು.

ದುರ್ಮ :—ಈ ಕೆಲಸವನ್ನು ಪೂರ್ತಿಮಾಡುವುದರೊಳಗಾಗಿ ನನ್ನ ಧೈರ್ಯವೆಷ್ಟೆಂಬುದನ್ನು ಇನ್ನೂ ಚೆನ್ನಾಗಿ ತಿಳಿಯುವಿ.

(ಇಬ್ಬರೂ ಹೊರಟುಹೋಗುವರು.)

# ಮೂರನೆಯ ಅಂಕ

## I

[ದೇವದತ್ತನ ಮನೆಯ ಪಡಸಾಲೆ. ದೇವದತ್ತನು ಪ್ರವೇಶಿಸುವನು.]

ದೇವ :—(ಸ್ವಗತಂ) ವಿಜಯಪಾಲನು ಸಭ್ಯಗೃಹಸ್ಥನು. ತನ್ನ ಮಗನಂತಹ ವಿಜಯಸಂಪನ್ನನು ಜಗತ್ತಿನಲ್ಲೇ ಬೇರೊಬ್ಬನಿಲ್ಲವೆಂದು ಪತ್ರವನ್ನು ಬರೆದಿರುವನು. ಆದರೆ, ಅವನಂತಹ ಪಟಿಂಗನು ಮತ್ತೊಬ್ಬನಿಲ್ಲವೆಂದು ಬೋಧೆಯಾಗುತ್ತಲಿರುವುದು. ಅವನ ವರ್ತನವು ಅಸಾಧ್ಯವಾದುದಾಗಿರುವುದು. ಪಡಸಾಲೆಯಲ್ಲಿ ನನ್ನ ಆರಾಮ ಕುರ್ಚಿ (Easy Chair) ಯ ಮೇಲೆ ಸುಖವಾಗಿ ಕುಳಿತು, ಪಾದರಕ್ಷೆಗಳನ್ನು ಅಲ್ಲಿಯೇ ಬಿಸುಟು ಅವನ್ನು ತೆಗೆದಿಡಲು ನನಗೆ ಆಜ್ಞೆ ಮಾಡುವನು. ಇವನ ನಡತೆಯನ್ನು ನೋಡಿದ ನಿರ್ಮಲೆಯ ಪಾಡೇನಾಗಿರಬಹುದು ? ಪ್ರಾಯಶಃ ಅವಳಿಗೆ ಹುಚ್ಚೇ ಹಿಡಿದಿರಬಹುದು. ಬುದ್ಧಿಭ್ರಮೆಯಿಂದ ಅವಳು ಗಾಬರಿಯಾಗಿರುವುದರಲ್ಲೇನೂ ಸಂಶಯವಿಲ್ಲ.

(ನಿರ್ಮಲೆಯು ತನ್ನ ಸಾಮಾನ್ಯವಾದ ಉಡುಪನ್ನು ಧರಿಸಿ ಬರುವಳು)

ದೇವ:—ನಿರ್ಮಲೆ! ನನ್ನ ಮಾತಿನಂತೆ ನೀನು ಉಡುಪನ್ನು ಬದಲಾಯಿಸಿರುವಿ. ಈ ಬದಲಾವಣೆಯ ಆವಶ್ಯಕತೆಯೇ ಇಲ್ಲವೆಂದು ತೋರುತ್ತಿದೆ.

ನಿರ್ಮ:—ನಿನ್ನ ಆಜ್ಞೆಯು ಸರಿಯಾದುದೊ, ಅಲ್ಲವೊ, ಎಂಬುದನ್ನು ಕ್ಷಣಮಾತ್ರವೂ ಚರ್ಚಿಸದೆ, ಶಿರಸಾವಹಿಸಿ ನಡೆಯಿಸುವುದು ನನ್ನ ಕರ್ತವ್ಯವೆಂದು ತಿಳಿದಿರುವೆನು.

ದೇವ:—ಕೆಲವುವೇಳೆ ನಾನು ನನ್ನ ಅಭೀಷ್ಟಗಳನ್ನು ಸಕಾರಣವಾಗಿ ತಿಳಿಸುವೆನಲ್ಲವೆ ? ನೀನು ವರಿಸಬೇಕಾಗಿರುವ ಯುವಕನು ಬರುವನೆಂದು ಆರೀತಿ ಮಾಡೆಂದು ಹೇಳಿದೆನು.

ನಿರ್ಮ:—ಏನೋ ಅಸಾಧಾರಣವಸ್ತುವನ್ನು ನಿರೀಕ್ಷಿಸಬೇಕೆಂದು ನೀನು ಹೇಳಲಿಲ್ಲವೆ ? ಮೂಲವಸ್ತುವು ನಿನ್ನ ವರ್ಣನೆಗಿಂತ ಬಹುಮಟ್ಟಿನ ಪರಿ

ವರ್ತನಸ್ಥಿತಿಯಲ್ಲಿರುವುದು.

ದೇವ:—ನನ್ನ ಆಯುಸ್ಸಿನಲ್ಲಿ ಇಷ್ಟುವುಟ್ಟಿನ ಆಶ್ಚರ್ಯವು ಎಂದೂ ಹುಟ್ಟಲಿಲ್ಲ! ಈಗ ನನ್ನ ಬುದ್ಧಿಶಕ್ತಿಯೆಲ್ಲವೂ ವೈರೂಪ್ಯವನ್ನು ಪಡೆದಿದೆ.

ನಿರ್ಮ:—ಆರೀತಿಯ ಪುರುಷನನ್ನು ನಾನು ಎಲ್ಲಿಯೂ ನೋಡಿರಲಿಲ್ಲ. ಅವರಲ್ಲಿ ಪ್ರಾಪಂಚಿಕಜ್ಞಾನವು ಬಹಳ ಚನ್ನಾಗಿರುವುದು.

ದೇವ:—ಅದೆಲ್ಲವನ್ನೂ ಅವನು ಅನ್ಯದೇಶೀಯರಿಂದ ಕಲಿತಿರುವನು. ದೇಶಸಂಚಾರದಿಂದ ಯುವಕರು ವಿನಯುವನ್ನು ಸಂಪಾದಿಸುವರೆಂದು ನಾನು ಆಲೋಚಿಸಿದುದು ಕೇವಲ ಭ್ರಮೆಯೇ ಸರಿ

ನಿರ್ಮ:—ಅವೆಲ್ಲವೂ ಅವರ ಸ್ವಭಾವಜನ್ಯವಾದ ಗುಣಗಳಿರಬಹುದು.

ದೇವ:—ಚೀ! ಸ್ವಭಾವಜನ್ಯಗುಣಗಳು! ಸಹವಾಸವೂ ಚನ್ನಾಗಿಲ್ಲ. ಜತೆಗಾರನು ಗಾಯಕ! ಅವನ ಉಪದೇಶವು ಬೇರೆ!!

ನಿರ್ಮ:—ನೀನು ಹೇಳುವುದು ನಿಜವೆ? ಗಾಯಕನ ಉಪದೇಶದಿಂದ ಭಯದ ನೋಟವೂ ಲಜ್ಜಾಯುಕ್ತವಾದ ಸ್ವಭಾವವೂ ಹೆದರಿಕೆಯ ಸಂಭಾಷಣಶಕ್ತಿಯೂ ಬರುವುದೆ?

ದೇವ:—ಯಾರನೋಟ! ಮಗು! ಯಾರಸ್ವಭಾವ? ಯಾರಭಾಷಣಶಕ್ತಿ?

ನಿರ್ಮ:—ರಾಮವರ್ಮರದು! ಅವರ ಭಯದ ನೋಟವೇ ಅವರನ್ನು ನೋಡಿದೊಡನೆಯೇ ನನ್ನ ಮನಸ್ಸನ್ನು ಆಕರ್ಷಿಸಿತು.

ದೇವ:—ಹಾಗಾದರೆ ನೀನು ಮೋಸಹೋಗಿರಬೇಕು. ಭಯದ ನೋಟವೆ? ಅವನ ದೃಷ್ಟಿಯಂತಹ ಪಟಿಂಗತನದ ಕ್ರೂರ ದೃಷ್ಟಿಯನ್ನು ನಾನು ಇದುವರೆಗೂ ನೋಡಿರಲಿಲ್ಲ.

ನಿರ್ಮ:—ನೀನು ವಿಚಿತ್ರವಾಗಿ ಮಾತನಾಡುವಿ! ಅವರಂತಹ ವಿನಯಸಂಪನ್ನರನ್ನು ನಾನು ಇದುವರೆಗೂ ನೋಡಿರಲಿಲ್ಲ. ಬಹು ಒಳ್ಳೆಯವರು.

ದೇವ:—ನೀನೇನು ಮನಃಪೂರ್ತಿಯಾಗಿ ಮಾತನಾಡುವೆಯೋ? ಹುಡುಗಾಟಕ್ಕಾಗಿ ಮಾತನಾಡುವಿಯೋ? ನಾನು ಹುಟ್ಟಿದಂದಿನಿಂದ ಅಂತಹ

ಅಹಂಕಾರದ ಹರಟೆಯ ನಾಯಿಯನ್ನು ಕಂಡಿರಲಿಲ್ಲ.

ನಿರ್ಮ :—ನೀನು ಹೇಳುವುದು ಆಶ್ಚರ್ಯವಾಗಿದೆ. ರಾಮವರ್ಮರು ತಲೆಯನ್ನು ಬೊಗ್ಗಿಸಿಕೊಂಡೇ ನನ್ನನ್ನು ಇದಿರ್ಗೊಂಡರು. ಮಾತು ಪೂರೈಸುವವರೆಗೂ ಭೂಮಿಯ ಮೇಲಿಟ್ಟಿದ್ದ ದೃಷ್ಟಿಯನ್ನು ಅತ್ತಿತ್ತ ಚಲಿಸಲೇ ಇಲ್ಲ. ಮಾತನಾಡಲು ಆರಂಭಿಸಿದರೆ ಅವರಿಗೆ ಬಿಕ್ಕಲು ಬರುತ್ತಿತ್ತು.

ದೇವ :—ನನ್ನನ್ನು ಮರ್ಯಾದೆಯಿಂದ ಇದಿರ್ಗೊಂಡ ವಿಷಯವನ್ನು ಹೇಳುವೆನು ; ಕೇಳು. ಮೊದಲು ನೋಡಿದೊಡನೆಯೇ ಆರ್ಭಟಿಸಿ, ಸಾರ್ವಭೌಮನಂತೆ ಆಜ್ಞೆಯನ್ನು ಕೊಟ್ಟನು. ಅವನು ಮೊಟ್ಟಮೊದಲೇ ವಹಿಸಿದ ಸಲಿಗೆಯನ್ನೂ ಅಟ್ಟಹಾಸವನ್ನೂ ನೋಡಿ ನಾನು ಸ್ತಂಭೀಭೂತನಾದೆನು.

ನಿರ್ಮ :—ನನ್ನೊಡನೆ ಬಹು ಸಂಕೋಚದಿಂದಲೂ ನಾಚುಕೆಯಿಂದಲೂ ಅವರು ಮಾತನಾಡಿದರು. ನವನಾಗರಿಕರ ಹುಚ್ಚಾಟವನ್ನು ದೂಷಿಸಿದರು. ನಗದೆಯೇ ಇರುವ ಹುಡುಗಿಯ ವಿವೇಕವನ್ನು ಕೊಂಡಾಡಿದರು. ನನ್ನ ಮನಸ್ಸಿಗೆ ಎಲ್ಲಿ ಬೇಸರವಾದೀತೊ ಎಂದು ನನ್ನನ್ನು ಗಳಿಗೆಗಳಿಗೆಗೂ ಕ್ಷಮಾಪಣೆಯನ್ನು ಬೇಡಿಬೇಡಿ ಬೇಸರಪಡಿಸಿದರು. ಕೊನೆಗೆ ತಲೆಯನ್ನು ಬಾಗಿಸಿಕೊಂಡೇ ' ನಿರ್ಮಲೆ, ಅರಗಳಿಗೆಯೂ ನಿನ್ನ ಕಾರ್ಯಕ್ಕೆ ನಾನು ಅಡ್ಡಿಯಾಗುವುದಿಲ್ಲ. ' ಎನ್ನುತ ಹೊರಟುಹೋದರು.

ದೇವ :—ಹತ್ತಿಪ್ಪತ್ತು ವರ್ಷಗಳಿಂದಲೂ ನನ್ನನ್ನು ಬಲ್ಲವನಂತೆ ನನ್ನೊಡನೆ ವರ್ತಿಸಿದನಲ್ಲ? ನೂರಾರು ಪ್ರಶ್ನೆಗಳನ್ನು ಅವನು ಕೇಳಿದನು. ನಾನು ಉತ್ತರವನ್ನು ಕೊಡುತಿದ್ದರೂ, ಅದನ್ನು ಲಕ್ಷಿಸದೆ ತನ್ನ ಮನಸ್ಸಿಗೆ ಬಂದಂತೆ ಹರಟುತಿದ್ದನು. ನಾನು ಸ್ವಾರಸ್ಯವಾಗಿ ಮಾತನಾಡಲಾರಂಭಿಸಿದರೆ ಕುಚೇಷ್ಟೆ ಮಾಡುತಿದ್ದನು. ಸೇನಾಧೀಶ ವೀರವರ್ಮನ ಕಥೆಯನ್ನು ಹೇಳಲು ಆರಂಭಿಸಿದರೆ, ' ಷರಬತ್ತನ್ನು ಮಾಡುವುದರಲ್ಲಿ ನೀನು ಜಾಣನೊ? ' ಎಂದು ಕೇಳಿದನು. ನಿರ್ಮಲೆ, ನೋಡಿದಿಯೋ? ನಿಮ್ಮಪ್ಪನನ್ನು ' ಷರಬತ್ತನ್ನು ಮಾಡಲು ನಿನ್ನಲ್ಲಿ ಜಾಣ್ಮೆಯಿದೆಯೊ? ' ಎಂದು ಪ್ರಶ್ನೆ ಮಾಡಿದನಲ್ಲ ?

ಅವನ ಧೈರ್ಯವು ಎಂತಹದೆಂದು ಹೇಳಲಿ ?

ನಿರ್ಮ : —ನಮ್ಮಿಬ್ಬರಲ್ಲಿ ಒಬ್ಬರು ಮೋಸಹೋಗಿರಬೇಕೆಂದು ನನಗೆ ತೋರುತ್ತದೆ.

ದೇವ :—ಅವನ ನಡತೆಯಂತೆ ಅವನ ಸ್ವಭಾವವೂ ಇರುವುದಾದರೆ ಅವನನ್ನು ವಿವಾಹವಾಗಲು ನಿನಗೆ ಸಮ್ಮತಿಯನ್ನು ಕೊಡುವಂತಿಲ್ಲ.

ನಿರ್ಮ :—ನನಗೆ ತೋರಿಬರುವಂತೆ ಅವರು ನಿಜವಾಗಿಯೂ ಅಧೈರ್ಯ ಸ್ವಭಾವದವರಾದರೆ ನನ್ನ ಸಮ್ಮತಿಯೂ ದೊರೆಯಲಾರದು.

ದೇವ :—ಹಾಗಾದರೆ, ಒಂದು ಭಾಗದಲ್ಲಿ ನಾವಿಬ್ಬರೂ ಸಮ್ಮತಿಸಿರುತ್ತೇವಷ್ಟೆ ! ಅದೇನೆಂದರೆ, ಅವನನ್ನು ವರ್ಜಿಸುವುದು.

ನಿರ್ಮ :—ಕೆಲವು ನಿಬಂಧನೆಗಳಮೇಲೆ ಮಾತ್ರ ಅಹುದೆನ್ನಬಹುದು. ಅವರು ಪಟಿಂಗಸ್ವಭಾವದವರಲ್ಲವೆಂದು ನಿನಗೂ, ಧೈರ್ಯಶಾಲಿಯೆಂದು ನನಗೂ ಕಂಡುಬಂದರೆ ; ಅವರು ಒಳ್ಳೆಯ ಮರ್ಯಾದಾರ್ಹರೆಂದು ನಿನಗೂ, ವಾಚಾಳಿಯಾಗಿ ಕಾರ್ಯಸಾಧನೆಯಲ್ಲಿ ಜಾಣರೆಂದು ನನಗೂ, ತಿಳಿದುಬಂದರೆ ; ಏನು ಹೇಳಲಿ?—ಅವರು ಸರಿಯಾದ ಮನುಷ್ಯರೇ ಅಹುದು ! ಅಲ್ಲವೆ, ಇಷ್ಟು ಸದ್ಗುಣಗಳುಳ್ಳವರು ಮತ್ತೆಲ್ಲಾದರು ದೊರೆಯುವರೆ ?

ದೇವ:—ನಮಗೆ ಈ ರೀತಿ ಕಂಡುಬಂದರೆ ! ಅದು ಅಸಾಧ್ಯ ! ಅವನ ನಡತೆಗಳು ಚನ್ನಾಗಿಲ್ಲ ! ಈ ವಿಷಯದಲ್ಲಿ ನಾನು ನಿಜವಾಗಿಯೂ ಮೋಸ ಹೋಗಿಲ್ಲ. ಅವನ ಬಾಹ್ಯನಡತೆಗಳಿಂದಲೇ ಅವನ ಗುಣವನ್ನು ತಿಳಿದಿರುವೆನು.

ನಿರ್ಮ :—ಆದರೂ ಆಂತರ್ಯದಲ್ಲಿ ಗುಣಗಳು ಒಳ್ಳೆಯವಾಗಿರಬಹುದು.

ದೇವ :—ಅಹುದು ; ಅಹುದು. ಹುಡುಗಿಯರಿಗೆ ಯುವಕರ ಬಾಹ್ಯಚರ್ಯೆಗಳು ಒಪ್ಪಿತವಾದುವಾದರೆ, ಅವರಲ್ಲಿ ಇಲ್ಲದ ಸದ್ಗುಣಗಳನ್ನು ಕಲ್ಪಿಸಿಕೊಳ್ಳುವರು. ಅಂತಹರ ಭಾವನೆಯಲ್ಲಿ ಸುಂದರವಾದ ಮುಖವುಳ್ಳವನು ಸರ್ವಜ್ಞನು ! ಅಂದವಾದ ಗಾತ್ರವುಳ್ಳವನು ಸಕಲಗುಣಸಂಪನ್ನನು !! ಸರಿಯೆ ?

ನಿರ್ಮ:—ಸರಿ! ನನ್ನ ಜಾಣ್ಮೆಯನ್ನು ಕೊಂಡಾಡುತ ಆರಂಭವಾದ ಈ ಸಂಭಾಷಣೆಯು ನನಗೆ ತಿಳುವಳಿಕೆಯಿಲ್ಲವೆಂದು ಹೇಳುವುದರಲ್ಲಿ ಕೊನೆಗಂಡಂತಾಯಿತು. ಅಷ್ಟೆ!

ದೇವ:—ನಿರ್ಮಲೆ, ಆಗ್ರಹಗೊಳ್ಳಬೇಡ. ನಿಜವಾಗಿಯೂ ಆ ಪಟಂಗನಾದ ರಾಮವರ್ಮನು ನಮ್ಮ ವಿರೋಧಾಭಿಪ್ರಾಯಗಳನ್ನು ಸರಿಪಡಿಸಬಲ್ಲ ಜಾಣನಾದರೆ ಆಗ ಇಬ್ಬರ ಸಮ್ಮತಿಯನ್ನೂ ಪಡೆಯುವನು.

ನಿರ್ಮ:—ನಮ್ಮಿಬ್ಬರಲ್ಲಿ ಯಾರಾದರೊಬ್ಬರು ನಿಜವಾಗಿಯೂ ಮೋಸಹೋಗಿರಲೇಬೇಕು.

ದೇವ:—ಅಗತ್ಯವಾಗಿಯೂ ಹಾಗಾಗಲಿ. ಆದರೆ ನಾನು ಮೋಸಹೋಗಿಲ್ಲವೆಂಬ ಧೈರ್ಯವು ನನಗೆ ಚನ್ನಾಗಿರುವುದು.

ನಿರ್ಮ:—ನಾನೂ ಮೋಸಹೋಗಿಲ್ಲವೆಂದು ತಿಳಿದಿರುವೆನು! ನೋಡುವ.

(ತೆರಳುವರು)

(ದುರ್ಮತಿಯು ಒಂದು ಪೆಟ್ಟಿಗೆಯನ್ನು ತೆಗೆದುಕೊಂಡು ಓಡಿಬರುವನು)

ದುರ್ಮ:—(ಸ್ವಗತಂ) ಅಬ್ಬಾ! ಅಬ್ಬಬ್ಬಾ!! ಸಿಕ್ಕಿತಪ್ಪಾ ಸಿಕ್ಕಿತು!!! ಇದೇ ಪೆಟ್ಟಿಗೆಯಲ್ಲವೆ? ಕಮಲೆಯ ಹಾರಗಳು, ಒಡವೆಗಳು, ಎಲ್ಲವೂ ಇಲ್ಲಿವೆ. ನಮ್ಮತ್ತೆಯು ಇದನ್ನು ಕಮಲೆಗೆ ಕೊಡದೆ ಮೋಸಪಡಿಸಬೇಕೆಂದಿದ್ದಳಲ್ಲ? ಈಗ ಏನುಮಾಡುವಳೋ ನೋಡುವ. ನಾನೇ ಧೀರನಲ್ಲವೆ? ಆ ಪ್ರಿಯಸೇನನೆಲ್ಲಿ?

(ಪ್ರಿಯಸೇನನು ಬರುವನು)

ಪ್ರಿಯ:—ಪ್ರಿಯ ಮಿತ್ರನೆ, ನಿಮ್ಮತ್ತೆಯೊಡನೆ ಎಂತಹ ಸಂಧಾನವನ್ನು ನಡೆಯಿಸಿದಿ? ಕಮಲೆಯಲ್ಲಿ ಪ್ರೀತಿಯುಳ್ಳವನಂತೆ ನಟಿಸಿ, ನಿಮ್ಮತ್ತೆಯ ಮನೋಭೀಷ್ಟವನ್ನು ನೆರವೇರಿಸುವುದಾಗಿ ವಚನವಿತ್ತು ತೃಪ್ತಿಪಡಿಸಿ ಬಂದಿರುವೆಯೊ? ನಮ್ಮ ಕುದುರೆಗಳು ಪ್ರಯಾಣಕ್ಕೆ ಸಿದ್ಧವಾಗಿವೆಯೊ? ನಾವು ಈಗಲೇ ಹೊರಡಲು ಸಿದ್ಧರಾಗಿರುವೆವು.

ದುರ್ಮ:—ನಿಮ್ಮ ಪ್ರಯಾಣದ ವೆಚ್ಚಕ್ಕಾಗಿ, ಇಗೋ, ತೆಗೆದು ಕೊಳ್ಳಿರಿ.—(ಪೆಟ್ಟಿಗೆಯನ್ನು ಕೊಟ್ಟು) ನಿನ್ನ ಪ್ರೀತಿಪಾತ್ರಳಾದ ಸತಿಯ ಜವಾಹಿರಿಗಳೆಲ್ಲವೂ ಇದರಲ್ಲಿವೆ. ಇದನ್ನು ಅಪಹರಿಸಿದವರ ಮನೆಯು ಹಾಳಾಗಲಿ! ನನಗೇನು?

ಪ್ರಿಯ:—ನಿಮ್ಮತ್ತೆಯಿಂದ ಇದನ್ನು ನೀನು ಪಡೆದ ಬಗೆಯು ಹೇಗೆ?

ದುರ್ಮ:—ನೀನು ನನ್ನನ್ನು ಪ್ರಶ್ನಿಸಕೂಡದು. ತಿಳಿಯಿತೆ? ನಾನು ಸುಳ್ಳನ್ನು ಹೇಳುವ ಪದ್ಧತಿಯಿಲ್ಲ. ಎಂದೂ ಸುಳ್ಳಾಡುವುದಿಲ್ಲ. ಅದಕ್ಕೆಲ್ಲಾ ನಮ್ಮಲ್ಲಿ ನಿಯಮಗಳುಂಟು. ತಿಳಿಯಿತೊ? ನಮ್ಮತ್ತೆಯ ಪೆಟ್ಟಿಗೆಗಳನ್ನು ತೆರೆಯಲು ನನಗೆ ಬಾರದಿದ್ದರೆ, ನಾನು ಆನಂದಮಂದಿರದಲ್ಲಿ ಆನಂದವಾಗಿರುವುದೆಂತು? ಬೇಕಾದಾಗಲೆಲ್ಲಾ ನನಗೆ ಆವ ಅಭ್ಯಂತರವೂ ಇಲ್ಲವಷ್ಟೆ!

ಪ್ರಿಯ:—ಪ್ರತಿದಿನವೂ ಸಾವಿರಾರು ಜನರು ಆ ರೀತಿ ಮಾಡುವರು. ಸಧ್ಯದ ವಿಷಯವನ್ನು ಕೇಳು. ಆ ಕಮಲೆಯು ಜವಾಹಿರಿಗಾಗಿ ನಿಮ್ಮತ್ತೆಯನ್ನು ಕಾಡುತ್ತಿರುವಳು. ನಿಮ್ಮತ್ತೆಯು ಕೊಡಲೊಪ್ಪಿದರೆ, ಇದನ್ನು ಕಷ್ಟವಿಲ್ಲದಂತೆಯೇ ಪಡೆದಂತಾಗುವುದಿಲ್ಲವೆ?

ದುರ್ಮ:—ಮುಂದೆ ನಡೆಯುವುದನ್ನು ಹೇಳಬಲ್ಲವರಾರು? ಅದು ತಿಳಿಯುವವರೆಗೂ ಇದು ನಿನ್ನಲ್ಲೇ ಇರಲಿ. ನಮ್ಮತ್ತೆಯು ಜವಾಹಿರಿಯನ್ನು ಕೊಡುವುದೆ? ಅಬ್ಬಾ! ಬಾಯಿನಲ್ಲಿ ಗಟ್ಟಿಯಾಗಿರುವ ಒಂದು ಹಲ್ಲನ್ನಾದರೂ ಕೀಳಿಸಿಕೊಳ್ಳಲು ಒಪ್ಪುವಳಲ್ಲದೆ, ಆಭರಣಗಳನ್ನು ಕೊಡಲೊಪ್ಪುವುದಿಲ್ಲ. ಖಂಡಿತವಾಗಿಯೂ ಕೊಡಲೊಪ್ಪುವುದಿಲ್ಲ.

ಪ್ರಿಯ:—ಆಭರಣಗಳು ಕಳುವಾಯಿತೆಂದು ಅವಳಿಗೆ ತಿಳಿದರೆ ಅವಳ ಆಗ್ರಹದಿಂದ ಅನರ್ಥವಾದೀತೆಂದು ನನಗೆ ಹೆದರಿಕೆಯಾಗುವುದು.

ದುರ್ಮ:— ಅವಳ ಆಗ್ರಹದ ಚಿಂತೆಯು ನಿನಗೇಕೆ? ಅದೆಲ್ಲವನ್ನೂ ನಾನು ಸರಿಪಡಿಸುತ್ತೇನೆ. ಅವಳ ಆಗ್ರಹಕ್ಕೆ ನಾನು ಒಂದುಕಾಸಿನಲ್ಲಿ ಎಳ್ಳಷ್ಟನ್ನೂ ಸಹ ಬೆಲೆಕಟ್ಟುವುದಿಲ್ಲ. ನಿನಗೇಕೆ ಅದರಚಿಂತೆ? ಅಗೊ! ಅವರೇ ಬರುತ್ತಿರುವರು.

[ಕಮಲಾವತಿ ಚಂಡಿಯರು ಪ್ರವೇಶಿಸುವರು.]

ಚಂಡಿ:—ಕಮಲೆ, ನಿನ್ನ ಮಾತುಗಳನ್ನು ಕೇಳಿದರೆ ನನಗೆ ನಗುವು ಬರುವುದು. ನಿಮ್ಮಂತಹ ಹುಡುಗಿಯರಿಗೆ ಒಡವೆಗಳೇಕೆ? ನಾಚುಕೆಗೇಡು! ಒಡವೆಗಳನ್ನು ಇಟ್ಟುಕೊಳ್ಳುವ ಕಾಲವು ಬೇರೆಯಿದೆ. ಇನ್ನಿಪ್ಪತ್ತು ವರ್ಷಗಳು ಕಳೆಯಲಿ. ಆಗ ನಿನ್ನ ರೂಪವು ಸ್ವಲ್ಪ ಕಡಮೆಯಾಗುವುದು. ಆಗ ಒಡವೆಗಳನ್ನಿಟ್ಟುಕೊಂಡರೆ ಚೆನ್ನಾಗಿ ಕಾಣುವಿ. ತಿಳಿಯಿತೆ?

ಕಮ:—ನಲ್ವತ್ತು ವರ್ಷಗಳಾದ ಮೇಲೆ ಒಡವೆಗಳು ಸೌಂದರ್ಯವನ್ನು ಹೆಚ್ಚಿಸುವುದಾದರೆ, ಇಪ್ಪತ್ತು ವರ್ಷ ಪ್ರಾಯದವಳಾದ ನನ್ನ ಸೌಂದರ್ಯವು ಒಡವೆಗಳಿಂದ ಮತ್ತಷ್ಟು ಹೆಚ್ಚಬೇಡವೆ? ನನ್ನ ಸೌಂದರ್ಯವು ಅವುಗಳಿಂದ ಹೆಚ್ಚುವುದೊ ಇಲ್ಲವೊ?

ಚಂಡಿ:—ನಿನ್ನ ರೂಪರಾಶಿಯು ಪೂರ್ಣವಾಗಿರುವಾಗ ಅದನ್ನು ಹೆಚ್ಚಿಸಬೇಕಾದ ಆವಶ್ಯಕತೆಯೇ ಇಲ್ಲ. ನಿನ್ನ ಕಪೋಲಗಳನ್ನು ನೋಡಿಕೊ. ಎಂತಹ ಮನೋಹರವಾದ ಎಳೆ ಕೆಂಪುವರ್ಣವುಳ್ಳವು. ಅವಕ್ಕೆ ಯಾವ ಒಡವೆಗಳನ್ನು ತಾನೆ ಹೋಲಿಸಬಹುದು? ನಿನ್ನ ವಯಸ್ಸಿನ ಯುವತಿಯರು ಒಡವೆಗಳನ್ನು ಧರಿಸುವ ವಾಡಿಕೆಯಿಲ್ಲ. ನೆರೆಯವರನ್ನು ನೋಡಬಾರದೆ?

ಕಮ:—ನಾನೇಕೆ ಹೇಳಲಿ? ನಾನು ನನ್ನ ಒಡವೆಗಳನ್ನೆಲ್ಲ ಧರಿಸಿಕೊಂಡರೇ, ಯಾರೋ ಒಬ್ಬರಿಗೆ—ಅವರ ಹೆಸರನ್ನು ಈಗ ಏಕೆ ಹೇಳಲಿ—ನನ್ನಲ್ಲಿ ಪ್ರೇಮವು ಹೆಚ್ಚುವುದಾದರೆ?

ಚಂಡಿ:—ಕನ್ನಡಿಯಲ್ಲಿ ನೋಡಿಕೋ. ಥಳಥಳಿಸುತ್ತಲಿರುವ ಸೊಗಸಾದ ಕಣ್ಣುಗಳುಳ್ಳ ನಿನಗೆ ವಜ್ರವೈಢೂರ್ಯಗಳೇಕೆ? (ದುರ್ಮತಿಯನ್ನು ಉದ್ದೇಶಿಸಿ) ಮಗು, ನೀನೇ ಹೇಳು. ಒಡವೆಗಳನ್ನು ಧರಿಸದಿದ್ದರೆ ಕಮಲೆಯು ಸುಂದರಳಾಗಿ ಕಾಣುವಳಲ್ಲವೆ? ಒಡವೆಗಳಿಂದ ಪ್ರಯೋಜನವೇನು?

ದುರ್ಮ:—ಅದನ್ನು ನಾನು ಈಗಲೇ ಹೇಳುವಹಾಗಿಲ್ಲ.

ಕಮ:—ಅಮ್ಮ, ಒಡವೆಗಳನ್ನು ಕೊಟ್ಟರೆ ನೀನೆಂತಹ ಉಪಕಾರ

ವನ್ನು ಮಾಡಿದಂತಾಗುವುದೊ, ಅದನ್ನು ನಾನು ಈಗ ಹೇಳಲಾರೆನು. ನೀನು ಆ ಸ್ವಾರಸ್ಯವನ್ನು ಬಲ್ಲೆಯಾ ?

ಚಂಡಿ :—ಅವೆಲ್ಲಾ ಪುರಾತನ ಒಡವೆಗಳು. ನೀನು ಧರಿಸಿದರೆ ಚೆನ್ನಾಗಿರುವುದಿಲ್ಲ ; ಅಲ್ಲದೆ, ಅವು ಎಲ್ಲಿಯೊ ಬಿದ್ದಿವೆ, ಹುಡುಕಬೇಕು. ಹುಡುಕಿದರೇನು ಸಿಕ್ಕುವುದೆ ? ಅವುಗಳು ಹಾಳಾಗಿ ಹೋಗಿದ್ದರೂ ಹೋಗಿರಬಹುದು.

ದುರ್ಮ:—(ಚಂಡಿಯನ್ನು ಕುರಿತು, ಮತ್ತಾರಿಗೂ ಕೇಳದಂತೆ) ಒಡವೆಗಳು ಎಲ್ಲಿಯೋ ಹೋದುವೆಂದು ಹೇಳಿಬಿಡು. ಅವಳಿಗೆಷ್ಟು ಆಶೆ ? ಅವು ಕಳುವಾಗಿ ಹೋಗಿವೆಯೆಂದು ಹೇಳು. ಅವಳನ್ನು ಸುಮ್ಮನಿಡಬೇಕಾದರೆ, ಅದೇ ಸರಿಯಾದ ಉಪಾಯವು. ತಿಳಿಯಿತೆ ? ಅವು ಕಳುವಾಗಿ ಹೋಯಿತೆಂದು ನೀನು ಹೇಳಿದರೆ ನಾನು ಸಾಕ್ಷಿ ಹೇಳುವೆನು. ನನ್ನ ಸಾಕ್ಷ್ಯವನ್ನೇ ಕೋರು.

ಚಂಡಿ:—(ದುರ್ಮತಿಗೆ) ಮಗು, ನಿನಗಾಗಿಯೇ ನಾನು ಅವಳನ್ನು ಪ್ರೇಮದಿಂದ ಸಲಹುತ್ತಿರುವೆನು. ಅವು ಹಾಳಾಯಿತೆಂದರೆ ನಿಜವಾಗಿಯೂ ಸಾಕ್ಷಿ ನುಡಿಯುವಿಯಷ್ಟೆ ?

ದುರ್ಮ:—ನೀನು ಹೆದರಬೇಡ. ಕಳುವಾದುದನ್ನು ನಾನು ಕಣ್ಣಾರ ಕಂಡೆನೆಂದು ಬೇಕಾದರೂ ಹೇಳುವೆನು. ಅಷ್ಟು ಹೇಳಿದರೆ ಸಾಕೊ ?

ಕಮ:—(ಚಂಡಿಯನ್ನು ಕುರಿತು) ಅಮ್ಮ, ಒಂದು ದಿನದ ಮಟ್ಟಿಗೆ ಕೊಟ್ಟಿರಮ್ಮ. ನಾನು ಅವರಿಗೆ ಅವೆಲ್ಲವೂ ಪೂರ್ವಕಾಲದ ವಸ್ತುಗಳೆಂದು ತೋರಿಸಿದ ಕೂಡಲೇ ಹಿಂದಕ್ಕೆ ಕೊಟ್ಟು ಬಿಡುವೆನು.

ಚಂಡಿ :—ಕಮಲೆ, ನಿನ್ನಲ್ಲಿ ಮುಚ್ಚುಮರೆಯೆ ? ಸಿಕ್ಕಿದರೆ ನಿಜವಾಗಿಯೂ ಕೊಡುವೆನು. ಸತ್ಯವಾಗಿಯೂ ಅವೆಲ್ಲೋ ಮಾಯವಾಗಿವೆ. ಅವೆಲ್ಲಿದ್ದರೇನು ? ನಾವು ಶಾಂತಚಿತ್ತರಾಗಿದ್ದರಾಯಿತು.

ಕಮಲೆ :—ನಾನು ನಿನ್ನ ಮಾತುಗಳನ್ನು ನಂಬಲಾರೆನು. ಕೊಡುವ

ದಿಲ್ಲವೆನ್ನುವುದಕ್ಕೆ ಪ್ರತಿಯಾಗಿ ಈರೀತಿ ಹೇಳುವಿ. ಅವು ಬಹು ಬೆಲೆಯುಳ್ಳ ವಾದಕಾರಣ ನೀನು ಸಿಕ್ಕಿದೆಡೆಯಲ್ಲಿ ಖಂಡಿತವಾಗಿಯೂ ಇಡುವುದಿಲ್ಲ. ಅವು ಗಳ ಬೆಲೆಗೆ ನೀನೇ ಹೊಣೆಯಾಗಿರಬೇಕು.

ಚಂಡಿ:—ಗಾಬರಿಯಾಗಬೇಡ. ಅವುಗಳೇನಾದರೂ ನಾಶವಾಗಿದ್ದರೆ, ಅವುಗಳ ಬೆಲೆಯನ್ನು ನಾನೇ ಕೊಡುವೆನು. ದುರ್ಮತಿಯನ್ನು ಕೇಳು. ಒಡವೆಗಳು ನಿಜವಾಗಿಯೂ ಮನೆಯಲ್ಲಿಲ್ಲ. ನಾನೇನು ಸುಳ್ಳಾಡುವೆನೆ ?

ದುರ್ಮ:—ನಾನು ಅದಕ್ಕೆ ಸಾಕ್ಷಿ. ಅವು ಮನೆಯಲ್ಲಿಲ್ಲ. ಎಲ್ಲೋ ಕಳವಾಗಿ ಹೋಗಿವೆ. ಅವು ಹಾಳಾದವೆಂದು ನಾನು ಪ್ರಮಾಣ ಮಾಡಿ ಹೇಳುವೆನು.

ಚಂಡಿ:—ದೈವಸಂಕಲ್ಪಕ್ಕೆ ಪ್ರತಿಯಾಡದೆ ಸಮಯಕ್ಕೊದಗಿದು ದನ್ನು ಅನುಭವಿಸಿಕೊಂಡಿರುವುದನ್ನು ಕಲಿಯಬೇಕು ಮಗು, ನಮ್ಮ ಆಸ್ತಿಯು ಹಾಳಾದರೂ, ನಾವು ತಾಳ್ಮೆಯನ್ನು ಕಳೆದುಕೊಳ್ಳಬಾರದು. ನನ್ನನ್ನು ನೋಡು. ಎಷ್ಟು ಶಾಂತಳಾಗಿರುವೆನು ?

ಕಮ:—ತೊಂದರೆಯು ಇತರರಿಗೆ ಸಂಭವಿಸಿದರೆ ನಾನೂ ಶಾಂತಳಾ ಗಿರಬಲ್ಲೆನು. ಅದು ಸ್ವಭಾವಜನ್ಯವಾದುದೇ ಅಹುದು.

ಚಂಡಿ:—ನೀನು ಬಹುಜಾಣೆಯಲ್ಲವೆ ? ಹಾಳಾದ ಒಡವೆಗಳಿಗಾಗಿ ಇಷ್ಟು ಆಲೋಚನೆಗಳನ್ನು ವ್ಯರ್ಥಮಾಡುವಿ. ಹುಡುಕಿದರೆ, ಪ್ರಾಯಶಃ ಅವು ಸಿಕ್ಕಿದರೂ ಸಿಕ್ಕಬಹುದು. ಅವನ್ನು ಹುಡುಕುವ ಪರ್ಯಂತ ನೀನು ನನ್ನ ಕೆಂಪಿನ ಬುಲಾಕನ್ನು ಬೇಕಾದರೆ ಹಾಕಿಕೊಂಡಿರು.

ಕಮ:—ಬುಲಾಕನ್ನು ಹಾಕಿಕೊಳ್ಳುವುದೇ ? ಥೂ ! ಅಸಹ್ಯ.

ಚಂಡಿ:—ನಿರ್ಮಲವಾದ ನಿನ್ನ ಮುಖದ ಕಾಂತಿಯು ಮತ್ತಷ್ಟು ಮನೋಹರವಾಗಿರಬೇಕಾದರೆ, ನಿನಗೆ ಕೆಂಪಿನ ಬುಲಾಕೇ ಯೋಗ್ಯವಾದುದು ನಾನು ಬುಲಾಕನ್ನು ಹಾಕಿಕೊಂಡಿರುವಾಗ ನೀನು ನೋಡಿಲ್ಲವೆ ? ಎಷ್ಟು ಚೆನ್ನಾಗಿ ಕಾಣುವೆನು ? ಬುಲಾಕನ್ನು ನಿಜವಾಗಿಯೂ ಕೊಡುವೆನು.

( ಹೊರಟು ಹೋಗುವಳು )

ಕಮಲೆ:—ಥೂ ! ಬುಲಾಕೆಂದರೆ ನನಗೆ ವಾಂತಿಬರುವುದು. ನೀನು ಖಂಡಿತವಾಗಿಯೂ ಹೋಗಕೂಡದು. ಇದೇನು ಗೋಳಪ್ಪ! ಉತ್ತಮವಾದ ಜವಾಹಿರಿಯನ್ನು ಮೂಲೆಗೆ ಬಿಸುಟು ಹರಳುಕಲ್ಲಿನ ಬುಲಾಕನ್ನು ಧರಿಸಬೇಕೆಂದರೆ ಯಾರಿಗೆತಾನೆ ಸಿಟ್ಟಾಗದಿರುವುದು ?

ದುರ್ಮ:—ಕಮಲೆ, ಹುಚ್ಚುಹುಚ್ಚಾಗಿ ಆಡಬಾರದು. ಆ ಬುಲಾಕನ್ನು ತೆಗೆದುಕೊ. ಬಂದಿದ್ದನ್ನೆಲ್ಲಾ ಎಳೆದುಕೊ. ನಿನ್ನ ಜವಾಹಿರಿಯೆಲ್ಲ ನಿನ್ನದೇ. ಹೆದರಬೇಡ. ನಮ್ಮ ಅತ್ತೆಯ ಪೆಟ್ಟಿಗೆಯಿಂದ ನಾನು ಅದನ್ನು ಕಳವುಮಾಡಿ ತಂದಿರುವೆನು. ಅವಳಿಗೆ ಇನ್ನೂ ಆ ವಿಚಾರವು ತಿಳಿದುಬಂದಿಲ್ಲ. ನಿನ್ನ ಕಾಂತನಬಳಿಗೆ ಓಡು. ಹಾರು. ಅವನು ಎಲ್ಲ ಸಂಗತಿಗಳನ್ನೂ ತಿಳಿಸುವನು. ಓಡು. ಅತ್ತೆಯು ಅತ್ತರೆ ನಾನು ಸರಿಪಡಿಸುವೆನು. ನೀನು ಓಡು.

ಕಮ:—ಎಷ್ಟು ಉಪಕಾರವನ್ನು ಮಾಡಿರುವೆ ? ಬಹಳ ಸಂತೋಷವಾಯಿತು. ಅದಕ್ಕಾಗಿ ನಿನಗೆ ಅನೇಕ ವಂದನೆಗಳು.

ದುರ್ಮ:—ಸಾಕು. ಸಾಕು. ನಿನ್ನ ವಂದನೆಗಳು ಸಾಕು. ಅಗೊ, ಅತ್ತೆಯು ಬರುತ್ತಿರುವಳು. ಈಗ ಅವಳಿಗೆ ಕಳ್ಳತನವು ಪ್ರಾಯಶಃ ಗೊತ್ತಾಗಿದೆ ಹೂ ! ಹೂ !! ಓಡು ; ಆಹಾಹಾ ! ನಮ್ಮತ್ತೆಯು ಒಳ್ಳೆಯ ತಿಮಿಂಗಿಲದಂತೆ ಹಾರಾಡುತ್ತಿರುವಳು. ಹಾರಾಡಲಿ.

( ಚಂಡಿಯು ಬರುವಳು )

ಚಂಡಿ:—(ಗಟ್ಟಿಯಾಗಿ) ಅಯ್ಯೋ ! ಕಳ್ಳರು !! ದಂಗೇಕೋರರು !!! ನಮ್ಮ ಮನೆಯನ್ನು ಲೂಟಿಮಾಡಿದಾರೆ !! ನಾವು ಹಾಳಾದೆವು ; ದಿಕ್ಕೆಟ್ಟೆವು !! ಮುಳುಗಿಹೋದೆವು ! ಸರ್ವನಾಶವಾಯಿತು !! ಅಯ್ಯೋ ! ಅಯ್ಯೋ !!

ದುರ್ಮ:—ಅತ್ತೆ, ಅದೇನು ? ನಮಗೇನೂ ಕೇಡು ಸಂಭವಿಸಿಲ್ಲವಷ್ಟೆ?

ಚಂಡಿ:—ಕಳುವಾಗಿದೆ ! ನನ್ನ ಪೆಟ್ಟಿಗೆಯನ್ನು ಯಾರೋ ಕಳ್ಳರು— ಜವಾಹಿರಿಯ ಪೆಟ್ಟಿಗೆಯನ್ನು—ಅಯ್ಯೋ !—ಕದ್ದುಕೊಂಡು ಹೋಗಿರುವರು. ಅಯ್ಯೋ ! ಕಮಲೆಯ ಜವಾಹಿರಿಯ ಪೆಟ್ಟಿಗೆ ! ನಾನು ಕೆಟ್ಟೆನು ! ಕೆಟ್ಟೆನು !!

ದುರ್ಮ:—ಅಷ್ಟೇತಾನೆ! ಹಾ !! ಹಾ !!! ಬಲುಸೊಗಸಾಯಿತು !! ಯಾವ ನಾಟಕದಲ್ಲಿಯೂ ಇಂತಹ ನಟನೆಯನ್ನು ನೋಡಿರಲಿಲ್ಲ ? ಬಲು ಸೊಗಸಾಯಿತು ! ಬಲುಸೊಗಸು !! ನಿಜವಾಗಿಯೂ ಕಳ್ಳತನವು ನಡೆಯಿತೆಂದೇ ನಾನು ನಂಬಿದೆನು. ಹಾ ! ಹಾ !!

ಚಂಡಿ:—ಮಗು, ನಿಜವಾಗಿಯೂ ಕಳುವಾಗಿದೆಯಪ್ಪ. ನಾನು ಕೆಟ್ಟೆನೋ ಕೆಟ್ಟೆ ! ನನ್ನ ಪೆಟ್ಟಿಗೆಯನ್ನು ಒಡೆದು-ಅಯ್ಯೋ, ಎಲ್ಲವನ್ನೂ ದೋಚಿಕೊಂಡು ಹೋಗಿರುವರು.

ದುರ್ಮ:—ಹಾಗೆಯೇ ಹೇಳುತ್ತಿರು. ನನ್ನನ್ನು ಸಾಕ್ಷಿಗೆ ಕರೆಯುವಿಯಷ್ಟೆ. ಗೊತ್ತಾಯಿತು. ನನ್ನನ್ನೇ ಕೋರು.

ಚಂಡಿ:—ಮಗೂ, ಹುಡುಗಾಟವಲ್ಲವೊ ? ದೇವರಾಣೆ, ಒಡವೆಗಳು ಮಾಯವಾಗಿವೆ. ನಾನು ನಿಜವಾಗಿಯೂ ಕೆಟ್ಟೆನೊ ! ಮುಂದೇನುಗತಿ ?

ದುರ್ಮ:—ಅತ್ತೆ, ಅವು ಮಾಯವಾಗಿರುವುದು ನನಗೂ ಗೊತ್ತು. ನಾನೂ ಹಾಗೆಯೇ ಕಮಲೆಯ ಮುಂದೆ ಹೇಳಬೇಕಲ್ಲವೆ ?

ಚಂಡಿ:—ಮಗೂ, ನನ್ನ ಮಾತುಗಳನ್ನು ನಂಬಪ್ಪ. ನಿಜವಾಗಿಯೂ ಹಾಳಾಗಿದೆಯಪ್ಪ ; ಹುಡುಗಾಟವಲ್ಲ.

ದುರ್ಮ:—ಅತ್ತೆ, ನಿನ್ನ ಮಾತುಗಳನ್ನು ಕೇಳಿದರೆ ನನಗೆ ನಗುವು ಹೆಚ್ಚುವುದು. ಹಾ ! ಹಾ ! ಅಹಾ ! –ಸರಿ ! ಸರಿ !! ಕದ್ದವರಾರೆಂಬುದನ್ನು ನಾನು ಚೆನ್ನಾಗಿ ಬಲ್ಲೆನಮ್ಮ ! ಬಲ್ಲೆ ! ಹಾ ! ಹಾ ! ಆಹಾ ! !

ಚಂಡಿ:—ಅಯ್ಯೋ ! ಎಲ್ಲಿಯೋ ಮುಠ್ಠಾಳ ಸಹವಾಸ ! ಪರಿಹಾಸ್ಯಕ್ಕೂ ನಿಜಕ್ಕೂ ಭೇದಜ್ಞಾನವೇ ಬೇಡವೆ ? ಅಯ್ಯೋ ! ಮಡೆಯ ! ನಾನು ಹೇಳುವುದು ನಿಜ. ಸತ್ಯವಾಗಿಯೂ ಪರಿಹಾಸ್ಯವಲ್ಲ. ನನ್ನನ್ನು ಹೀಗೆ ಪೀಡಿಸುವಿಯೇಕೆ ?

ದುರ್ಮ:—ನೀನು ಹೇಳುವುದಕ್ಕೆಲ್ಲಾ ಸರಿಯಾಗಿ ನಾನು ಸಾಕ್ಷಿಯನ್ನು ನುಡಿಯಬೇಕು. ಆಗ ಯಾರೂ ಸಂಶಯಪಡುವುದಿಲ್ಲ. ತಿಳಿಯಿತೆ ?

ನಾನು ಎಲ್ಲಿ ಬೇಕಾದರೂ ಸಾಕ್ಷಿಹೇಳುವೆನು.

ಚಂಡಿ:—ಥೂ ! ನೀಚ ! ನಿನ್ನೊಡನೆ ನನಗೆ ಸಂಭಾಷಣೆಯು ಸಾಕಾ ಯಿತು. ನನ್ನ ಮಾತನ್ನು ಕೇಳುವುದೇ ಇಲ್ಲ. ಚೀ! ಹುಚ್ಚ, ನೀನು ಹುಚ್ಚ ನೆಂದು ನೀನು ಸಾಕ್ಷಿಹೇಳುವೆಯೊ ? ಒಂದುಕಡೆ ಈ ಹುಚ್ಚು ! ಮತ್ತೊಂದು ಕಡೆ ಆ ಮನೆಹಾಳು ಕಳ್ಳರು!! ಇಂತಹ ದುರವಸ್ಥೆಯು ನನಗಲ್ಲದೆ ಮತ್ತಾ ರಿಗೂ ಪ್ರಾಪ್ತವಾಗಿರಲಾರದು.

ದುರ್ಮ:—ಕಳ್ಳರು ಕದ್ದಿರುವರೆಂಬುದಕ್ಕೆ ನಾನು ಸಾಕ್ಷಿ. ಮತ್ತೊಂ ದಕ್ಕೂ ನಾನೇ ಸಾಕ್ಷಿ.

ಚಂಡಿ:—ಇನ್ನೊಂದುವೇಳೆ ಸಾಕ್ಷಿ ಹೇಳುವೆನೆಂದು ನೀನು ಹೇಳಿದರೆ ನಿನ್ನನ್ನು ಹೊರಗೆ ತಳ್ಳುತ್ತೇನೆ. ತಿಳಿಯಿತೆ ? (ಕಮಲೆಯ ಕಡೆಗೆ ತಿರುಗಿ) ಕಮಲೆ, ನಿನ್ನ ಗತಿಯೇನು ? ಎಲಾ ! ಕ್ರೂರಪಾಪಿ, ನಾಯಿ, ನೀನು ನನ್ನ ಸಂಕಟವನ್ನು ನೋಡಿ ನಗುವಿಯೊ ? ನಿನಗೆ ಸಂತೋಷವಾಗಿದೆಯೊ? ನೀಚ, ತೊಲಗು.

ದುರ್ಮ:—ಅದಕ್ಕೂ ನಾನೇ ಸಾಕ್ಷಿ.

ಚಂಡಿ:—ನನ್ನನ್ನು ಅವಮಾನಪಡಿಸುವಿಯ ? ನಾಯಿ, ನಿನಗೆ ಸರಿ ಯಾದ ಪ್ರಾಯಶ್ಚಿತ್ತವನ್ನು ಮಾಡುವೆನು. ತಾಳು ; ನಿನಗೆ ಬುದ್ಧಿಯನ್ನು ಕಲಿಸುವೆನು.

ದುರ್ಮ:—ಅದಕ್ಕೂ ನಾನೇ ಸಾಕ್ಷಿ. (ದುರ್ಮತಿಯು ಓಡುವನು. ಚಂಡಿಯು ಹಿಂದೆಯೇ ಓಡುವಳು.)

[ನಿರ್ಮಲೆಯೂ ಒಬ್ಬ ದೂತಿಯೂ ಪ್ರವೇಶಿಸುವರು.]

ನಿರ್ಮ:—ನಮ್ಮ ದುರ್ಮತಿಯು ಅಪೂರ್ವಸೃಷ್ಟಿಯು. ನಮ್ಮ ಮನೆ ಯನ್ನು ಭೋಜನಶಾಲೆಯೆಂದು ಹೇಳಿರುವನಲ್ಲಾ ? ಹೀಗೂ ಉಂಟೆ ? ಎಂತಹ ದುರ್ಮಾರ್ಗ ? ಹಾ ! ಹಾ !! ಅವನ ಅಕೃತ್ಯಗಳನ್ನೆಲ್ಲ ನೆನೆಸಿ ಕೊಂಡರೆ, ಇದೊಂದು ಆಶ್ಚರ್ಯವಲ್ಲ.

ದೂತಿ:—ನಿರ್ಮಲೆ, ಅಷ್ಟೇಅಲ್ಲ. ನೀನು ಈ ಉಡುಪನ್ನು ಧರಿಸಿ ಕೊಂಡು ಓಡಾಡುತಿರುವುದರಿಂದ ರಾಮವರ್ಮನು ನಿನ್ನನ್ನು ಒಬ್ಬ ದಾದಿ ಯೆಂದೇ ತಿಳಿದುಕೊಂಡಿರುವನು. ನೀನೊಬ್ಬ ಸೇವಕಳಂತೆ! ಎಲ್ಲವೂ ಚಿತ್ರವಿಚಿತ್ರ !!

ನಿರ್ಮ:—ಹಾಗೊ! ಸರಿ, ಅದೂ ಸರಿ. ಅವರು ಈ ಭ್ರಾಂತಿಯಲ್ಲಿ ರುವುದೇ ಮೇಲು. ಈ ಉಡುಪನ್ನು ಧರಿಸಿರುವ ನಾನು ಹೇಗೆ ಕಾಣಿಸು ವೆನು ? ಹೇಳು.

ದೂತಿ:—ಹಳ್ಳಿಯ ಹುಡುಗಿಯರು ನೀನು ಧರಿಸಿರುವಂತಹ ವಸ್ತ್ರ ವನ್ನೇ ಧರಿಸುವರು.

ನಿರ್ಮ:—ಅವರಿಗೆ ನನ್ನ ಮುಖವೂ ಸ್ವಲ್ಪವೂ ಜ್ಞಾಪಕವಿಲ್ಲವೆಂಬ ನಂಬುಗೆಯು ನಿನಗಿದೆಯೊ ?

ದೂತಿ:—ಓಹೋ! ಅದೇನೋ ನನಗೆ ಚೆನ್ನಾಗಿ ನಂಬುಗೆಯಿದೆ.

ನಿರ್ಮ:—ನನಗೂ ಹಾಗೆಯೇ ತೋರುವುದು. ಏಕೆಂದರೆ, ನಾನು ಅವ ರೊಡನೆ ಮಾತನಾಡುತಿದ್ದಾಗ ಒಂದು ಸಲವಾದರೂ ಅವರು ನನ್ನನ್ನು ಕತ್ತೆ ತ್ತಿನೋಡಲಿಲ್ಲ. ಅಬ್ಬಾ! ಅವರಿಗೆಷ್ಟು ಹೆದರಿಕೆ ? ನನ್ನನ್ನು ಒಂದು ಸಾರಿ ಯಾದರೂ ನೋಡಿದ್ದರಲ್ಲವೆ ಪರಿಚಯವಾಗುವುದು ? ಪಾಪ! ಹೇಗೆ ತಿಳಿಯ ಬೇಕು ?

ದೂತಿ:—ಅವರನ್ನು ಭ್ರಾಂತಿಯಲ್ಲಿಯೇ ಇಟ್ಟರೆ ನಿನಗೆ ಬರುವ ಲಾಭವೇನು ?

ನಿರ್ಮ:—ಲಾಭವೆ ? ಹೀಗೆಯೇ ನಾನು ಅವರನ್ನು ನೋಡಿದರೆ, ಅವರು ನನ್ನನ್ನು ಚೆನ್ನಾಗಿ ನೋಡುವರಲ್ಲವೊ ? ವರನನ್ನು ಸಂಪಾದಿಸಬೇಕೆಂದಿರುವ ಯುವತಿಯು ಅವನ ಗುಣಾವಗುಣಗಳನ್ನು ತಿಳಿಯಬೇಕಲ್ಲವೊ ? ಈ ಉಪಾ ಯದಿಂದ ನಮ್ಮ ಪರಿಚಯವು ಬಳೆವುದು. ಪೂರ್ವಕಾಲದ ಕಥೆಗಳಲ್ಲಿರುವಂತೆ ಮರೆಯಾಗಿದ್ದು ಶತ್ರುವಿನ ಬಲಾಬಲಗಳನ್ನರಿತು, ಅನಂತರ ಕದನವನ್ನು ಆರಂ

ಭಿಸಬೇಕು. ಹಾಗೆಯೇ, ನಾನು ಈಗ ಅವರಿಗೆ ತಿಳಿಯದಂತೆ ಅವರ ಗುಣಾವಗುಣಗಳನ್ನು ಕಂಡುಹಿಡಿಯುವೆನು. ಅದರಿಂದ ವಿಶೇಷವಾಗಿ ಅನುಕೂಲವಾಗುವುದು.

ದೂತಿ :—ನಿನ್ನನ್ನು ನೋಡಿ ಅವರು ಸಂದೇಹಪಟ್ಟಿರುವರಷ್ಟೆ? ನಿನ್ನ ಧ್ವನಿಯಿಂದಲೂ ಗುರುತನ್ನು ಹಿಡಿಯಲಾಗದಂತೆ ಮಾತನಾಡಬಲ್ಲೆಯೊ ?

ನಿರ್ಮ :—ಓಹೊ! ಬಲ್ಲೆನು. ಆ ಭಾಗದಲ್ಲಿ ಹೆದರಬೇಡ. ಸೇವಕರಂತೆ ಮಾತನಾಡಲು ನನಗೂ ಬರುವುದು. ಸ್ವಾಮಿ, ಏನಪ್ಪಣೆ ? ತಮಗೇನುಬೇಕು ? ಮಹಾಸ್ವಾಮಿ, ಚಿತ್ತೈಸಬೇಕು. ಆಜ್ಞೆ" ಎಂದು ಹೀಗೆ ಮಾತಾಡಿದರೆ ಸಾಕಷ್ಟೆ ?

ದೂತಿ :—ಸಾಕು; ಸಾಕು. ಅದೊ! ಅವರೇ ಇತ್ತ ಬರುತ್ತಿರುವರು.

(ರಾಮವರ್ಮನು ಬರುವನು)

ರಾಮ :—(ಸ್ವಗತಂ) ಈ ಮನೆಯಲ್ಲಿ ಎತ್ತಹೋದರೂ ಗಲಭೆ. ಹಜಾರಕ್ಕೆ ಹೋದರೆ ಅಧ್ಯಕ್ಷನು ತನ್ನ ಚರಿತ್ರೆಯನ್ನು ಹೇಳಿಕೊಳ್ಳಲುಪಕ್ರಮಿಸುವನು. ಮಹಡಿಯಮೇಲೆ ಹೋದರೆ, ಅವನ ಹೆಂಡತಿಯು ಉಪಚರಿಸಲು ಬರುವಳು. ಚಿಃ! ಸಾಕಪ್ಪ. ಈಗಲಾದರೂ ವಿರಾಮವು ದೊರೆಯಬಹುದು. ಸ್ವಲ್ಪ ಆಲೋಚಿಸುವ.

ನಿರ್ಮ :—(ದೂರದಲ್ಲೇ ನಿಂತು) ಸ್ವಾಮಿ, ತಾವು ಕೂಗಿದಿರಾ? ತಮ್ಮಪ್ಪಣೆಯೇನು ?

ರಾಮ:—(ಸ್ವಗತಂ) ನಿರ್ಮಲೆಯು ಗಂಭೀರೆ. ರಸಿಕೆ.

ನಿರ್ಮ:—(ಇದುರಿಗೆ ನಿಂತು) ಸ್ವಾಮಿ !

ರಾಮ:—(ಅಡ್ಡಲಾಗಿ ನಿಂತು) ಇಲ್ಲ. ನಾನೊಮ್ಮೆ ಓರೆಯಾಗಿ ನೋಡಿದೆನು. ಅವಳಿಗೆ ಮೆಳ್ಳಗಣ್ಣೆಂದು ತೋರುವುದು.

ನಿರ್ಮ:—ಸ್ವಾಮಿ, ಯಾರೋ ಕರೆದಂತೆ ಕೇಳಿಸಿತು. ನಿಜವಾಗಿಯೂ ಕೇಳಿಸಿತು.

ರಾಮು:—ಇಲ್ಲ. ಇಲ್ಲ. (ಮತ್ತೊಂದು ದಿಕ್ಕಿಗೆ ತಿರುಗಿ) ನಮ್ಮಪ್ಪ ನನ್ನ ತೃಪ್ತಿಪಡಿಸಲು ಮಾತ್ರವೇ ನಾನಿಲ್ಲಿಗೆ ಬಂದುದಾಯಿತೆ ಏನಾ ಮತ್ತೆ ಬೇರೆಯಿಲ್ಲ. ಈಗ ನನ್ನ ಮನಸ್ಸಿನ ತೃಪ್ತಿಗಾಗಿ ನಾನು ಹಿಂದಿರುಗಿ ಊರಿಗೆ ಹೋಗುವೆನು. ಅಷ್ಟೆ! (ಎಂದು ಜೇಬಿನಿಂದ ಯಾವುದೋ ಒಂದು ಕಾಗದ ವನ್ನು ತೆಗೆದು ಓದಿಕೊಳ್ಳುವನು)

ನಿರ್ಮ:—(ಇದಿರಿಗೆ ನಿಂತು) ತಾವು ಕರೆಯಲಿಲ್ಲವೆ? ಹಾಗಾದರೆ, ಮತ್ತೊಬ್ಬರು ಕರೆದರೇನೊ?

ರಾಮು:—ಇಲ್ಲ. ಯಾರೂ ಕರೆಯಲಿಲ್ಲ.

ನಿರ್ಮ:—ಯಾರೂ ಕರೆಯಲಿಲ್ಲವೆ? ಏನಿದ್ದರೂ ಅಪ್ಪಣೆಯಾಗಲಿ. ಸೇವಕರು ಕಾದುಕೊಂಡಿರುವೆವು.

ರಾಮು:—ನಮಗೆ ನಿಮ್ಮ ಸೇವೆಯು ಆವಶ್ಯಕವಿಲ್ಲ. (ಮುಖವನ್ನು ಚೆನ್ನಾಗಿ ದಿಟ್ಟಿಸಿನೋಡಿ) ಅಹುದು. ನಾನೇ ಕರೆದೆನು. ನನಗೆ—ನನಗೆ— ಅಮ್ಮಣ್ಣಿ! ನೀನು ಬಲು ಚೆಲುವೆ!

ನಿರ್ಮ:—ತಮ್ಮ ಮಾತನ್ನು ಕೇಳಲು ನನಗೆ ನಾಚಿಕೆಯಾಗುವುದು.

ರಾಮು:—ಇಷ್ಟುಪುಟ್ಟಿಗೆ ಮನೋಲ್ಲಾಸವನ್ನುಂಟುಮಾಡುವ ಕಣ್ಣು ಗಳನ್ನು ನಾನೆಲ್ಲಿಯೂ ನೋಡಿರಲಿಲ್ಲ. ಪ್ರಿಯೆ, ನಾನೇ ಕರೆದೆನು. ನಿಮ್ಮಲ್ಲಿ ಹು—ಹು— ಇದೆಯೊ? ನಾನುಕೇಳುವುದು ಇದೆಯೊ?

ನಿರ್ಮ:—ಇಲ್ಲ. ಅದೇನು?

ರಾಮು:—ಈ ಮನೆಯಲ್ಲಿ ಕೇಳಿದುದು ಮಾತ್ರ ಇಲ್ಲವೆಂದು ತೋರು ವುದು. ಚಿಂತೆಯಿಲ್ಲ. ರುಚಿಯನ್ನು ಬದಲಾಯಿಸಿಕೊಳ್ಳಲು ನಾನು ನಿನ್ನ ಅಧರಾಮೃತವನ್ನಾದರೂ ಕೇಳಿದರೆ ಇಲ್ಲವೆನ್ನುವೆಯೊ?

ನಿರ್ಮ:—ಏನು? ಅಮೃತವೆ? ಅಮೃತ. ಈ ಸೀಮೆಯಲ್ಲಿ ಅಮೃತ ವನ್ನು ಕೇಳುವವರೇ ಇಲ್ಲ. ಪರದೇಶದ ಪಾನಾರ್ಹವಸ್ತುಗಳನ್ನು ನಾವು ಮಾಡುವುದಿಲ್ಲ.

ರಾಮು:—ನಾನು ಕೇಳಿದ ಅಮೃತವು ಪರದೇಶದುದಲ್ಲ. ಅದು ಸ್ವದೇಶಿ.

ನಿರ್ಮ:—ಅದು ಸ್ವದೇಶದವಸ್ತುವೆ? ಹಾಗಾದರೆ, ಅದು ಎಂತಹದೆಂಬುದು ನನಗೆ ತಿಳಿಯದೆ ಇರುವುದು ಆಶ್ಚರ್ಯವೇಸರಿ. ನಾವು ಎಷ್ಟೋ ಬಗೆಯ ಪಾನೀಯಗಳನ್ನು ತಯಾರ್ಮಾಡುವೆವು. ನಾನು ಇಲ್ಲಿ ಹದಿನೆಂಟು ವರ್ಷಗಳಿಂದ ಕೆಲಸವಮಾಡಿಕೊಂಡಿರುವೆನು. ಇದುವರೆಗೂ ಆ ಹೆಸರನ್ನೇ ಕೇಳಿರಲಿಲ್ಲವಲ್ಲ ?

ರಾಮು:—ಹದಿನೆಂಟುವರ್ಷದಿಂದ! ಎಲೌ ಹುಡುಗಿ, ನೀನು ಹುಟ್ಟುವುದಕ್ಕೆ ಮೊದಲೇ ದೂತಿಯಾಗಿದ್ದೆಯೆಂದು ತೋರುವುದು. ಹೋಗಲಿ, ಈಗ ನಿನಗೆಷ್ಟುವರ್ಷ ವಯಸ್ಸು ?

ನಿರ್ಮ:—ಸ್ವಾಮಿ, ಹೆಂಗಸರು ವಯಸ್ಸನ್ನು ಹೇಳಲೂಬಾರದು; ನೀವು ಕೇಳಲೂಬಾರದು. ಹೆಂಗಸಿನ ವಯಸ್ಸನ್ನೂ, ಸಂಗೀತವನ್ನು ಕಲಿಯಲು ಪ್ರಾರಂಭಿಸಿದ ಕಾಲವನ್ನೂ ಕೇಳಬಾರದಂತೆ.

ರಾಮು:—ಇಲ್ಲಿ ಮೇನಿಂತು ನಿನ್ನ ವಯಸ್ಸನ್ನು ಹೇಳಬೇಕಾದರೆ, ನಲವತ್ತನ್ನು ಮೀರಿರಬಹುದೆಂದು ತೋರುವುದು. (ಹತ್ತಿರಕ್ಕೆ ಹೋಗಿ) ಇಲ್ಲಿ ನಿಂತು ಹೇಳಬೇಕಾದರೆ, ಪ್ರಾಯಶಃ ಇಪ್ಪತ್ತೈದೆನ್ನಲೆ? (ಇನ್ನೂ ಹತ್ತಿರಕ್ಕೆ ಹೋಗಿ ಚುಂಬನ ಮಾಡಲೆಳೆಸಿ) ಎಲ, ಎಲಾ, ಇನ್ನೂ ಹುಡುಗಿಯಂತಿರುವಿ, ನಿನಗೆ ಈಗಲೇ ಯೌವನವು ಪ್ರಾಪ್ತವಾಗಿರಬಹುದು.

ನಿರ್ಮ:—ಸ್ವಾಮಿ, ತಾವು ಅಲ್ಲಿಯೇ ಇದ್ದು ವಯಸ್ಸನ್ನು ಹೇಳಬಹುದು. ಬಾಯನ್ನು ತೆಗೆದು ಹಲ್ಲುಗಳನ್ನು ನೋಡಿ ವಯಸ್ಸನ್ನು ಹೇಳುವುದು, ಹಸು, ಕುದುರೆ ಮೊದಲಾದುವುಗಳಿಗೆ. ಮನುಷ್ಯರಿಗಲ್ಲ.

ರಾಮು:—ನೀನು ಹಾಗೆಂದರೆ ಅನ್ಯಾಯಮಾಡಿದಂತೆಯೇ ಸರಿ. ನೀನು ಹೀಗೆ ದೂರದೂರವಾಗಿ ಹೋದರೆ, ನಮ್ಮಿಬ್ಬರಿಗೂ ಸ್ನೇಹವು ಬಳೆಯುವುದೆಂತು ?

ನಿರ್ಮ:—ತಮ್ಮ ಸ್ನೇಹವು ಯಾರಿಗೆಬೇಕಾಗಿದೆ? ತಮ್ಮಂತಹರ ಸ್ನೇಹವು

ನನಗೆಬೇಡ! ಊಹು !! ನನಗೆ ಖಂಡಿತವಾಗಿಯೂ ಬೇಡ !!! ಈಗ ಅರೆಗಳಿಗೆಗೆ ಮುಂಚೆ ಇಲ್ಲಿ ಆ ನಿರ್ಮಲೆಯು ಬಂದಿದ್ದಕಾಲದಲ್ಲಿ ಅವಳನ್ನು ನೋಡಿ ಬೆದರಿ, ನ್ಯಾಯಾಧೀಶನ ಮುಂದೆ ನಿಂತಿರುವ ಅಪರಾಧಿಯಂತೆ ನಡುಗುತ್ತ, ಅರ್ಧ ಅರ್ಧ ಮಾತನಾಡಿದಿರಲ್ಲ ? ಅದೇಕೆ?

ರಾಮ:—(ಸ್ವಗತಂ) ಇವಳು ನನ್ನ ಯೋಗ್ಯತೆಯನ್ನೂ ನೈಜವಾದ ಶಕ್ತಿಯನ್ನೂ ಕಂಡುಹಿಡಿದಿರುವಳು. (ಪ್ರಕಾಶಂ) ಅವಳನ್ನು ಕಂಡರೆ ನನಗೆ ಹೆದರಿಕೆಯೆಂದು ತಿಳಿದಿಯೊ? ಹಾ! ಹಾ!! ಹಾ!!! ಅದೊಂದು ವಿಚಿತ್ರವಸ್ತು. ಕುರೂಪಿ! ಮೆಳ್ಳಗಣ್ಣಿ!! ಎಲಾ, ರಮಣಿ, ನೀನು ಅವಳಂತೆ ಇಲ್ಲ. ನಾನು ಅವಳೊಡನೆಯೂ ಅರೆಗಳಿಗೆ ಹಾಸ್ಯವಾಗಿ ಮಾತನಾಡುತ್ತಿದ್ದೆನು. ಅವಳ ಕಾಠಿಣ್ಯಭಾವವು ನನಗೆ ಸರಿತೋರಿಬರಲಿಲ್ಲ. ಆದುದರಿಂದ ಅವಳೊಡನೆ ಮಾತನಾಡಲು ನನಗೆ ಇಷ್ಟವಿಲ್ಲ.

ನಿರ್ಮ:—ಹಾಗಾದರೆ, ತಾವು ಸ್ತ್ರೀಸಮೂಹದಲ್ಲಿ ಬಹು ಬಳಿಕೆಯುಳ್ಳವರೆಂದು ತೋರುವುದು.

ರಾಮ:—ಆಹಾ! ಸಂದೇಹವೇನು? ಸ್ತ್ರೀಯರ ಸಂಘದಲ್ಲಿ ನಾನು 'ಸರ್ವಸಮರ್ಥ' ಎಂಬ ಬಿರುದನ್ನು ಪಡೆದಿರುವೆನು. ನನ್ನನ್ನು ಅವರು 'ಹರಟೆಯಮಲ್ಲ' ಎಂಬುವರು. ಹರಟೆಯಮಲ್ಲನ ಪರಿಚಯವನ್ನು ನಾನು ಮಾಡಿಸಲೋ? (ಚುಂಬಿಸಲೆಳಸುವನು)

ನಿರ್ಮ:—ಸ್ವಲ್ಪ ನಿಧಾನಿಸಿ. ಹಾಗಾದರೆ ತಮ್ಮನ್ನು ಕಂಡರೆ ಬಹು ಮಂದಿಗೆ ಪ್ರೇಮವಿರುವದೆಂದು ತೋರುವುದು.

ರಾಮ:—ಅದೇನೆಂದು ಹೇಳಲಿ. ನಮ್ಮ ಸಂಘಕ್ಕೆ ಸೇರಿದವರೆಲ್ಲರೂ ನನಗೆ ಬೇಕಾದವರೇ.

ನಿರ್ಮ:—ಹಾಗಾದರೆ, ತಾವು ಆ ಸಂಘದಲ್ಲಿ ಬಹಳ ಸಂತೋಷದಿಂದ ಕಾಲವನ್ನು ಕಳೆಯಬಹುದೆಂದು ತೋರುವುದು.

ರಾಮ:—ಅಲ್ಲಿ ನನ್ನ ಸಂತೋಷಕ್ಕೆ ಪಾರಾವಾರವೇ ಇಲ್ಲ. ತಿಂಡಿ,

ಊಟ, ಎಲೆಯಡಿಕೆ, ಪಗಡೆ, ಇಸ್ಪೀಟು, ಎಷ್ಟೋ ಆಟಗಳು.

ನಿರ್ಮ:—ಇಷ್ಟೇನೊ, ಹರಟೆಯುಮಲ್ಲರ ಪ್ರವರ್ತನೆ! ಭಲಾ! ಹಾ! ಹಾ!!

ರಾಮು:—(ಸ್ವಗತಂ) ಇದು ನನಗೆ ಆಗದು. ಈ ಹುಡುಗಿಯು ಒಳ್ಳೆಯಹಾಸ್ಯಗಾರಳೆಂದು ತೋರುವುದು. (ಪ್ರಕಾಶಂ) ಎಲೌ, ನಗುವಿಯಾ?

ನಿರ್ಮ:—ಇನ್ನೇನು ಮಾಡಲಿ? ನಿಮ್ಮ ಸಂಘದ ಹೆಂಗಸರು ಮನೆಯಲ್ಲಿಯೇ ಇಲ್ಲದಿರುವುದಾದರೆ, ಮನೆ ಕೆಲಸಗಳನ್ನು ಮಾಡುವರಾರು?

ರಾಮು:—(ಸ್ವಗತಂ) ಸರಿ; ಸರಿ. ಇವಳು ನನ್ನನ್ನು ನೋಡಿ ನಗುತ್ತಿಲ್ಲ. (ಪ್ರಕಾಶಂ) ನಿನಗೇನಾದರೂ ಕಸೂತಿ ಕೆಲಸವು ಬರುವುದೊ?

ನಿರ್ಮ:—ಈ ಮನೆಯಲ್ಲಿರುವ ಕಸೂತಿಯ ಕೆಲಸಗಳನ್ನೆಲ್ಲ ಪರಾಂಬರಿಸಿದರೆ ತಿಳಿಯುವುದು.

ರಾಮು:—ಅವುಗಳನ್ನು ನನಗೆ ತೋರಿಸುವೆಯಾ? ನಾನು ಅಂತವುಗಳ ಗುಣವಿಮರ್ಶೆಯನ್ನು ಬಹಳ ಚನ್ನಾಗಿಮಾಡುವೆನಾದಕಾರಣ ಅವುಗಳನ್ನು ನನಗೆ ತೋರಿಸಲೇಬೇಕು. (ಅವಳ ಕೈಹಿಡಿಯುವನು)

ನಿರ್ಮ:—ರಾತ್ರೆಯಕಾಲದಲ್ಲಿ ವಿವಿಧ ಬಣ್ಣಗಳ ವ್ಯತ್ಯಾಸವು ಕಂಡುಬರುವುದಿಲ್ಲ. ಎಲ್ಲವೂ ಒಂದೇ ಸಮನಾಗಿ ತೋರುವುದು. ಆದುದರಿಂದ ತಾವು ಅವುಗಳನ್ನು ಬೆಳಗಾದಮೇಲೆ ನೋಡಬಹುದು. (ಬಿಡಿಸಿಕೊಳ್ಳಲು ಪ್ರಯತ್ನಪಡುವಳು.)

ರಾಮು:—ನನ್ನ ರತ್ನವೆ! ಈಗಲೇ ಏಕೆ ತೋರಿಸಕೂಡದು? ನಿನ್ನ ಸೌಂದರ್ಯವನ್ನು ನೋಡಿ ಮೋಹಪರವಶನಾಗದೆ ಇರುವುದೆಂತು? ಓಹೊ! ಈ ಮುದುಕನು ಇಲ್ಲೇ ಬರುತ್ತಿರುವನು. ನನ್ನ ಗ್ರಹಚಾರವೇ ಹೀಗೆ! (ತೆರಳುವನು)

[ದೇವದತ್ತನು ಆಶ್ಚರ್ಯಭರಿತನಾಗಿ ಬರುವನು.]

ದೇವ:—(ಆಶ್ಚರ್ಯದಿಂದ) ಎಲಾ! ಕಳ್ಳಿ!! ವಂಚಕಿ! ಇವನೇನೋ,

ವಿನಯಸಂಪನ್ನನಾದ ಪ್ರಣಯಿಯು? ನೆಲವನ್ನೇ ನೋಡುತ್ತ, ದೂರದಲ್ಲಿ ನಿಂತು ಗೌರವದಿಂದ ಬಿಕ್ಕಿ ಬಿಕ್ಕಿ ಮಾತನಾಡಿದವನು, ಇವನೇನೊ? ನಿರ್ಮಲೆ, ತಂದೆಯನ್ನೇ ಈ ರೀತಿ ಮೋಸಪಡಿಸಬಹುದೆ? ನಿನಗೆ ನಾಚುಕೆಯಿಲ್ಲವೆ?

ನಿರ್ಮ:—ಅಪ್ಪ, ನನ್ನ ಮಾತುಗಳನ್ನು ಕೇಳು. ನಾನು ಮೊದಲಿನಿಂದಲೂ ಆಲೋಚಿಸಿ ನಿಶ್ಚಯಿಸಿರುವಂತೆ ಅವರು ವಿನಯಸಂಪನ್ನರೇ ಅಹುದು. ಅಂತಹ ವಿನಯಸಂಪನ್ನರು ಬೇರೊಬ್ಬರಿಲ್ಲ. ನನ್ನಂತೆಯೇ ನಿನಗೂ ನಿಜಸ್ಥಿತಿಯು ತಿಳಿದುಬರುವುದು. ಸ್ವಲ್ಪ ಸಾವಕಾಶ, ಅಷ್ಟೆ.

ದೇವ:—ದೇವರಾಣೆಗೂ ಅವನಂತಹ ಪಟಿಂಗನು ಮತ್ತೊಬ್ಬನಿಲ್ಲ. ಪಟಿಂಗತನವು ಸಾಂಕ್ರಾಮಿಕರೋಗದಂತೆ ವ್ಯಾಪಿಸಬಲ್ಲುದು. ಅವನು ನಿನ್ನನ್ನು ಕೇವಲ ದೂತಿಯಂತೆ ಕಂಡು ವರ್ತಿಸಿದನಲ್ಲವೆ? ನೀನು ಅವನನ್ನು ಮಹಾ ವಿನಯಸಂಪನ್ನನೆನ್ನುವಿ.

ನಿರ್ಮ:—ಅವರು ವಿನಯಸಂಪನ್ನರೆಂದೂ, ಸ್ವಲ್ಪಕಾಲಾನಂತರ ಸರಿಪಡಿಸಬಹುದಾದ ಕೆಲವು ದುರ್ಗುಣಗಳು ಮಾತ್ರ ಅವರಲ್ಲಿರುವುದೆಂದೂ, ಸದ್ಗುಣಗಳು ಜಾಗ್ರತೆಯಾಗಿಯೇ ಪ್ರಕಾಶಕ್ಕೆ ಬರುವುವೆಂದೂ, ನಾನು ಇನ್ನು ಸ್ವಲ್ಪಹೊತ್ತಿನಲ್ಲಿಯೇ ಸ್ಥಿರವಾಡಿಕೊಟ್ಟರೆ, ಈ ತಪ್ಪುಗಳನ್ನು ಕ್ಷಮಿಸುವಿಯೋ ?

ದೇವ:—ನೀನು ನನಗೆ ಹುಚ್ಚು ಹಿಡಿಸುವಂತೆ ತೋರುವುದು. ನೀನೇನೂ ಹೊಸದಾಗಿ ವಿಷಯಗಳನ್ನು ಸ್ಥಿರಪಡಿಸಬೇಕಾಗಿಲ್ಲ. ಅವನಿನ್ನೂ ಇಲ್ಲಿಗೆ ಬಂದು ಸರಿಯಾಗಿ ಮೂರು ಘಂಟೆಗಳ ಕಾಲವಾಗಿಲ್ಲ; ಆಗಲೇ—ನನ್ನ ಸ್ವಾತಂತ್ರ್ಯವನ್ನೂ ಅಧಿಕಾರವನ್ನೂ ಆಕ್ರಮಿಸಿಕೊಂಡು ಬಿಟ್ಟಿರುವನು. ಅವನ ಪಟಿಂಗತನವು ನಿನಗೆ ಒಪ್ಪಿತವಾಗಿ ಕಂಡುಬರಬಹುದು; ಆದರೆ ನನ್ನ ಅಳಿಯನ ಗುಣಗಳು ಬೇರೆ ರೀತಿಯಾಗಿರಬೇಕು. ಇವನ ಗುಣಗಳು ನನಗೆ ಖಂಡಿತವಾಗಿಯೂ ಸರಿಬರುವುದಿಲ್ಲ.

ನಿರ್ಮ:—ಈ ರಾತ್ರಿಯು ಕಳೆಯಲಿ; ಆಮೇಲೆ ಎಲ್ಲವೂ ಸ್ಪಷ್ಟ

ವಾಗುವುದು.

ದೇವ:—ರಾತ್ರಿಯೆ ! ಒಂದು ಘಳಿಗೆಯೂ ವಿರಾಮವನ್ನು ಕೊಡ ಲಾರೆನು. ಈಕ್ಷಣವೇ ಅವನನ್ನು ಮನೆಯಿಂದ ಹೊರಗೆ ಹೊರಡಿಸುವೆನು.

ನಿರ್ಮ:—ತಂದೆಯೆ, ಹಾಗಾದರೆ ಒಂದು ಗಂಟೆಯಾದರೂ ವಿರಾಮ ವನ್ನು ಕೊಡು . ನಿನ್ನನ್ನು ತೃಪ್ತಿಪಡಿಸುವೆನು.

ದೇವ:—ಆಗಲಿ, ಒಂದು ಗಂಟೆಕಾಲಮಾತ್ರ ವಿರಾಮವನ್ನು ಕೊಟ್ಟಿ ರುವೆನು. ಮಾಡುವ ಕಾರ್ಯಗಳೆಲ್ಲವನ್ನೂ ಪ್ರಮಾಣೀಕತೆಯಿಂದ ನಡೆಯಿಸ ಬೇಕು ಸ್ವಲ್ಪವೂ ಮೋಸವಿರಬಾರದು. ಹುಡುಗಾಟವಲ್ಲ. ತಿಳಿಯಿತೊ ? ಒಂದು ಗಂಟೆಗಿಂತ ಹೆಚ್ಚಾದ ಅವಕಾಶವನ್ನು ಖಂಡಿತವಾಗಿಯೂ ಕೊಡುವುದಿಲ್ಲ.

ನಿರ್ಮ:—ತಂದೆಯೆ, ನಿನ್ನ ಆಜ್ಞೆಯನ್ನು ನೆರವೇರಿಸುವುದೇ ನನ ಗೊಂದು ವಿಧವಾದ ದರ್ಪವು ! ಇದು ನಿನಗೆ ಗೋಚರವಿಲ್ಲದ ಸಂಗತಿಯೆ ? ನನ್ನ ಮೇಲೆ ನಿನಗಿರುವ ವಾತ್ಸಲ್ಯಕ್ಕೆ ನಾನು ಅರ್ಹಳೆನಿಸಿಕೊಳ್ಳಲು ಸರ್ವ ಪ್ರಯತ್ನವನ್ನೂ ಮಾಡುತ್ತೇನೆ.

(ತೆರಳುವರು.)

---

# ನಾಲ್ಕನೆಯ ಅಂಕ.

[ದೇವದತ್ತನ ಮನೆಯ ಪಡಸಾಲೆ. ಪ್ರಿಯಸೇನನೂ ಕಮಲಾವತಿಯೂ ಬರುವರು.]

ಪ್ರಿಯ:—ವಿಜಯಪಾಲನು ಈಗ ಬರುವನೆ ? ನಿನಗೆ ಹೇಳಿದವರಾರು ?

ಕಮ:—ಅವನು ದೇವದತ್ತನಿಗೆ ಕಳಿಸಿರುವ ತಂತೀ ವರ್ತಮಾನವನ್ನು ನಾನೇ ನೋಡಿದೆನು. ರಾಮವರ್ಮನೂ ನೀನೂ ಹೊರಟ ಒಂದೆರಡು ಗಂಟೆ ಗಳಾದ ಅನಂತರ ಅವನು ಹೊರಟಿರುವನು.

ಪ್ರಿಯ:—ಅವನು ಇಲ್ಲಿಗೆ ಬರುವುದಕ್ಕೆ ಮೊದಲೇ ನಾವು ನಮ್ಮ ಕೆಲಸವನ್ನು ಪೂರೈಸಬೇಕು. ಅವನು ನನ್ನ ಮನೋಭಿಪ್ರಾಯವನ್ನು ಬಲ್ಲ

ವನಾದರೂ ಅವನು ಇಲ್ಲಿಗೆ ಬಂದನಂತರ ನಮಗೆ ಕಾರ್ಯವನ್ನು ಸಾಧಿಸಿ ಕೊಳ್ಳಲು ಹೇಗೆ ಸುಲಭವಾಗುವುದು ?

ಕಮ:—ಜವಾಹಿರಿಯು ಭದ್ರವಾಗಿದೆಯಷ್ಟೆ ?

ಪ್ರಿಯ:—ನಾನು ಅದನ್ನು ರಾಮವರ್ಮನ ವಶಕ್ಕೆ ಒಪ್ಪಿಸಿರುವೆನು ಅವನ ಬಳಿಯಲ್ಲಿಯೇ ನಮ್ಮ ಪೆಟ್ಟಿಗೆಗಳ ಬೀಗದ ಕೈಗಳಿವೆ. ಈಗಲೇ ನಾನು ಅವನ ಬಳಿಗೆ ಹೋಗಿ, ನಾವು ಓಡಿಹೋಗಲಿಕ್ಕೆ ತಕ್ಕ ಸನ್ನಾಹವನ್ನು ಮಾಡು ವೆನು. ನಮಗೆ ಒಳ್ಳೆಯ ಕುದುರೆಯನ್ನು ಕೊಡುವೆನೆಂದು ದುರ್ಮತಿಯು ವಾಗ್ದಾನ ಮಾಡಿರುತ್ತಾನೆ. ಅವನು ಮರೆಯದಿರುವಂತೆ ಒಂದು ಕಾಗದ ವನ್ನೂ ಬರೆಯುವೆನು. (ಹೊರಟು ಹೋಗುವನು)

ಕಮ:—ನಾನು ನಮ್ಮತ್ತೆಯಬಳಿಗೆಹೋಗಿ, ದುರ್ಮತಿಯಲ್ಲಿ ನನಗೆ ಬಲವಾದ ಮಮತೆಯಿರುವುದೆಂದು ತಿಳಿಸಿ ಬರುವೆನು. ನಾವು ನಟನೆಯನ್ನು ಮಾಡದಿದ್ದರೆ ಯತ್ನವಿಲ್ಲ. (ಹೊರಟು ಹೋಗುವಳು)

[ರಾಮವರ್ಮನೂ ಒಬ್ಬಸೇವಕನೂ ಬರುವರು]

ರಾಮ:—ಇದೇನು ಪ್ರಿಯಸೇನನ ಕೆಲಸ ? ಜವಾಹಿರಿಯ ಪೆಟ್ಟಿಗೆ ಯನ್ನು ನಾನೆಲ್ಲಿ ಭದ್ರಪಡಿಸಲಿ ? ಈ ಭೋಜನಶಾಲೆಯ ಮುಂಭಾಗದಲ್ಲಿ ನಿಂತಿರುವ ಗಾಡಿಯಮೇಲಲ್ಲದೆ ಮತ್ತೆಲ್ಲಿಯಾದರೂ ನನಗೆ ಕುಳಿತುಕೊಳ್ಳ ಲಾದರೂ ಸ್ಥಳವಿದೆಯೆ ? ಪೆಟ್ಟಿಗೆಯನ್ನು ನಾನು ಹೇಳಿದಂತೆ ಭೋಜನಶಾಲಾ ಧ್ಯಕ್ಷಳವಶಕ್ಕೆ ಕೊಟ್ಟುಬಂದೆಯ ? ಅವಳ ಕಯ್ಯಲ್ಲಿಯೇ ಕೊಟ್ಟೆಯೊ ?

ಸೇವಕ:—ಅಹುದು; ಮಹಾಸ್ವಾಮಿ.

ರಾಮ:—ಭದ್ರವಾಗಿಟ್ಟಿರುವುದಾಗಿ ಹೇಳಿದಳೊ, ಇಲ್ಲವೊ ?

ಸೇವಕ:—ಭದ್ರವಾಗಿಯೇ ಇಡುವಳು. ನನಗೆ ಅದು ಹೇಗೆ ಸಿಕ್ಕಿ ತೆಂದು ವಿಚಾರಿಸಿ, 'ನಿನ್ನ ನಡತೆಯ ವಿಷಯದಲ್ಲಿ ನನಗೆ ಅನುಮಾನವು ಹುಟ್ಟಿರುವುದು' ಎಂದಳು. (ಹೊರಟು ಹೋಗುವನು)

ರಾಮು:—ಹೇಗಾದರೇನು? ಪೆಟ್ಟಿಗೆಯು ಭದ್ರವಾಗಿದೆಯಷ್ಟೆ. ನಾವು ಎಂತಹ ವಿಚಿತ್ರಪ್ರಾಣಿಗಳ ಮಧ್ಯದಲ್ಲಿ ಸಿಕ್ಕಿಬಿದ್ದೆವು? ಹಾ! ಹಾ! ಆ ಸೇವಕಳು ನನ್ನ ಹೃದಯವನ್ನು ಕಯ್ಸೆರೆಮಾಡಿಕೊಂಡಿರುವಳು. ಅವಳ ವಿಷಯವನ್ನು ವಿಚಾರಮಾಡುತ್ತ ಕುಳಿತರೆ, ಉಳಿದುವೆಲ್ಲಾ ಮರೆತೇಹೋಗುವುವು. ಅವಳು ನನ್ನವಳೇ-ನನ್ನವಳೇ ಆಗಬೇಕು. ಇಲ್ಲವಾದರೆ ನಾನೇ ಮೋಸಹೋಗಿರಬೇಕು.

(ಪ್ರಿಯಸೇನನು ಬರುವನು)

ರಾಮು:—ಪ್ರಿಯಸೇನನ, ಈಗ ನೀನೇನುಹೇಳುವೆ? ನನಗೆ ಶಹಬಾಸ್‌ಗಿರಿಯನ್ನು ಕೊಡು. ಭಲಾ ಎನ್ನು. ನನ್ನಂತಹ ಪುರುಷನಿಗೆ ಜಯವು ದೊರೆವುದಿಲ್ಲವೆ ?

ಪ್ರಿಯ:—ಕೆಲವು ಸ್ತ್ರೀಯರಲ್ಲಿ ಮಾತ್ರವೆಂದು ಹೇಳು. ನಿನ್ನ ವಿನಯದಿಂದ ಪ್ರಾಪ್ತವಾದ ಜಯೋತ್ಸವಕ್ಕೆ ಕಾರಣರಾರು ? ನಿನ್ನ ಜಯದಿಂದ ನಿಮಗೇನೊ ತೊಂದರೆಯು ಬರುವಂತೆ ತೋರುವುದು.

ರಾಮು:—ನಡುವಿಗೆ ಬೀಗದಕೈ ಗೊಂಚಲನ್ನು ತಗಲುಹಾಕಿಕೊಂಡು ಮನೆಯಲ್ಲೆಲ್ಲಾ ಪಾದರಸದಂತೆ ಓಡಾಡುತ್ತಿರುವ ಆ ಮದನಮೋಹನ ಸುಂದರಿಯನ್ನು ನೀನು ನೋಡಲಿಲ್ಲವೊ?

ಪ್ರಿಯ:—ನೋಡಿದೆನು, ಆಮೇಲೆ?

ರಾಮು:—ಅವಳು ನನ್ನವಳೇ ! ತಿಳಿಯಿತೊ ? ಆ ರೂಪು, ಆ ಲಾವಣ್ಯ, ಆ ಸವಿನೋಟ, ಆ ಕೆಂದುಟಿಗಳು, ಆ ಕಣ್ಣುಗಳು, ಏನು ? ಅಬ್ಬಾ ! ಎಷ್ಟು ಚೆನ್ನಾಗಿರುವಳು ! ಚುಂಬಿಸಲು ಅವಳು ಅವಕಾಶವನ್ನೇ ಕೊಡಲಿಲ್ಲ.

ಪ್ರಿಯ:—ಅವಳ ವಿಷಯವಾಗಿ ಯಾವ ಆಕ್ಷೇಪಣೆಯನ್ನೂ ನೀನು ಹೇಳುವುದಿಲ್ಲವೊ ? ಇದನ್ನು ನಾನು ನಂಬಲೊ ?

ರಾಮು:—ಓಹೊ ! ಅವಳು ತಾನು ಮಾಡಿರುವ ಕಸೂತಿಯ ಕೆಲಸಗಳನ್ನೆಲ್ಲಾ ತೋರಿಸಲು ಒಪ್ಪಿರುವಳು. ಅವಳು ಮಾಡಿರುವ ತಪ್ಪುಗಳನ್ನು

ತಿದ್ದಬೇಕೆಂದೂ ಹೊಸ ಮಾದರಿಗಳನ್ನು ತೋರಿಸಬೇಕೆಂದೂ ಪ್ರಾರ್ಥಿಸಿರುವಳು.

ಪ್ರಿಯ:—ರಾಮುವರ್ಮ, ಪಾಪ! ಆ ಒಡಹೆಂಗಸಿನ ಮಾನವನ್ನು ಕಳೆಯಬೇಕೆಂದು ಸಂಕಲ್ಪಿಸಿರುವಿಯೇನು ?

ರಾಮು:—ಹೋ! ಹೋ!! ಈ ಸೇವಕರ ಮಾನಮರ್ಯಾದೆಗಳು ನಮಗೂ ಗೊತ್ತು! ಅವಳಿಗೆ ನಾನು ಅನ್ಯಾಯಮಾಡುವುದಿಲ್ಲ. ಉಚಿತವಾದ ಸಂಭಾವನೆಯನ್ನು ಮಾಡುವೆನು. ಈ ಮನೆಯಲ್ಲಿ ನನಗೆ ಯಾವ ವಸ್ತುವೂ ಪುಗಸಟ್ಟೆಯಾಗಿ ಬೇಡ.

ಪ್ರಿಯ:—ಅವಳು ಗೌರವಸ್ತ್ರೀಯಾಗಿರಬಹುದು.

ರಾಮು:—ಹಾಗಾದರೆ, ದೇವರಾಣೆ, ನಾನು ಅವಳ ಗೊಡವೆಗೆ ಹೋಗುವುದಿಲ್ಲ.

ಪ್ರಿಯ:—ಇದಿರಲಿ. ನಾನು ನಿನ್ನಲ್ಲಿ ಭದ್ರವಾಗಿ ಇಟ್ಟಿರಲು ಕೊಟ್ಟಿದ್ದ ಪೆಟ್ಟಿಗೆಯನ್ನು ಸುರಕ್ಷಿತವಾಗಿ ಇಟ್ಟಿರುವಿಯಷ್ಟೆ ?

ರಾಮು:—ಓಹೋ! ಅದನ್ನು ಬಹಳ ಭದ್ರವಾಗಿಯೇ ಇಡತಕ್ಕ ಏರ್ಪಾಡನ್ನು ಮಾಡಿರುವೆನು. ಬೀದಿಯ ಬಾಗಿಲಿನಲ್ಲಿ ನಿಂತಿರುವ ಗಾಡಿಯಲ್ಲಿಟ್ಟರೆ ಚನ್ನಾಗಿರುವುದೆಂದು ತಿಳಿದಿಯೇನೊ ? ನೀನು ಬಲು ಜಾಣ. ಅದರ ವಿಚಾರದಲ್ಲಿ ನಿನಗಿಂತಲೂ ಹೆಚ್ಚು ಶ್ರದ್ಧೆಯು ನನಗಿರುವುದೆಂದು ನಂಬು. ಪೆಟ್ಟಿಗೆಯನ್ನು........

ಪ್ರಿಯ :—ಏನು, ಏನು ?

ರಾಮು:—ಸುರಕ್ಷಿತವಾಗಿಟ್ಟಿರಲು ಪೆಟ್ಟಿಗೆಯನ್ನು ಈ ಮನೆಯ ಯಜಮಾನಿಯ ಬಳಿಗೆ ಕಳುಹಿಸಿದೆನು. ಅವಳು....

ಪ್ರಿಯ :—ಯಜಮಾನಿಯ ಬಳಿಗೆ ?

ರಾಮು :—ಅಹುದು. ಯಜಮಾನಿಯ ಬಳಿಗೇ ಕಳುಹಿಸಿರುವೆನು. ಅದಕ್ಕೆ ಅವಳೇ ಹೊಣೆಗಾರಳು.

ಪ್ರಿಯ :—ಸಾಕ್ಷಿ ಸಮೇತವಾಗಿ ಅವಳು ಅದನ್ನು ಹೊರಗೆ ತರುವಳು. ಸರ್ವನಾಶ!

ರಾಮ :—ನಾನು ಮಾಡಿದುದು ಸರಿಯಷ್ಟೆ! ನನ್ನ ಬುದ್ಧಿಚತುರತೆ, ಜಾಣ್ಮೆಗಳನ್ನು ನೀನು ಮೆಚ್ಚುವಿಯೊ ಇಲ್ಲವೊ?

ಪ್ರಿಯ:—(ಸ್ವಗತಂ) ಇರಲಿ! ಅಸಮಾಧಾನವನ್ನು ತೋರ್ಪಡಿಸಬಾರದು.

ರಾಮ:—ಅದೇಕೆ ಸುಮ್ಮನಿರುವೆ? ಅಸಮಾಧಾನವಾದಂತೆ ತೋರುವುದು. ಏನೂ ಪ್ರಮಾದವಿಲ್ಲವಷ್ಟೆ?

ಪ್ರಿಯ:—ಇಲ್ಲ. ಅಸಮಾಧಾನವೇನೂ ಇಲ್ಲ. ಸಂತೋಷವಾಗಿಯೇ ಇರುವೆನು. ಪ್ರಾಯಶಃ ಯಜಮಾನಿಯು ಆ ಪೆಟ್ಟಿಗೆಯ ಸಂರಕ್ಷಣೆಯ ಭಾರವನ್ನು ಅತ್ಯಾದರದಿಂದ ವಹಿಸಿರಬಹುದು.

ರಾಮ:—ಸ್ವಲ್ಪವೂ ತಡಮಾಡಲಿಲ್ಲ. ಪೆಟ್ಟಿಗೆಯೊಂದನ್ನೇ ಅಲ್ಲ. ಅದನ್ನು ತೆಗೆದುಕೊಂಡುಹೋಗಿದ್ದ ಸೇವಕನನ್ನೂ ಭದ್ರವಾಗಿಟ್ಟುಕೊಂಡಿರಲು ಅವಳಿಗೆ ಅಪೇಕ್ಷೆಯಿದ್ದಂತೆ ತೋರುವುದು.

ಪ್ರಿಯ:—ಹಾ! ಹಾಗಾದರೆ ಆ ಸೇವಕನೂ ಸುರಕ್ಷಿತವಾಗಿರುವನೊ?

ರಾಮ:—ಇಲ್ಲ; ಇಲ್ಲ. ಅವನು ಬಂದುಬಿಟ್ಟನು. ಲುಬ್ಧನ ಚೀಲದಲ್ಲಿರುವ ಹಣದಂತೆ ಪೆಟ್ಟಿಗೆಯು ಬಹಳ ಜೋಪಾನವಾಗಿರುವುದು.

ಪ್ರಿಯ:—(ಸ್ವಗತಂ) ಇನ್ನು ಜವಾಹಿರಿಗಳ ಆಶೆಯಿಲ್ಲ. ಅದರ ಆಶೆಯನ್ನು ಬಿಟ್ಟೇ ನಾವು ಹೊರಡಬೇಕಾಯಿತು. (ಪ್ರಕಾಶಂ) ರಾಮವರ್ಮ, ನನಗೆ ಬೇರೆ ಕೆಲಸವಿದೆ. ಹೊರಡುವೆನು. ನೀನು ಆ ಸೇವಕಳ ಧ್ಯಾನದಲ್ಲಿ ಮಗ್ನನಾಗಿರು. ನಿನ್ನಿಂದ ನನ್ನ ಕಾರ್ಯವು ಜಯಪ್ರದವಾಗುವಂತೆಯೇ, ನನ್ನಿಂದ ನಿನ್ನ ಕಾರ್ಯವೂ ಜಯಪ್ರದವಾಗಲಿ. (ಹೊರಟುಹೋಗುವನು)

ರಾಮ :—ಪ್ರಿಯನೆ, ವಂದಿಸುವೆನು. ಹಾ! ಹಾ!!

[ದೇವದತ್ತನು ಪ್ರವೇಶಿಸುವನು.]

ದೇವ :—ಈಗ ನನ್ನ ಮನೆಯೆಂದು ನಾನೇ ಗುರುತಿಸುವಂತಿಲ್ಲ. ಅವನ ಭೃತ್ಯರು ಸಂಪೂರ್ಣವಾಗಿಯೂ ಕುಡಿದು ಬಿದ್ದಿರುವರು. ವಿಜಯ ಪಾಲನೊಡನೆ ನನಗಿರುವ ಮೈತ್ರಿಗೋಸ್ಕರ ನಾನು ಸುಮ್ಮನಿರಬೇಕಾಗಿದೆ. (ರಾಮವರ್ಮನನ್ನು ನೋಡಿ ತಲೆಬಾಗಿಸಿ) ಮಹಾಸ್ವಾಮಿ, ಏನಪ್ಪಣೆ? ಇಗೋ, ತಮ್ಮ ಪಾದಸೇವಕನು ಕಾದುಬಿದ್ದಿರುವನು.

ರಾಮ:—ಹಾಗುಂಟೆ? ನಾನೇ ತಮ್ಮ ಸೇವಕನು. (ಸ್ವಗತಂ) ಇನ್ನೇನು ತಮಾಷೆಗಳು ಕಾದಿವೆಯೊ ?

ದೇವ:—ನಿಮ್ಮಪ್ಪನ ಮಗನಿಗಿಂತಲೂ ಹೆಚ್ಚಾಗಿ ಮತ್ತಾರನ್ನೂ ನಾನು ಪ್ರೀತಿಸುವುದಿಲ್ಲವೆಂದು ನಿನ್ನ ಬುದ್ಧಿಗೆ ತೋರಿರಬಹುದಲ್ಲವೆ ?

ರಾಮ :—ಸಂದೇಹವೇನು ? ನನಗೆ ಯಾವ ವಿಧವಾದ ಉಪಚಾರವೂ ಬೇಡ. ನಮ್ಮಪ್ಪನ ಮಗನು ತಾನು ಹೋದಲ್ಲೆಲ್ಲಾ ಮರ್ಯಾದೆಯನ್ನು ಹೊಂದಬಲ್ಲನು.

ದೇವ :—ಅಡ್ಡಿಯೇನು? ನಿನ್ನ ನಡತೆಯ ವಿಚಾರದಲ್ಲಿ ನಾನೇನೂ ಹೇಳುವುದಿಲ್ಲ ; ಆದರೆ ನಿನ್ನ ಸೇವಕರ ನಡತೆಯ ವಿಚಾರದಲ್ಲಿ ಬಹಳ ಅಸಮಾಧಾನವಾಗಿದೆ. ಅವರ ಹಾವಳಿಯನ್ನು ತಡೆಯಲಾಗುವುದಿಲ್ಲ. ಅವರ ಸಹವಾಸದಿಂದ ನಮ್ಮ ಸೇವಕರೂ ಕೆಡುವ ಸಂಭವವುಂಟು.

ರಾಮ:—ಅದು ನನ್ನ ತಪ್ಪಲ್ಲ. ನನ್ನ ಅಪ್ಪಣೆಯಂತೆ ಅವರು ಕೈಲಾದಷ್ಟು ಕುಡಿದಿರುವರು. (ಒಂದು ಮಗ್ಗಲಿಗೆ ತಿರುಗಿ) ಯಾರಲ್ಲಿ ? ನನ್ನ ಸೇವಕರಲ್ಲೊಬ್ಬನು ಬರಲಿ. (ದೇವದತ್ತನನ್ನು ನೋಡಿ) ನಾನು ಎಂದೂ ಮದ್ಯಪಾನ ಮಾಡುವುದಿಲ್ಲ. ಆ ಲೋಪವನ್ನು ಹೋಗಲಾಡಿಸುವುದಕ್ಕಾಗಿ ಅವರು ಬೇಕಾದಷ್ಟು ಕುಡಿಯಲು ಆಜ್ಞೆ ಕೊಟ್ಟಿರುವೆನು.

ದೇವ:—ಇಷ್ಟು ಕುಡಿಯಲು ಅವರಿಗೆ ನಿನ್ನ ಅಪ್ಪಣೆಯಿದ್ದಿತೊ ? ಸರಿ, ಸರಿ. ಹಾಗಾದರೆ ನನಗೂ ತೃಪ್ತಿಯೆ.

ರಾಮು:—ತಾವು ಅವರ ಬಾಯಿಂದಲೇ ಕೇಳಿದರೆ ನಂಬಿಕೆಯು ಹುಟ್ಟುವುದು.

[ಮಿತಿಮೀರಿ ಮದ್ಯಪಾನಮಾಡಿದ ಒಬ್ಬ ಸೇವಕನು ಬರುವನು]

ರಾಮು:—ಏನು ? ಹೀಗೆ ಮುಂದೆಬಾ. ಎಲಾ, ನನ್ನ ಅಪ್ಪಣೆಯೇನು? ಈ ಮನೆಗೆ ಒಳ್ಳೆಯದಾಗಲೆಂದೇ ನೀವು ತೃಪ್ತಿಯಾಗುವಂತೆ ಕುಡಿದು ಮನಸ್ಸಿಗೆ ಬೇಕಾದುದನ್ನು ತಿನ್ನಬಹುದೆಂದು ನಾನು ಆಜ್ಞೆಮಾಡಿಲ್ಲವೊ ?

ದೇವ:—( ಸ್ವಗತಂ ) ಇನ್ನು ಅಸಾಧ್ಯ. ನನಗೆ ತಾಳ್ಮೆಯು ಹೋಯಿತು.

ಸೇವಕ:—ಸ್ವಾಮಿ, ಸ್ವೇಚ್ಛಾವಿಹಾರ, ಸುಖನಿವಾಸ. ನಾನು ಯಾರಿಗೆ ಕಡಮೆ ? ಊಟಕ್ಕೆ ಮುಂಚಿತವಾಗಿ ಕುಡಿಯುವುದು ನನಗೆ ಅಭ್ಯಾಸವಿಲ್ಲ. ಏಕೆಂದರೆ, ಕುಡಿದಮೇಲೆ ಊಟಮಾಡಿದರೆ ಮದ್ಯವು ಒಳಗೆ ಸೇರಿ ಅದರಮೇಲೆ ಊಟಮಾಡಿದ ಪದಾರ್ಥಗಳು ಸೇರುವುವು. ದೇವರಾಣೆಗೂ ಕುಡಿದಮೇಲೆ ಊಟಮಾಡಲಾರೆ. (ಬಿಕ್ಕಲುಬರುವದು) ಸ್ವಾಮಿ ?

ರಾಮು:—ಸ್ವಾಮಿ, ನೋಡಿದಿರೊ. ಇವನು ಸಂಪೂರ್ಣವಾಗಿಯೂ ಕುಡಿದಿರುವನು. ನಿಮಗೆ ಇನ್ನೇನಾಗಬೇಕು. ಇವರೆಲ್ಲರೂ ಬೇಕಾದಷ್ಟನ್ನು ಕುಡಿದು ದಣಿದಿರುವರು.

ದೇವ:—ಇನ್ನು ನಾನು ನಿನ್ನಹಾವಳಿಯನ್ನು ಸಹಿಸಿಕೊಂಡಿರಲಾರೆ. ಸಹಿಸಿಕೊಂಡಿದ್ದರೆ ಹುಚ್ಚುಹಿಡಿಯುವುದು. ರಾಮುವರ್ಮನೆ, ನಿನ್ನ ತುಂಟಾಟಕ್ಕೆ ಮೊದಲು ಕೊನೆಯಿಲ್ಲವಾಗಿದೆ. ನೀನೂ ನಿನ್ನ ಕುಡುಕಸೇವಕರೂ ಈಗಲೇ ಮನೆಯನ್ನು ಬಿಟ್ಟು ಹೋಗಬೇಕು. ತಿಳಿಯಿತೊ, ಹೊರಡಿರಿ.

ರಾಮು:—ಏನು, ಏನು ? ಮನೆಯನ್ನು ಬಿಟ್ಟು ಹೋಗುವುದೆ ? ನೀನು ಪರಿಹಾಸ್ಯಮಾಡುತ್ತಿರಬಹುದು. ನಿನ್ನನ್ನು ಸಂತೋಷಪಡಿಸಲು ನನ್ನ ಕೈಯಲ್ಲಾದುದನ್ನೆಲ್ಲ ನಾನು ಮಾಡಿರುವೆನು. ನೀನು ಆಡುವ ಮಾತೆಲ್ಲವೂ ಚೋದ್ಯವೇ ಸರಿ.

ದೇವ:—ನಿನ್ನಿಂದ ನನಗೆ ಸ್ವಲ್ಪವೂ ಸಂತೋಷವಿಲ್ಲ. ಹೊರಡು. ಮೊದಲು ಹೊರಡು. ಮೊದಲು ಮನೆಯಿಂದ ಹೊರಟುನಡೆ.

ರಾಮು:—ರಾತ್ರಿಯಕಾಲ, ಅವೇಳೆ. ಅದರಲ್ಲಿಯೂ ಈ ಕಾಳ ರಾತ್ರಿ. ನೀನು-ನಿಜವಾಗಿಯೂ ಪರಿಹಾಸ್ಯ ಮಾಡುತ್ತಿರಬಹುದು.

ದೇವ:—ನಾನು ಹೇಳುವುದು ಪರಿಹಾಸ್ಯಕ್ಕಲ್ಲ ; ನನಗೆ ಕೋಪೋ ದ್ರೇಕವಾಗಿದೆ. ಹೊರಡು. ಇದು ನನ್ನ ಮನೆಯೇ ಅಹುದು. ತಿಳಿಯಿತೆ ? ನೀವುಗಳೆಲ್ಲರೂ ಈಗಲೇ ಹೊರಡಬೇಕೆಂದು ಆಜ್ಞಾಪಿಸುವೆನು. ತಡಮಾಡದೆ, ಮತ್ತೊಂದುಮಾತನ್ನೂ ಆಡದೆ, ಹೊರಡಿರಿ, ತೊಲಗಿ.

ರಾಮು:—ಹಾ ! ಹಾ !! ಇದೊಳ್ಳೆಯ ಸಹವಾಸ !! ನಾನು ಒಂದು ಹಜ್ಜೆಯನ್ನಾದರೂ ಮುಂದಿಡುವುದಿಲ್ಲ. ತಿಳಿಯಿತೊ ? (ಸಿಟ್ಟುಗೊಂಡ ವನಂತೆ) ಇದು ನಿನ್ನ ಮನೆಯೊ ? ಛೀ ! ಇದು ನನ್ನ ಮನೆ, ನನ್ನದು. ನಾನು ಇಲ್ಲಿರುವವರೆಗೂ ನನ್ನದೇ ; ಹೊರಡೆಂದು ಹೇಳಲು ನಿನಗೇನು ಅಧಿ ಕಾರವಿದೆ ? ಇಂತಹ ಪಟಿಂಗನನ್ನು ನಾನೆಲ್ಲಿಯೂ ನೋಡಲಿಲ್ಲ. ಓಹೋ! ನೀನೇ ಮೊದಲು ಇಲ್ಲಿಂದ ಹೊರಡು. ತಿಳಿಯಿತೊ ?

ದೇವ:—ನನ್ನಾಣೆ ! ನಾನು ಇಂತಹ ಪಟಿಂಗನನ್ನು ಇದುವರೆಗೂ ಎಲ್ಲಿಯೂ ನೋಡಲಿಲ್ಲ. ನನ್ನ ಮನೆಗೆ ಬಂದು, ಸ್ವೇಚ್ಛೆಯಾಗಿ ವರ್ತಿಸಿ, ಸೇವಕರಿಗೆ ಮನಸ್ವಿ ಕುಡಿದು ಮತ್ತರಾಗಿ ಬೀಳುವಂತೆ ಆಜ್ಞೆಯಿತ್ತು, ಇಷ್ಟೂ ತೃಪ್ತಿಯಾಗದೆ, “ಮನೆಯೂ ನನ್ನದೇ ಹೊರಡು.” ಎಂದು ಹೇಳುವ ನಿನ್ನ ತುಂಟಾಟವನ್ನು ನೋಡಿದರೆ, ನಗುವು ಬರುವುದು. ಹಾ ! ಹಾ!! ಸ್ವಾಮಿ, ಮನೆಯೇನೋ ತಮ್ಮದಾಯಿತು. ಈ ಪದಾರ್ಥಗಳನ್ನು ನಾನು ತೆಗೆದುಕೊ ಳ್ಳುವ ವಿಚಾರವೇನು ? ಸ್ವಾಮಿ, ಇಲ್ಲೊಂದು ಜತೆ ಬೆಳ್ಳಿಯ ದೀಪಸ್ತಂಭ ಗಳಿವೆ. ಅಲ್ಲೊಂದು ಗಂಧದ ಮರದ ಪೆಟ್ಟಿಗೆಯಿದೆ. ಇಗೊ ! ಈ ಮರದ ಬೀರು ; ಆ ದಂತದಗೊಂಬೆ. ಇವುಗಳೇನೂ ತಮ್ಮದಲ್ಲವಲ್ಲ ?

ರಾಮು:—ನಿನ್ನ ಲೆಖ್ಖವನ್ನು ವ್ಯವಸ್ಥೆಮಾಡುವೆನು. ಮೊದಲು ‘ಬಿಲ್’

ತೆಗೆದುಕೊಂಡುಬಾ. ಈ ರಗಳೆಯು ನನಗೆ ಸಾಕು.

ದೇವ:—ಸ್ವಾಮಿ, ಈ, (ಯಾವುದೋ ಜ್ಞಾನದಲ್ಲಿ) ಇಗೊ. ಈ ಪುಸ್ತಕ ಭಾಂಡಾಗಾರ, ಇದರಲ್ಲಿರುವ, ನಾನು ಪದೇಪದೇ ಉಪಯೋಗಿಸುವ, ಈ ಪಾಕಶಾಸ್ತ್ರವು ನಿಮ್ಮದಲ್ಲವಷ್ಟೆ ? ಆ ಕಲಾಶಾಸ್ತ್ರಪುಸ್ತ...

ರಾಮು:—'ಬಿಲ್, ಬಿಲ್' ತೆಗೆದುಕೊಂಡು ಬಾ.

ದೇವ:—ಹಾ ! ಏನು ?

ರಾಮು:—ನಿನ್ನ ಮನೆ ಹಾಳಾಗಲಿ ! ಈಗಲೇ ಬಿಟ್ಟು...

ದೇವ:—ಅದೊ, ಅಲ್ಲೊಂದು ಕರೀಮರದ ಮೇಜವಿದೆ, ಅದರಲ್ಲಿ ಕನ್ನಡಿಯೂ ಇದೆ. ಅದರಲ್ಲಿ ಮುಖವು...

ರಾಮು:—'ಬಿಲ್'' ತಾ. ಹೊತ್ತಾಯಿತು.

ದೇವ:—ಓಹೋ ! ಮರೆತಿದ್ದೆ. ಊಟವಾದ ಅನಂತರ ವಿಶ್ರಮಿಸಿ ಕೊಳ್ಳಲು ಅಲ್ಲಿ ಹಾಕಿರುವ ಆರಾಮ ಕುರ್ಚಿಯೂ ತಮ್ಮದೊ ?

ರಾಮು:—ಅಯ್ಯೋ ಗೋಳೆ ! ಬಿಲ್ ತಾ. ಲೆಕ್ಕವನ್ನು ವ್ಯವಸ್ಥೆ ಮಾಡಿ ನಿನ್ನ ಪಂಚಾಯಿತಿಯನ್ನು ಕೊನೆಮುಟ್ಟಿಸುವೆನು.

ದೇವ:—ಎಲಾ ಹುಡುಗ, ಪೋಕರಿ, ನಿಮ್ಮಪ್ಪ ವಿಜಯಪಾಲನ ಕಾಗದವನ್ನು ನೋಡಿ ನೀನೊಳ್ಳೆಯ ವಿನಯಸಂಪನ್ನನೆಂದು ನಂಬಿದ್ದೆನು. ಈಗ ನೋಡಿದರೆ ನಿನ್ನಂತಹ ಅಯೋಗ್ಯನೂ ಪಟಿಂಗನೂ ಪೋಕರಿಯೂ ಅವಿವೇಕಿಯೂ ಮತ್ತಾವನೂ ಇಲ್ಲವೆಂಬುದು ವ್ಯಕ್ತವಾಯಿತು. ಅವನೂ ಈಗಲೇ ಬರಬಹುದು. ಅವನಿಗೆ ಇದೆಲ್ಲವೂ ತಿಳಿಯಲಿ. ನಾನು ಈಗ ಹೋಗುವೆನು. (ಹೊರಟುಹೋಗುವನು.)

ರಾಮು:—(ಸ್ವಗತಂ) ಇದೇನು ?—ನಾನು ಈ ಮನೆಯನ್ನು ಭ್ರಮಿಸಿ, ತಪ್ಪಾಗಿ ತಿಳಿದುಕೊಂಡಿರುವೆನೆ ? ಪ್ರತಿಯೊಂದು ವಿಷಯವನ್ನು ನೋಡಿದರೂ ಇದು ಭೋಜನಶಾಲೆಯಂತೆಯೇ ಕಾಣುವುದು. ಸೇವಕರು ಗೋಳಿಡುತ್ತ ಬರುವರು. ನಮ್ಮ ಯೋಗಕ್ಷೇಮವನ್ನು ಸರಿಯಾಗಿ ನೋಡಿ

ಕೊಳ್ಳುವರೇ ಗತಿಯಿಲ್ಲ. ಆ ಸೇವಕಳೊಬ್ಬಳೇ ನನ್ನನ್ನು ಸ್ವಲ್ಪ ವಿಚಾರಿಸುವಳು. ಇರಲಿ, ಅವಳು ಈಗ ಇಲ್ಲಿಯೇ ಬರುತ್ತಿರುವಳು. ಅವಳಿಂದ ಹೆಚ್ಚು ಸಂಗತಿಗಳು ತಿಳಿದುಬಂದರೂ ಬರಬಹುದು. (ನಿರ್ಮಲೆಯು ಬರುತ್ತಿರುವಳು) ಎಲೌ ರಮಣಿ, ಎಲ್ಲಿಗೆ, ಇಷ್ಟು ಅವಸರವಾಗಿ ಹೋಗುವೆ? ಎಲ್ಲಿ, ಒಂದು ಮಾತು, ಒಂದೇ ಒಂದುಮಾತು.

[ನಿರ್ಮಲೆಯು ಬರುವಳು]

ನಿರ್ಮ :—ಬೇಗ! ನನಗೆ ಅವಸರ !! ಬೇಗಹೇಳಿ !!! (ಸ್ವಗತಂ) ಇವನಿಗೆ ತಮ್ಮ ತಪ್ಪುಗಳೆಲ್ಲವೂ ತಿಳಿದಂತೆ ಇದೆ. ನಿಜಸ್ಥಿತಿಯನ್ನು ತಿಳಿಸುವ ಕಾಲವು ಇನ್ನೂ ಬಂದಿಲ್ಲ. ಆಗಲಿ, ವಿಚಾರಿಸಿ ನೋಡುವ.

ರಾಮ :—ನನ್ನ ಒಂದೇ ಒಂದು ಪ್ರಶ್ನೆಗೆ ಉತ್ತರವನ್ನು ಕೊಡು. ಈ ಮನೆಯಲ್ಲಿ ನಿನಗೇನು ಕೆಲಸವಿದೆ ?

ನಿರ್ಮ :—ಯಜಮಾನನಿಗೆ ನಾನೊಬ್ಬ ನಂಟಳು.

ರಾಮ :—ಬಡನಂಟಳೋ ?

ನಿರ್ಮ :—ಅಹುದು. ಬಡನಂಟಳೇ ಅಹುದು. ಮನೆಯ ಬೀಗದ ಕೈಗಳನ್ನು ಇಟ್ಟುಕೊಂಡು, ಮನೆಗೆ ಬಂದ ಅತಿಥಿಗಳಿಗೆ ಬೇಕಾದ ಅನುಕೂಲ್ಯಗಳನ್ನೆಲ್ಲಾ ಕಲ್ಪಿಸಿಕೊಡುವುದಕ್ಕೆ ನನ್ನನ್ನು ನೇಮಿಸಿದಾರೆ.

ರಾಮ :—ಈ ಭೋಜನಶಾಲೆಯಲ್ಲಿ ನೀನೇ ಮುಖ್ಯಳೊ ?

ನಿರ್ಮ :—ಇದು ಭೋಜನಶಾಲೆಯೆ ? ಅಯ್ಯೋ ! ಹೋ ! ಹೋ !! ಇದೇಕೆ ಹೀಗೆ ಹೇಳುವಿರಿ ? ಈ ಸುತ್ತಿನಲ್ಲೆಲ್ಲಾ ಗಣ್ಯನೆಂದು ಹೆಸರನ್ನು ಪಡೆದಿರುವ ದೇವದತ್ತನ ಮನೆಯು ಭೋಜನಶಾಲೆಯೆ !

ರಾಮ—(ಗಾಬರಿಗೆ ಪ್ರಾರಂಭವಾಗುವುದು) ಇದು...ಇದೇನೆ... ದೇವದತ್ತನಮನೆ ? ಎಲೌ ರಮಣಿ, ಇದೇನೇ ದೇವದತ್ತನ ಮನೆ ?

ನಿರ್ಮ :—ಅಹುದು. ಮತ್ತಾರದೆಂದು ತಿಳಿದಿರಿ ?

ರಾಮ:—ಹಾಗಾದರೆ, ಈಗಲೀಗ ಎಲ್ಲವೂ ತಿಳಿದಂತಾಯಿತು.

ಅಯ್ಯೋ! ನಾನು ಅನ್ಯಾಯವಾಗಿ ಮೋಸಹೋದೆನಲ್ಲ! ಏನುಗತಿ? ಅಯ್ಯೋ! ನನ್ನ ಪೆಚ್ಚುತನವನ್ನು ನೋಡಿ ಎಲ್ಲರೂ ನಗುವರು. ನನ್ನ ಹೆಸರು ಜಗತ್ಪ್ರಸಿದ್ಧವಾಗುವುದು. ನಾನು ಗಾಂಪರೊಡೆಯನಾದೆನು. ನಾನು ಈ ಮನೆಯನ್ನು ಭೋಜನಶಾಲೆಯೆಂದು ನಂಬಬಹುದೆ? ಅಯ್ಯೋ! ನಮ್ಮಪ್ಪನ ಸನ್ಮಿತ್ರನು ಭೋಜನಶಾಲೆಯ ಅಧ್ಯಕ್ಷನೆ? ನನ್ನನ್ನು ಎಂತಹ ಆಡಂಬರಗಾರನೆಂದೂ, ದುರಹಂಕಾರಿಯೆಂದೂ ದೇವದತ್ತನು ಆಲೋಚಿಸ ಬಹುದು? ಎಂತಹ ಬುದ್ಧಿಯಿಲ್ಲದ ಕೆಲಸವನ್ನು ಮಾಡಿದಂತಾಯಿತು. ಎಲೈ ರಮಣಿ, ನಿನ್ನನ್ನು ದೂತಿಯೆಂದು ಭಾವಿಸಿದ್ದೆನು.

ನಿರ್ಮ:— ಸರಿ! ನನ್ನ ನಡತೆಯಲ್ಲಿ ಯಾವ ವಿಷಯವನ್ನು ನೋಡಿ ನನ್ನನ್ನು ದೂತಿಯೆಂದು ತಿಳಿದಿರಿ?

ರಾಮ:— ಇಲ್ಲ; ಇಲ್ಲ. ನನ್ನಂತಹ ಮೂಢರು ಮತ್ತಾರೂ ಇಲ್ಲ. ನಾನು ತಪ್ಪುಗಳನ್ನು ಚಂದಾ ಎತ್ತಲು ಹೊರಟಿದ್ದೆನು. ಯತ್ನ ವಿಲ್ಲದೆ ನಿನ್ನನ್ನೂ ಒಬ್ಬ ಚಂದಾದಾರಳನ್ನಾಗಿ ಮಾಡಬೇಕಾಯಿತು. ನನ್ನ ವಿಚಿತ್ರಬುದ್ಧಿಗೆ ತಕ್ಕಂತೆ ಪ್ರತಿಯೊಂದೂ ತಲೆಕೆಳಗಾಯಿತು. ಉಪಚಾರ ಮಾಡುತಿದ್ದ ನಿನ್ನ ನಡತೆಯನ್ನು ಧೈರ್ಯವೆಂದು ನಂಬಿದೆನು. ನಿನ್ನ ನಿರ್ಮಲ ಭಾವವನ್ನು ಮರುಳುಮಾಡುವ ಪ್ರಯತ್ನವೆಂದು ಭಾವಿಸಿದೆನು. ಈಗ ಎಲ್ಲವೂ ಮುಗಿಯಿತು. ಇನ್ನು ಈ ಮನೆಯಲ್ಲಿ ನಾನು ಯಾರಿಗೂ ಮುಖ ವನ್ನು ತೋರಿಸಲಾರೆನು.

ನಿರ್ಮ:— ನಾನು ತಮಗೇನೂ ಅಪಕಾರವನ್ನು ಮಾಡಿಲ್ಲವಷ್ಟೆ? ಇಷ್ಟೊಂದು ವಿನಯಸಂಪನ್ನರಾಗಿ, ನನ್ನೊಡನೆ ಬಹು ಅಕ್ಕರೆಯಿಂದ ಮಾ ತನಾಡಿದ ಗೌರವಸ್ಥರ ಮನಸ್ಸನ್ನು ನೋಯಿಸಲು, ನನಗೆ ಸ್ವಲ್ಪವೂ ಇಷ್ಟ ವಿಲ್ಲ. (ಅಳುತ್ತ) ನನಗಾಗಿ ಯಾರಾದರೂ ಮನೆಯನ್ನು ಬಿಟ್ಟು ಹೋಗು ವುದಾದರೆ, ನನಗೆ ದುಃಖವು ಬರುವುದಿಲ್ಲವೆ? ನನ್ನಲ್ಲಿ ನಿಷ್ಕಲಂಕವಾದ ನಡತೆಯೊಂದಲ್ಲದೆ ಬೇರೆ ಯಾವವಿಧವಾದ ಐಶ್ವರ್ಯವೂ ಇರುವುದಿಲ್ಲ.

ಯಾರಾದರೂ, ನನ್ನ ನಡತೆಯವಿಚಾರದಲ್ಲಿ ಇಲ್ಲದ ದೋಷಾರೋಪಣೆಯನ್ನು ಮಾಡಿ, ನನ್ನನ್ನು ನಿಂದೆಗೆ ಗುರಿಮಾಡಿದರೆ, ನನಗೆ ಅಳುವು ಬರುವುದಿಲ್ಲವೆ ?

ರಾಮ:—ಅಯ್ಯೋ ! ದೇವರೆ ! ಇವಳು ಅಳುವಳು. ಯಾವ ಮರ್ಯಾದಸ್ಥಳಾದ ಸ್ತ್ರೀಯೂ ನನ್ನ ಮೇಲೆ ಹೀಗೆ ಅಭಿಮಾನವನ್ನು ತೋರಿಲ್ಲ. ನನ್ನ ಮನವು ಕರಗಿದೆ. (ಅವಳನ್ನು ನೋಡಿ) ಎಲೌ ಮೋಹದರಮಣಿ, ಈ ಮನೆಯಲ್ಲಿ ಯಾರನ್ನು ಬಿಟ್ಟುಹೋಗಲೂ ನನಗೆ ವ್ಯಸನವಿಲ್ಲ. ನಿನ್ನನ್ನು ಅಗಲಿರಲು ನನ್ನ ಮನಸ್ಸು ಹಿಂದೆಗೆಯುತ್ತಿರುವುದು. ಕುಲ ವಿದ್ಯೆ ಗೌರವ ಐಶ್ವರ್ಯಗಳಲ್ಲಿ ಅಸಮಾನರಾದ ನಮ್ಮಿಬ್ಬರಿಗೆ ವಿವಾಹವು ನಡೆಯುವ ಸಂಭವವಿಲ್ಲ. ಆದರೂ ನನ್ನ ಘನತೆಯಲ್ಲಿ ಪೂರ್ಣನಂಬಿಕೆಯನ್ನಿಟ್ಟು ನಿಷ್ಕಳಂಕಳಾಗಿರುವ ಸ್ತ್ರೀಯ ರೂಪುರಾಶಿಯಿಂದ ನಾನು ನಿಂದೆಗೆ ಗುರಿಯಾಗುವ ಸಂಭವವು, ದೇವರೇ, ಎಂದಿಗೂ ಬಾರದಿರಲಿ !

ನಿರ್ಮ:—(ಸ್ವಗತಂ) ಆಹಾ ! ಎಂತಹ ಉದಾರಿಯು. ಈಗಲೀಗ ಈತನನ್ನು ಮೆಚ್ಚಲು ಪ್ರಾರಂಭಿಸಬಹುದು. (ಪ್ರಕಾಶಂ) ನಿರ್ಮಲೆಯಂತೆಯೇ ನಾನೂ ಕುಲೀನಳು ಮತ್ತು ವಿದ್ಯಾವತಿ. ಆದರೆ ಐಶ್ವರ್ಯದಲ್ಲಿ ಅಸಮಾನಳು. ಬಡತನವನ್ನು ನೋಡಿ ಇತರ ಗುಣಗಳನ್ನೂ ತಿರಸ್ಕರಿಸುವುದು ದುರದೃಷ್ಟವಲ್ಲವೆ ? ಈ ನಿಮಿಷದವರೆಗೂ ಬಡತನವು ಕೆಟ್ಟದೆಂದು ಸ್ವಪ್ನದಲ್ಲಿಯೂ ನನಗೆ ತಿಳಿದಿರಲಿಲ್ಲ. ಅಯ್ಯೋ ! ಪಾಪಿಬಡತನವೆ ?

ರಾಮ:—ಎಲೌ ಮುದ್ದುರತ್ನವೆ, ಈಗ ಹಾಗೆತೋರಲು ಕಾರಣವೇನು ?

ನಿರ್ಮ:—ನನ್ನಲ್ಲಿ ಲಕ್ಷವರಹಗಳಿದ್ದರೂ ಅದೆಲ್ಲವನ್ನೂ ನಾನು ಯಾರಿಗೆ ಸಂತೋಷದಿಂದ ಈಗ ಸಮರ್ಪಿಸುತ್ತಿದ್ದೆನೋ, ಅವರನ್ನು ಈ ಬಡತನವು ನನ್ನಿಂದ ದೂರವಾಡಿರುತ್ತಲ್ಲವೆ ?

ರಾಮ:—(ಸ್ವಗತಂ) ಈ ಸ್ತ್ರೀಯ ನಿರ್ಮಲ ಸ್ವಭಾವವು ನನ್ನ ಹೃದ

ಯುವನ್ನು ಕಯ್ಸೆರೆಮಾಡಿರುವುದು. ನಾನು ಇನ್ನು ಇಲ್ಲಿದ್ದರೆ ನಿಜವಾಗಿ ಯೂ ಕೆಡುವೆನು. ಚಂಚಲನಾಗದೆ ಧೈರ್ಯವಮಾಡಿ, ಇವಳನ್ನು ಬಿಟ್ಟು ಈಗಲೇ ಓಡಿಹೋಗಬೇಕು. (ಪ್ರಕಾಶಂ) ನನ್ನ ವಿಷಯದಲ್ಲಿ ನೀನು ತೋರಿರುವ ಅಭಿಮಾನವು ನನ್ನ ಮನಸ್ಸನ್ನು ಬಹಳ ಮಟ್ಟಿಗೆ ಸೂರೆ ಗೊಂಡಿರುವುದು. ನಾನು ಸ್ವೇಚ್ಛೆಯಾಗಿ ಬಾಳಬಹುದಾಗಿದ್ದರೆ ನನಗೆ ಒಪ್ಪಿ ತಳಾದವಳನ್ನು ಈಗಲೇ ವರಿಸಬಹುದಾಗಿತ್ತು. ಆದರೆ ಲೋಕಾಪವಾ ದಕ್ಕೆ ಹೆದರಿ ತಂದೆಯು ಆಜ್ಞಾನುಸಾರವಾಗಿ ನಡೆಯಬೇಕಾಗಿದೆ. ನನಗೆ ಏನುಮಾತನಾಡಲೂ ತೋಚದು. ನಿಜವಾಗಿಯೂ ಹುಚ್ಚುಹಿಡಿದಿದೆಯೆಂದೇ ಹೇಳಬಹುದು. ಈಗ ಹೋಗಿ ಬರುವೆನು. ದೇವರು ನಿನಗೆ ಶುಭವನ್ನು ಮಾಡಲಿ ! (ಹೋಗುವನು)

ನಿರ್ಮ :—(ಸ್ವಗತಂ) ಇವನ ಗುಣಾತಿಶಯಗಳು ಇದುವರೆಗೂ ಸ್ವಲ್ಪ ವೂ ಗೋಚರವಿರಲಿಲ್ಲ. ನನಗೆ ಕೌಶಲವೂ ಯುಕ್ತಿಯೂ ನಿಜವಾಗಿಯೂ ಇದ್ದರೆ, ಇವನು ಮನೆಯಿಂದ ಹೇಗೆ ಹೊರಗೆ ಹೋಗಲಾಗುವುದೊ ನೋಡು ವೆನು. ಇವನ ಮನವನ್ನು ಸಂಪೂರ್ಣವಾಗಿ ಜಯಿಸಲು ದೂತಿಯಂತೆಯೇ ಇನ್ನೂ ಸ್ವಲ್ಪಕಾಲವಿರುವೆನು. ನನ್ನ ತಂದೆಗೆ ನಿಜವು ತಿಳಿದರೆ, ಅವನು ಹರ್ಷಿತನಾಗಿ ರಾಮವರ್ಮನನ್ನು ವರಿಸಲು ಆಜ್ಞೆಯನ್ನು ಕೊಡುವನು. ಅದೇ ಸರಿಯಾದ ಉಪಾಯವು. (ಹೊರಟುಹೋಗುವಳು)

[ದುರ್ಮತಿ ಕಮಲಾವತಿಯರು ಬರುವರು.]

ದುರ್ಮ :—ನಿಮಗೆ ಇಷ್ಟವಿದ್ದರೆ ಪುನಃ ನೀವೇ ಕಳ್ಳತನವನ್ನು ಮಾಡಬಹುದು. ನನ್ನ ಕೆಲಸವನ್ನು ನಾನು ಮಾಡಿರುವೆನು. ಜವಾಹಿರಿ ಯ ಪೆಟ್ಟಿಗೆಯು ನಮ್ಮತ್ತೆಯ ವಶವಾಯಿತು. ಆದರೂ ಇದೆಲ್ಲವೂ ಸೇವ ಕರ ತಪ್ಪಿನಿಂದ ಆದುದೆಂದು ಅವಳು ತಿಳಿದಿರುವಳು.

ಕಮ :—ಎಲೈ ದುರ್ಮತಿಯೆ, ಈ ದುರವಸ್ಥೆಯಲ್ಲಿ ನಮ್ಮ ಕೈ ಬಿಡುವೆಯೊ ? ನಾನು ಓಡಿಹೋಗುವೆನೆಂದು ನಮ್ಮತ್ತೆಗೆ ಅನುಮಾನವು

ಬಂದರೆ, ಅವಳು ನನ್ನನ್ನು ತನ್ನ ತಂಗಿಯ ಮನೆಗೆ ಬಂದಿಯನ್ನಾಗಿ ಮಾಡಿ ಕಳುಹಿಸುವಳು. ಆ ಮನೆಯ ವಾಸವು ಕಾರಾಗಾರಕ್ಕಿಂತಲೂ ಕಷ್ಟವಾದುದು.

ದುರ್ಮ:—ನಮ್ಮ ಅತ್ತೆಯು ಕೆಟ್ಟವಳು. ಅದಕ್ಕೆ ನಾನೇನು ಮಾಡಲಿ ? ಹಕ್ಕಿಗಳಂತೆ ಹಾರಬಲ್ಲ ಕುದುರೆಗಳನ್ನು ಸಿದ್ಧಪಡಿಸಿರುವೆನು. ನಮ್ಮತ್ತೆಯೆದುರಿಗೆ ನಿನ್ನನ್ನು ಪ್ರೀತಿಸುವಂತೆಯೂ ನಟಿಸುತ್ತೇನೆ. ಇನ್ನೇನು ಮಾಡಲಿ? ಒಡವೆಯನ್ನೂ ಕದ್ದುಕೊಟ್ಟಿದ್ದೆನು! ಅದೋ, ಅವಳೇ ಬರುತ್ತಿರುವಳು. ನಾವು ಈಗ ಅವಳೆದುರಿಗೆ ಸ್ವಲ್ಪ ನಾಟಕವಾಡಬೇಕು. ಇಲ್ಲವಾದರೆ ಅವಳಿಗೆ ಅನುಮಾನವು ಹುಟ್ಟುವುದು. (ಮರೆಯಾಗಿ ಹೋಗಿ ಪ್ರಣಯಿಗಳಂತೆ ನಟಿಸುವರು.)

[ಚಂಡಿಯು ಬರುವಳು.]

ಚಂಡಿ:—(ಸ್ವಗತಂ) ನನಗೇನೋ ಬಹಳ ಗಾಬರಿಯಾಗಿತ್ತು. ಇದೆಲ್ಲವೂ ಸೇವಕರ ತಪ್ಪಿನಿಂದ ಆದುದೆಂದು ದುರ್ಮತಿಯು ಹೇಳುವನು. ದುರ್ಮತಿಗೂ ಕಮಲೆಗೂ ವಿವಾಹವಾಗುವವರೆಗೂ ನಾನು ಶಾಂತಳಾಗಿರೆನು. ಅನಂತರ ಕಮಲೆಯು ತನ್ನ ಜವಾಹಿರಿಯನ್ನು ಇಟ್ಟುಕೊಂಡಿರಬಹುದು. ಓಹೊ, ಇದೇನು ? ಇತ್ತ ಪ್ರಣಯಕಲಹ! (ದುರ್ಮತಿಯ ಕಡೆಗೆ ತಿರುಗಿ, ಪ್ರಕಾಶಂ) ಎಲಾ, ದುರ್ಮತಿ! ಈಗಲಾದರೂ ಸಿಕ್ಕಿಬಿದ್ದೆಯೊ, ಇಲ್ಲವೊ? ನಿಮ್ಮ ಗುಟ್ಟು ರಟ್ಟಾಯಿತು. ನೀವಿಬ್ಬರೂ ಬಲು ಜಾಣರು. ನನ್ನ ಪ್ರೇಮದ ಮುದ್ದುಗಿಣಿಗಳು. ಅದೇನು ಪಿಸಪಿಸಗುಟ್ಟುತಿದ್ದಿರಿ ?

ದುರ್ಮ:—ಅದನ್ನು ನಿನಗೇಕೆ ಹೇಳಬೇಕು.

ಕಮ:—ದುರ್ಮತಿಯು ಇನ್ನು ಮೇಲೆ ನನ್ನನ್ನು ಎಡೆಬಿಡುವುದಿಲ್ಲವಂತೆ. ಅದೇ ನಮ್ಮ ರಹಸ್ಯ.

ದುರ್ಮ:—ನೀನು ಯಾವಾಗಲೂ ನನ್ನ ಬಳಿಯಲ್ಲಿಯೇ ನಗುತ ಇರುವುದಾದರೆ, ನನಗೆ ಪ್ರಪಂಚವೇ ಬೇಡ. ನಿನ್ನ ಮುಖವು ಅರಳಿದ ತಾವರೆ ಘೂ!ಸಕ್ಕರೆಯಂತೆ, ರುಚಿಯಾಗಿರುವುದು.(ಚುಂಬಿಸಲು ಪ್ರಯತ್ನಪಡುವನು.)

ಕಮ:—ನಿನ್ನಲ್ಲಿ ಯಾರಿಗೆತಾನೆ ಪ್ರೇಮವು ಹುಟ್ಟದು? ಎಷ್ಟು ಚಾಣ್ಮೆ? ಎಷ್ಟು ಮನೋಹರವೂ ವಿಶಾಲವೂ ಕೆಂಪೂ ಆದ (ಕೆನ್ನೆಯನ್ನು ಸವರುತ್ತ) ಕಪೋಲಗಳು! ಎಷ್ಟು ಸೌಂದರ್ಯ?

ಚಂಡಿ:—ಇಂದಿಗೆ ನಾನು ಧನ್ಯಳಾದೆನು.

ದುರ್ಮ:—ನಾನು ಕಮಲೆಯನ್ನು ಮೊದಲಿನಿಂದಲೂ ಪ್ರೀತಿಸುತ್ತಿರುವೆನು.

ಚಂಡಿ:—ನಮ್ಮ ದುರ್ಮತಿಯಂತೆ ಸುಂದರಪುರುಷರು ಮತ್ತೊಬ್ಬರಿರುವರೆ? ಸಾಕ್ಷಾತ್ ಮನ್ಮಥ! ನಮ್ಮಣ್ಣನೊಬ್ಬನೇ ಹೀಗಿದ್ದವನು. ಕಮಲೆ, ನಿನ್ನ ಒಡವೆಗಳನ್ನೆಲ್ಲಾ ನಿನಗೆ ಕೊಡುವೆನು. ನಾಳೆಯೇ ನಿಮ್ಮ ವಿವಾಹವು ನೆರವೇರಲಿ! ದುರ್ಮತಿಯ ಓದುಬರಹದ ಮಾತನ್ನು ಮುಂದೆ ವಿರಾಮವಾದಾಗ ಆಲೋಚಿಸುವ.

[ಚಂಡಗುಪ್ತನು ಬರುವನು.]

ಚಂಡ:—ದುರ್ಮತಿಯೆಲ್ಲಿ? ಅವನಿಗೊಂದು ಕಾಗದವಿದೆ.

ದುರ್ಮ:—ನಮ್ಮತ್ತೆಗೆ ಕೊಡು. ಅವಳೇ ನನ್ನ ಕಾಗದವನ್ನು ಮೊದಲು ಓದಲಿ.

ಚಂಡ:—ನಿನಗೇ ಕೊಡಬೇಕೆಂದು ನನಗೆ ಅಪ್ಪಣೆಯಾಗಿದೆ.

ದುರ್ಮ:—ಯಾರ ಅಪ್ಪಣೆ? ಯಾರು ಅದನ್ನು ಕಳಿಸಿದವರು?

ಚಂಡ:—ಕಾಗದವನ್ನೇ ಓದಿದರೆ ತಿಳಿಯುವುದು.

ದುರ್ಮ:—ನನಗೆ ಹಾಗೆಯೇ ತಿಳಿಯಬಾರದಾಗಿತ್ತೆ! (ಕಾಗದವನ್ನು ತೆಗೆದುಕೊಂಡು ತಿರುಗಿಸಿ ನೋಡುವನು.)

ಕಮ:—(ಸ್ವಗತಂ) ಕೆಟ್ಟೆವು. ಕೆಟ್ಟೆವು. ಪ್ರಿಯಸೇನನು ದುರ್ಮತಿಗೆ ಬರೆದ ಕಾಗದವೆಂದು ಬರವಣಿಗೆಯಿಂದ ತಿಳಿದುಬರುವುದು. ನಮ್ಮತ್ತೆಗೆ ಈ ವಿಷಯವು ತಿಳಿದರೆ ನಾವು ಮುಳುಗಿಹೋಗುವೆವು. ಸಾಧ್ಯವಾದರೆ ಕಾಗದವು ಅವಳ ದೃಷ್ಟಿಗೆ ಬೀಳದಂತೆ ಮಾಡಬೇಕು. (ಚಂಡಿಯನ್ನು

ನೋಡಿ) ಅತ್ತೆ, ದುರ್ಮತಿಯು ಈಗ ರಾಮವರ್ಮನಿಗೆ ಕೊಟ್ಟ ಉತ್ತರಗಳನ್ನು ನೀನು ಕೇಳಿದರೆ ನಕ್ಕು ನಕ್ಕು ಬೀಳುವಿ. ನಿನಗಿನ್ನೂ ತಿಳಿಯದೇನೋ? ಹೀಗೆ ಬಾ ; ದುರ್ಮತಿಗೆ ಕೇಳಿಸದಂತೆ ಎಲ್ಲವನ್ನೂ ಹೇಳುವೆನು. ಬಾ ! ಇತ್ತ ಬಾ!! (ಅವರಿಬ್ಬರೂ ಹೊರಡುವರು.)

ದುರ್ಮ:—(ಕಾಗದವನ್ನು ನೋಡುತ್ತ) ಇದೆಂತಹ ವಿಚಿತ್ರವಾದ ಬರವಣಿಗೆ? ದುಂಡಗೂ ಉದ್ದುದ್ದಾಗಿಯೂ ಸೊಟ್ಟಸೊಟ್ಟಾಗಿಯೂ ಚಿತ್ರವಿಚಿತ್ರವಾಗಿಯೂ ಇದೆ. ಅಚ್ಚಿನಕ್ಷರವನ್ನು ಓದಲು ನನಗೆ ಬರುವುದು. ಈ ಗಂಡಾಂತರದ ಹಾಳು ವೋಡಿಯನ್ನು ಓದಬಲ್ಲವರಾರು ? ಈ ಕಾಗದದಲ್ಲಿ ಅಕ್ಷರದ ತಲೆಯಾವುದೊ ಬಾಲವಾವುದೊ ತಿಳಿವುದಿಲ್ಲ. ವಿಳಾಸವೇನೊ "ಮಹಾರಾಜಶ್ರೀ ದುರ್ಮತಿರಾಯರಿಗೆ'' ಎಂದಿದೆ. ನನ್ನ ಹೆಸರನ್ನು ನಾನು ಚನ್ನಾಗಿ ಓದಬಲ್ಲೆನಲ್ಲವೆ ? ಅದೂ ಆಶ್ಚರ್ಯವೇ ಸರಿ. ಕಾಗದವನ್ನು ಒಡೆದರೆ,-ಸರಿ;-ಸರಿ.-ನನ್ನ ತಲೆ ! ನನಗೇನು ತಿಳಿವುದು ? ಕಾಗದದ ಸ್ವಾರಸ್ಯವೇನಿರಬಹುದು ? ತಿಳಿಯದಲ್ಲ ! ಏನುಮಾಡಲಿ ! (ಕಾಗದದ ಮಡಿಕೆಯನ್ನು ಬಿಚ್ಚಿ ಹಿಡಿದು ನೋಡುವನು.)

ಚಂಡಿ:—(ಒಂದುಭಾಗದಲ್ಲಿ) ಹಾ ! ಹಾ !! ಬಹಳ ಸೊಗಸು ! ದುರ್ಮತಿಯನ್ನು ಮಾತಿನಲ್ಲಿ ಸೋಲಿಸಲು ಆ ತತ್ವಜ್ಞನಿಗೆ ಕಷ್ಟವಾಯಿತೆ ?

ಕಮ:—ಅಹುದು; ಅತ್ತೇ, ನಾನೇನು ಸುಳ್ಳಾಡುವೆನೆ? ಇನ್ನೂ ಸ್ವಾರಸ್ಯವನ್ನು ಹೇಳುವೆನು. ಕೇಳು. ಹೀಗೆ ಬಾ. ರಾಮವರ್ಮನು ದುರ್ಮತಿಯ ಮಾತುಗಳಿಗೆ ಸಿಕ್ಕಿಕೊಂಡು ಒದ್ದಾಡಿದ ರೀತಿಯನ್ನು ಹೇಳುವೆನು. ಹೀಗೆ ಬಾ.

ಚಂಡಿ:—ದುರ್ಮತಿಯೇ ಒದ್ದಾಡಿದನೆಂದು ನನಗೆ ತೋರುವುದು.

ದುರ್ಮ:—(ಇನ್ನೂ ಕಾಗದವನ್ನು ನೋಡುತ್ತ) ಇದೆಂತಹ ಬರಹ ! ಇದೇನು ಇಂಗ್ಲೀಷೊ ? ಕನ್ನಡವೊ ? ಓಹೊ ! ಇದು ಕನ್ನಡಾಕ್ಷರ. (ಓದುವನು) 'ಸ್ವಾಮಿ'. ಸರಿ. ಮುಂದಕ್ಕೆ 'ಮ' ಆಮೇಲೆ 'ಟ' ಅನಂ

ತರ 'ಸ' ಮುಂದಕ್ಕೆ 'ಸ' ಆಮೇಲೆ 'ನ, ವೊ,' 'ರ, ವೊ,' 'ಸ, ವೊ,' ಯಾವುದು ಯಾವ ಅಕ್ಷರವೊ ಯಾರು ಬಲ್ಲರು ?

ಚಂಡಿ:—ದುರ್ಮತಿ, ಇದೇನು ! ಯಾರಕಾಗದ ? ನಾನು ಓದಿ ಹೇಳಲೆ ?

ಕಮಲೆ:—ಅತ್ತೆ, ನಾನು ಓದುವೆನು. ಮೋಡಿ ಅಕ್ಷರವನ್ನು ಓದಲು ನಾನು ಚನ್ನಾಗಿ ಅಭ್ಯಾಸಮಾಡಿರುವೆನು. (ದುರ್ಮತಿಯ ಕೈಯಿಂದ ಕಾಗದವನ್ನು ತೆಗೆದುಕೊಂಡು) ಇದು ಯಾರದೆಂಬುದು ಗೊತ್ತೊ ?

ದುರ್ಮ:—ಇಲ್ಲ. ಪ್ರಾಯಶಃ ಗುಗ್ಗಾಣಿಯಿಂದ ಬಂದಿರಬಹುದು.

ಕಮಲೆ: —ಅವನೇ ಬರೆದಿರುವನು. (ಓದುವಂತೆ ನಟಿಸುವಳು) ಸ್ವಾಮಿ, ನಾನು ಕ್ಷೇಮ. ನೀವೂ ಕ್ಷೇಮವಾಗಿರಬಹುದು. ನಾವು ಆನಂದ ಮಂದಿರವನ್ನು ಅಲಂಕರಿಸಿರುವೆವು. ನಮ್ಮ ಮಂದಿರದಲ್ಲೊಬ್ಬನು ಜಟ್ಟಿಯನ್ನು ಸೋಲಿಸಿದನು. ಭಾರಿಕುಸ್ತಿ ! ಬಹಳ ಸೊಗಸಾದುದು !! ಇದರಲ್ಲಿರುವುದೆಲ್ಲಾ ಕೋಳಿ-ಕುರಿಗಳ ಕಾಳಗದಸುದ್ದಿ. ಇನ್ನೇನೂ ಇಲ್ಲ. ಆಮೇಲೆ ಓದಿದರಾಯಿತು. (ಎಂದು ಅವನ ಜೇಬಿಗೆ ಮಡಿಸಿ ಹಾಕುವಳು).

ದುರ್ಮ:—ಏನೂ ಸ್ವಾರಸ್ಯವಿಲ್ಲವಂತೆ. ಆ ವಿಷಯವು ನಿನಗೇನು ಗೊತ್ತು? ಮುಂದೆ ಬರೆದಿರುವುದನ್ನು ಕೇಳಬೇಕು. ನನ್ನ ಪ್ರಾಣವೇ ಈಗ ಆ ಆನಂದಮಂದಿರದಲ್ಲಿದೆ. ಅತ್ತೆ, ಸ್ವಾರಸ್ಯವಿಲ್ಲವಂತೆ. ನೀನು ಓದಿ ಹೇಳು. (ಕಾಗದವನ್ನು ಚಂಡಿಯಕಯ್ಗೆ ಕೊಡುವನು.)

ಚಂಡಿ:—ಇದೇನು ? (ಓದುತ್ತ) "ರಾ॥ ದುರ್ಮತಿರಾಯರಿಗೆ. ತೋಟದಬಳಿ, ಗಾಡಿ ಕುದುರೆ ಸಮೇತವಾಗಿ, ನಾನೂ ಕಮಲಾವತಿಯೂ ನಿನ್ನ ಆಗಮನವನ್ನೇ ಇದಿರು ನೋಡುತ್ತಿರುವೆವು. ನಮ್ಮ ಕುದುರೆಗಳು ಹಜ್ಜೆಹಾಕಲಾರವು. ವಾಗ್ದಾನ ಮಾಡಿದಂತೆ ಹೊಸ ಕುದುರೆ ಗಾಡಿಗಳನ್ನು ಸಿದ್ಧಪಡಿಸುವಿಯೆಂದು ನಂಬಿರುವೆನು. ಶೀಘ್ರಪಡಿಸಬೇಕು. ತಡಮಾಡಿದರೆ ಆ ಮುದಿಗೂಬೆ ನಿಮ್ಮತ್ತೆಯು ಸಂದೇಹಪಡಲು ಅವಕಾಶವಾಗುವುದು. ಇಂತು

ನಿನ್ನ ಮಿತ್ರ, ಪ್ರಿಯಸೇನ.'' (ಶೋಕಾಗ್ರಹಗಳನ್ನು ತೋರ್ಪಡಿಸುತ್ತ) ಅಯ್ಯೋ, ಇದೇನು? ನಾನು ಶಾಂತಳಾಗಿರುವುದು ಹೇಗೆ? ಎಲಾ ಮಡಯ, ನೆಟ್ಟಗೆ ನಾಲ್ಕು ಮಾತನಾಡಲು ಬಾರದ, ಯುಕ್ತಾಯುಕ್ತಜ್ಞಾನವಿಲ್ಲದ ನೀನು ನನ್ನನ್ನು ಪ್ರತಿಭಟಿಸಿ ಕಾರ್ಯಗಳನ್ನು ನಡೆಯಿಸುವಿಯಾ? ಒಳ್ಳೆಯದು; ಇರಲಿ. ನಿಮಗೆಲ್ಲಾ ತಕ್ಕ ಪ್ರಾಯಶ್ಚಿತ್ತವನ್ನು ಮಾಡುವೆನು. ಜಾಣೆ! ಕುದುರೆ ಗಾಡಿಗಳು ಸಿದ್ಧವಾಗಿರಬೇಕಲ್ಲವೆ? ಅಯ್ಯೋ ಪಾಪ! ಅವಕ್ಕೇಕೆ ಆಶಾಭಂಗವನ್ನುಂಟು ಮಾಡಬೇಕು. ನಿನ್ನ ಪ್ರಣಯಿಯ ಸಂಗಡ ಹೋಗು ವುದಕ್ಕೆ ಪ್ರತಿಯಾಗಿ ನನ್ನೊಡನೆ ನನ್ನ ತಂಗಿಯ ಮನೆಗೆ ಹೊರಡು. ಅವೇ ಕುದುರೆಗಾಡಿಗಳು ಹೊರಡಲಿ. ಅಲ್ಲಿ ನೀನು ಸುರಕ್ಷಿತವಾಗಿರಬಹುದು. ಎಲಾ ದುರ್ಮತಿ, ನೀನು ಕುದುರೆಯನ್ನೇರು. ನಮ್ಮ ಕಾವಲಿಗಾಗಿ ಜತೆಯಲ್ಲಿ ಬಾ. ಎಲಾ ಚಂಡಗುಪ್ತ, ರಕ್ತಾಕ್ಷ, ಸೋಮಾರಿ ಸಿದ್ದ, ಎಲ್ಲಿ? ಉಳಿದವ ರೆಲ್ಲಿ? ಎಲ್ಲರೂ ಬನ್ನಿ, ಹೂ! ಹೂ!! ನಿಮಗೆ ಯಾವ ಮಾರ್ಗವು ಒಳ್ಳೆ ಯದೆಂಬುದನ್ನು ಈಗ ಕಲಿಸಿಕೊಡುವೆನು. (ಹೊರಡುವಳು)

ಕಮ:—(ಸ್ವಗತಂ) ಈಗಲೀಗ ನಾನು ಸಂಪೂರ್ಣವಾಗಿಯೂ ಹಾಳಾದೆನು. ದುರ್ಮತಿ, ಪ್ರಮಾದಮಾಡಿದಿಯಲ್ಲೊ?

ದುರ್ಮ:—ಸಂದೇಹವೇನು? ಸಂಪೂರ್ಣವಾಗಿಯೂ.......

ಕಮಲೆ:—ನಿನ್ನಂತಹ ಮುಠ್ಠಾಳರ ಸಹವಾಸದಿಂದ ಇದೇ ಫಲವು ದೊರೆಯುವುದು. ಎಷ್ಟುಸಾರಿ, ಕಣ್ಣು, ಕೈ, ಹುಬ್ಬುಗಳಿಂದ ಸಂಜ್ಞೆಮಾಡಿ ತೋರಿದರೂ ನಿನಗೆ ತಿಳಿಯದೇ ಹೋಯಿತೆ? ನಿನಗೆ ಸುಳು ಸೂಕ್ಷ್ಮಜ್ಞಾ ನವು ಇಲ್ಲ.

ದುರ್ಮ:—ನೀನು ಹಾಳಾದುದು ನನ್ನ ಮುಠ್ಠಾಳತನದಿಂದಲ್ಲ. ನಿನ್ನ ಕೆಲಸಕ್ಕೆ ಬಾರದ ಜಾಣ್ಮೆಯಿಂದಲೇ! ನೀನೇಕೆ ಮಹಾಕುಶಲತೆಯನ್ನು ತೋರಿಸುವಳಂತೆ ಆನಂದಮಂದಿರ, ಗುಗ್ಗಾಣಿ, ಕುಸ್ತಿ, ಕೋಳಿಯ ಕಾಳಗ ಗಳ ಸುದ್ದಿಯನ್ನು ಹೇಳುತ ಬಂದೆ? ನಾನು ಅದೆಲ್ಲವೂ ನಿಜವೆಂದೇ ನಂಬಿ

ದೆನು. ಅದಕ್ಕಾಗಿಯೇ, ನಮ್ಮತ್ತೆಗೆ ಕಾಗದವನ್ನು ಕೊಟ್ಟು ಓದಿಸಿದೆನು. ನನ್ನ ತಪ್ಪೇನು ?

[ಪ್ರಿಯಸೇನನು ಬರುವನು.]

ಪ್ರಿಯ:—ದುರ್ಮತಿ, ನೀನು ನನ್ನ ಕಾಗದವನ್ನು ನಿಮ್ಮತ್ತೆಯ ಕಯ್ಗೆ ಕೊಟ್ಟು ನಮ್ಮನ್ನು ನಿಜವಾಗಿಯೂ ಮುಳುಗಿಸಿಬಿಟ್ಟೆ. ಇದು ಸರಿಯೆ? ಹೀಗೆ ಮಾಡಬಹುದೆ ?

ದುರ್ಮ:—ಸಾಲದುದಕ್ಕೆ ನೀನೊಬ್ಬನು ಬಂದೆಯೊ? ಕಮಲೆಯನ್ನೇ ಕೇಳು. ಯಾರಿಂದ ಈ ಅನರ್ಥವು ಸಂಭವಿಸಿತೆಂಬುದನ್ನು ಅವಳನ್ನೇ ಕೇಳು. ಇದಕ್ಕೆಲ್ಲ ಅವಳ ಕುಶಲತೆಯೇ ಕಾರಣ. ನನ್ನ ತಪ್ಪು ಏನೇನೂ ಇಲ್ಲ.

[ರಾಮವರ್ಮನು ಬರುವನು.]

ರಾಮ:—ನಿಮ್ಮೆಡೆಯಲ್ಲಿ ನಿನ್ನ ಬಾಳು ಈಗ ಸಾರ್ಥಕವಾಯಿತು. ಎಲ್ಲರಿಂದಲೂ ತುಚ್ಛನೆನಿಸಿಕೊಂಡು, ತಿರಸ್ಕರಿಸಲ್ಪಟ್ಟು, ಅಪಮಾನವನ್ನು ಹೊಂದಿ, ಅಯ್ಯೋ! ಕೊನೆಗೆ ಹುಚ್ಚನೂ ಎಂದೆನಿಸಿಕೊಳ್ಳಬೇಕಾಯಿತು. ನನ್ನ ಬಾಳು ನಗೆಗೀಡಾಯಿತು.

ದುರ್ಮ:—ಇವನೂ ಒಬ್ಬನು ಬಂದನೋ? ಹುಚ್ಚರ ಆಸ್ಪತ್ರೆಯನ್ನು ಜಾಗ್ರತೆಯಾಗಿ ಬರಿದುಮಾಡಬೇಕು. ಇವರೆಲ್ಲರೂ ಅಲ್ಲಿರಬೇಕಾದವರು.

ಕಮ:—ಇವೆಲ್ಲಕ್ಕೂ ಮೂಲಕಾರಣರಾದ ಈ ಮಹಾಶಯರಿಗೆ ನಾವು ಕೃತಜ್ಞರಾಗಿರಬೇಕು.

ರಾಮ:—ಈ ದಡ್ಡನನ್ನು ಏನುಮಾಡಬಹುದು ? ಅವಿವೇಕ, ಚಿಕ್ಕ ವಯಸ್ಸುಗಳು ಮಾತ್ರ ಅವನ ಆಧಾರವಸ್ತುಗಳಾಗಿವೆ.

ಪ್ರಿಯ:—ಈ ಪಾಪಿಯನ್ನು ತಿದ್ದಲು ಪ್ರಯತ್ನಪಡುವವರಿಗೆ ಅವಮಾನವು ತಪ್ಪದು. ಇವನ ಹೊಟ್ಟೆಯನ್ನು ಮೂಲಕಾರಣರಾದ ಈ ಸಹವಾಸವಾಯಿತು.

ಕಮ:—ಇಷ್ಟಾದರೂ ಇವನ ಕುಯುಕ್ತಿ, ಅಸೂಯೆಗಳನ್ನು ನೋಡಿ. ನಮ್ಮ ದುರವಸ್ಥೆಯನ್ನು ನೋಡಿಯೂ ಇವನು ಆನಂದದಿಂದಿರುವನು.

ಪ್ರಿಯ:—ಅವಿವೇಕಶಿಖಾಮಣಿ! ಕಷ್ಟಸುಖಗಳ ಸುಳಿವನ್ನೇ ತಿಳಿಯದ ನಾಯಿ!

ದುರ್ಮ:—ಇದೇನು ಗೋಳು ಬಂತಪ್ಪಾ; ಒಬ್ಬೊಬ್ಬರನ್ನಾಗಿ ಈ ದೊಣ್ಣೆಯಿಂದ ಬಡಿದುಬಿಡುವೆನು. (ಮಗ್ಗುಲಿನಲ್ಲಿಯೇ ಇದ್ದ ಒಂದು ದೊಣ್ಣೆಯನ್ನು ತೆಗೆದುಕೊಳ್ಳುವನು.)

ರಾಮ:—ಅವನು ನಮ್ಮ ಕೋಪಕ್ಕೆ ಪಾತ್ರನಾಗಲೂ ಅರ್ಹನಲ್ಲ. ಪ್ರಿಯಸೇನನೆ, ನಿನ್ನ ನಡತೆಯಲ್ಲೇ ನನಗೆ ಅನುಮಾನವು ಬಂದಿರುವಾಗ ಅವನ ಪಾಡೇನು? ನಾನು ಈ ಮನೆಯ ವಿಷಯದಲ್ಲಿ ಮೋಸ ಹೋಗಿರುವೆನೆಂದು ತಿಳಿದೂ, ನೀನು ನನ್ನ ತಪ್ಪನ್ನು ತಿದ್ದಲಿಲ್ಲವಲ್ಲಾ? ಇದು ಸರಿಯೊ? ನ್ಯಾಯವೊ?

ಪ್ರಿಯ:—ಆಶಾಭಂಗದಿಂದ ನಾನು ಸಾಯುತ್ತಲಿರುವಾಗ, ನಿನಗೆ ಸಮಾಧಾನವನ್ನು ಕೊಡಬೇಕೊ? ರಾಮವರ್ಮನೆ, ಅದು ಸ್ನೇಹಧರ್ಮವಲ್ಲ!

ರಾಮ:—ಆದರೆ, ಪ್ರಿಯ—

ಕಮ:—ರಾಮವರ್ಮನೆ, ನಾವು ಸ್ವಲ್ಪಕಾಲ ಸುಮ್ಮನಿದ್ದೆವು. ಅಷ್ಟರಲ್ಲಿಯೇ ನಿನಗೆ ನಿಜವನ್ನು ತಿಳಿಸುವ ಕಾಲವು ಮೀರಿಹೋಯಿತು. ಏನು ಮಾಡುವ?

[ಸೇವಕನು ಬರುವನು.]

ಸೇವ:—ಕಮಲಾವತಿಯವರೆ, ಯಜಮಾನಿಯವರು ನಿಮ್ಮನ್ನು ಈ ಕ್ಷಣವೇ ಕರೆದುಕೊಂಡು ಬರಬೇಕೆಂದು ಹೇಳಿರುವರು. ಕುದುರೆಯು ಕುಣಿದಾಡುತ್ತಿರುವುದು. ನಿಮ್ಮ ಶಾಲು ಮೇಜಿನಮೇಲಿರುವುದು. ಈ ರಾತ್ರೆಯೇ ನೀವು ಮೂವತ್ತು ಮೈಲಿ ಪ್ರಯಾಣ ಮಾಡಬೇಕಂತೆ. ಹೊರಡಿ.

(ಸೇವಕನು ಹೊರಡುವನು)

ಕಮ:—ಇಗೋ, ಬಂದೆನು. ಬಂದೆನು.

ರಾಮ:—(ಪ್ರಿಯಸೇನನನ್ನು ನೋಡಿ) ಪ್ರಿಯ, ನನ್ನನ್ನು ಪರಿಹಾಸಕ್ಕೆ ಗುರಿಮಾಡಿದುದು ನ್ಯಾಯವೆ? ನನ್ನನ್ನು ನೋಡಿ ಪ್ರತಿಯೊಬ್ಬರೂ ನಗುವರು.

ಪ್ರಿಯ:—ರಾಮ, ನೀನೇ ಆಲೋಚಿಸಿನೋಡು. ಭದ್ರವಾಗಿಟ್ಟಿರಲು ನಿನ್ನ ವಶಕ್ಕೆ ಕೊಟ್ಟಿದ್ದ ವಸ್ತುವನ್ನು ಮತ್ತೊಬ್ಬರಿಗೆ ಒಪ್ಪಿಸಬಹುದೊ? ನೀನು ಯಾವಾಗಲೂ ಹೀಗೆ.

ಕಮ:—ರಾಮವರ್ಮ ಪ್ರಿಯಸೇನರೆ, ನಿಷ್ಕಾರಣವಾಗಿ ವ್ಯಾಜ್ಯವಾಡಿ ನನ್ನಸಂಕಟವನ್ನು ಹೆಚ್ಚಿಸುವಿರೇಕೆ? ನಿಮ್ಮ ದಮ್ಮಯ್ಯ! ಸುಮ್ಮ—

(ಮತ್ತೆ ಸೇವಕನು ಬರುವನು)

ಸೇವ:—ತಾಯಿ, ಇಗೊ, ನಿಮ್ಮಶಾಲು. ಹೊರಡಿ. ಒಡತಿಯು ರೇಗುತ್ತಿರುವಳು. (ಹೊರಟುಹೋಗುವನು)

ಕಮ:—ಬಂದೆನು. (ಪ್ರಿಯಸೇನ ರಾಮವರ್ಮರನ್ನು ನೋಡಿ) ನಿಮ್ಮನ್ನು ಹೀಗೆ ಬಿಟ್ಟುಹೋದರೆ ಹೆದರಿಕೆಯಿಂದ ನನ್ನ ಪ್ರಾಣವೇ ಹೋಗುವುದು. (ಪುನಃ ಸೇವಕನು ಅವಸರದಿಂದ ಬರುವನು.)

ಸೇವ:—ಕಮಲಾವತಿ, ನಿಮ್ಮ ವಸ್ತ್ರ, ಕೈಪೆಟ್ಟಿಗೆ, ಸೀರೆಗಳೆಲ್ಲವನ್ನೂ ತೆಗೆದುಕೊಂಡಿರುವೆನು. ಕುದುರೆಗಳನ್ನು ಹಿಡಿದು ನಿಲ್ಲಿಸಲಾರೆವು. ಯಜಮಾನಿಯ ಕೋಪವು ಹೆಚ್ಚುತಲಿರುವುದು. ಹೊರಡಿ, ಹೊರಡಿ.

ಕಮ:—ರಾಮವರ್ಮನೆ, ಮುಂದೆ ನನ್ನನ್ನು ಇದಿರ್ಗೊಳ್ಳಲು ಕಾದಿರುವ ನಿರ್ಬಂಧಗಳು ನಿನಗೆ ತಿಳಿದುಬಂದರೆ, ಈಗ ನನ್ನಮೇಲಿರುವ ಕೋಪವು ಶಾಂತವಾಗಿ ದಯೆಯು ಹುಟ್ಟುವುದರಲ್ಲಿ ಸಂಶಯವಿಲ್ಲ.

ರಾಮ:—ನನ್ನಭಾಗಕ್ಕೆ ಈಗ ಬಂದೊದಗಿರುವ ನೂರೆಂಟು ದುರವಸ್ಥೆಗಳಿಂದ ನಾನು ಕೇವಲ ಹುಚ್ಚನಾಗಿರುವೆನು. ನಾನೇನು ಮಾಡಬೇಕೆಂಬುದು ನನಗೆ ನಿಜವಾಗಿಯೂ ತಿಳಿಯದು. ಕಮಲೆ, ಕ್ಷಮಿಸು. ಪ್ರಿಯ

ಸೇನನೆ, ನೀನು ದಯವಿಟ್ಟು ಮನ್ನಿಸು. ನಾನು ಮುಂಗೋಪಿಯೆಂಬುದನ್ನು ನೀನು ಬಲ್ಲೆ. ನನ್ನನ್ನು ಈಗ ಸಿಟ್ಟೆಬ್ಬಿಸಬೇಡ.

ಸೇವಕ:—ತಾಯಿ, ಹೊರಡಿ. ಹೊತ್ತಾಯಿತು.

ಕಮ:—ಪ್ರಿಯನೆ, ನಾನು ಆಲೋಚಿಸಿರುವಂತೆ, ಇಲ್ಲ, ದೃಢವಾಗಿಯೂ ನಂಬಿರುವಂತೆ, ನಿನಗೆ ನನ್ನಲ್ಲಿ ಪ್ರೇಮಾಭಿಮಾನಗಳು ಇರುವುದಾದರೆ, ಇನ್ನು ಮೂರುವರ್ಷಗಳ ಕಾಲ ಸ್ಥಿರಸಂಕಲ್ಪದಿಂದಿದ್ದರೆ, ಆಗ ನಮ್ಮ ಸುಖವು ಕೈಸೇರುವುದು. ಮತ್ತು—

ಚಂಡಿ:—(ಒಳಗೆ, ಘಟ್ಟಿಯಾಗಿ ಕೂಗುವಳು) ಎಲೇ! ಕಮಲೇ!! ಎಲೇ! ಕಮಲೇ!! ಎಲ್ಲಡಗಿರುವೆ, ಬೇಗ ಬಾ, ಹೊತ್ತಾಯಿತು.

ಸೇವಕ:—ತಾಯಿ, ಹೊರಡಿ. ಹೊರಡಿ.

ಕಮ:—ಬಂದೆನು. ಪ್ರಿಯನೆ, ದೃಢಚಿತ್ತನಾಗಿರು. ಸ್ಥಿರಸಂಕಲ್ಪವನ್ನು ಮರೆಯದಿರು. (ಸೇವಕನೂ ಕಮಲಾವತಿಯೂ ಹೊರಡುವರು)

ಪ್ರಿಯ:—ದೇವರೇ, ಇದನ್ನು ಹೇಗೆ ಸಹಿಸಲಿ? ಇನ್ನೇನು ಕಯ್ಸೇರಿತೆಂದು ನಂಬಿದ್ದ ಸೌಖ್ಯವು ದೂರಸಾಗಿತಲ್ಲಾ? ಕೈಗೆ ಬಂದ ತುತ್ತು ಬಾಯಿಗೆ ಬಾರದೆ ಹೋಯಿತಲ್ಲಾ! ಹಾ! ಹಾ!!

ರಾಮ:—ದುರ್ಮತಿ, ನೋಡಿದೆಯೋ? ನಿನ್ನ ಚೇಷ್ಟೆಯಫಲ? ನಿನಗೆ ಹಾಸ್ಯ. ನಮಗಾದರೊ, ಪ್ರಾಣಸಂಕಟ. ಅವರಿಗಾದರೊ ಆಶಾಭಂಗ. ಇಷ್ಟೇ ಅಲ್ಲ. ಇನ್ನೂ ವಿವಿಧ ಗೋಳು!

ದುರ್ಮ:—ಭಲಾ ಭಲಾ, ಅದೇ ಸೊಗಸಾದ ಉಪಾಯ. ಹೋ, ರಸವತ್ತಾದ ಉಪಾಯ. ಎಲಾ ಮಂಕರಾ, ಹಿಗ್ಗಿ ಹೋಗಿರಿ. ನಾನು ಹೇಳುವುದನ್ನು ಕೇಳಿ. ಯಾರಲ್ಲಿ? ನನ್ನ ಪಾದರಕ್ಷೆಗಳನ್ನು ತೆಗೆದುಕೊಂಡು ಬನ್ನಿ. ಪ್ರಿಯಸೇನನೆ, ಇನ್ನೆರಡು ಘಂಟೆಗಳನ್ನು ಬಿಟ್ಟುಕೊಂಡು ನೀನು ತೋಟದಬಳಿಗೆ ಬಂದಿರು. ನೀವು ದುರ್ಮತಿಯು ಕೆಟ್ಟವನೆಂದು ತಿಳಿದಿರಬಹುದು. ಆದರೆ ನಾನು ಅಂತಹನಲ್ಲ. ದುರ್ಮತಿಯು ಸಾಧುವೂ

ಯೋಗ್ಯನೂ ಎಂದು ನಿಮಗೆ ತಿಳಿದುಬರುವುದು. ತಿಳಿದುಬಂದರೆ ಸರಿಯೊ ? ಇಲ್ಲವಾದರೆ ನನ್ನ ಕುದುರೆಗಳನ್ನೂ ಕಲಾಮಣಿಯನ್ನೂ ಎಲ್ಲವನ್ನೂ ಅಪಹರಿಸಿಕೊಂಡು ಹೋಗಿ. ಎಲ್ಲಿ ? ನನ್ನ ಪಾದರಕ್ಷೆಗಳನ್ನು ತೆಗೆದುಕೊಂಡು ಬನ್ನಿ. ಹೊತ್ತಾಯಿತು; ಹೊರಡುವೆನು.

(ಎಲ್ಲರೂ ಹೊರಟುಹೋಗುವರು.)

---

## ಐದನೆಯ ಅಂಕ.

### I

[ದೇವದತ್ತನ ಮನೆಯ ಪಡಸಾಲೆ. ಪ್ರಿಯಸೇನನೂ ಸೇವಕನೂ ಪ್ರವೇಶಿಸುವರು )

ಪ್ರಿಯಸೇನ:—ಆ ಮುದುಕಿಯೂ ಕಮಲಾವತಿಯೂ ಗಾಡಿಯಲ್ಲಿ ಕುಳಿತು ಪ್ರಯಾಣಮಾಡಿದುದನ್ನು ನೀನು ನೋಡಿದೆಯಾ ?

ಸೇವಕ:—ಅಹುದು, ಮಹಾಸ್ವಾಮಿ. ಅವರಿಬ್ಬರೂ ಒಂದುಗಾಡಿಯಲ್ಲಿ ಕುಳಿತಿದ್ದರು. ನಮ್ಮ ದುರ್ಮತಿಯು ಒಂದು ಕುದುರೆಯಮೇಲೆ ಹತ್ತಿ ಅವರ ಸಂಗಡಲೇ ಪ್ರಯಾಣಮಾಡುತ್ತಿದ್ದನು. ಅವರು ಇಷ್ಟು ಹೊತ್ತಿಗೆ ಪ್ರಾಯಶಃ ಮೂವತ್ತುಮೈಲಿ ಪ್ರಯಾಣಮಾಡಿರಬಹುದು.

ಪ್ರಿಯ:—ನನ್ನ ಆಶೆಯೆಲ್ಲವೂ ಕೊನೆಗಂಡಂತಾಯಿತು. ಮತ್ತೇನು ?

ಸೇವ:—ವಿಜಯಪಾಲರು ಬಂದಿರುವರು. ರಾಮವರ್ಮನ ಭ್ರಮೆಯನ್ನು ತಿಳಿದು ದೇವದತ್ತ ಮತ್ತು ವಿಜಯಪಾಲರಿಬ್ಬರೂ ಒಂದು ಘಂಟೆಯಿಂದಲೂ ನಗುತ್ತಿರುವರು. ಅವರೂ ಇತ್ತ ಬರುತ್ತಿರುವರು.

ಪ್ರಿಯ:—ನಾನು ಅವರ ಕಣ್ಣಿಗೆ ಕಾಣಿಸಿಕೊಳ್ಳಬಾರದು. ದುರ್ಮತಿಯು ತೋಟದಬಳಿ ಬಂದಿರೆಂದು ಹೇಳಿರುವನು. ಅವನಮಾತಿನಲ್ಲಿ ನಂಬುಗೆಯಿಲ್ಲದಿದ್ದರೂ ದುರಾಶೆಯು ನನ್ನನ್ನು ಕಾಡುತ್ತಿರುವುದು. ನಾನು ಅಲ್ಲಿಗೆ

ಹೋಗಿ ಅವನನ್ನು ಕಾದಿರುವೆನು. ಅವನು ಹೇಳಿದ ಕಾಲವು ಕಳೆಯಿತು.

(ಹೊರಡುವರು)

[ವಿಜಯಪಾಲನೂ ದೇವದತ್ತನೂ ಪ್ರವೇಶಿಸುವರು.]

ದೇವ:—ಹಾ! ಹಾ! ಅವನು ತನ್ನ ಮುಹದಾಜ್ಞೆಗಳನ್ನಿತ್ತ ಖಂಡಿತದ ರೀತಿಯನ್ನು ಏನೆಂದು ಹೇಳಲಿ ? ಹಾ ! ಹಾ !

ವಿಜಯ:— ನೀನು ಮುಂದುವರಿದು ಮಾತನಾಡಲು ಅವನು ಅವ ಕಾಶವನ್ನೇ ಕೊಡಲಿಲ್ಲವೊ? ಗುಂಪುಸೇರಿದಲ್ಲಿಯೇ ತನ್ನ ವಿಚಿತ್ರಸ್ವಭಾವವನ್ನು ವ್ಯಕ್ತಪಡಿಸಿದನೇನೊ ?

ದೇವ:—ನನ್ನನ್ನು ನೋಡಿದಕೂಡಲೆ ಸಾಧಾರಣ ಭೋಜನಶಾಲಾ ಧ್ಯಕ್ಷನೆಂದು ತಿಳಿದುಕೊಂಡನಂತೆ. ನನ್ನನ್ನು ನೋಡಿದರೆ ಹಾಗೆ ಕಾಣುವೆನೆ ?

ವಿಜ:—ಇಲ್ಲ. ಅವನು ನಿನ್ನನ್ನು ಭೋಜನಶಾಲಾಧ್ಯಕ್ಷನೆಂದು ತಪ್ಪುಮಾಡಬಹುದೇ ?

ದೇವ:—ಪಾಪ. ಅದೂ ನನಗೆ ಸಂತೋಷ. ನಮ್ಮಿಬ್ಬರಮನೆಗೂ ಬಾಂಧವ್ಯವು ನಡೆದು ಇಬ್ಬರ ಸ್ನೇಹವೂ ಮತ್ತಷ್ಟು ಹೆಚ್ಚುವುದೆಂದು ನನ್ನನಂಬಿಕೆ. ನನ್ನ ಪುತ್ರಿಯಾದ ನಿರ್ಮಲೆಯ ಆಸ್ತಿಯು ಅಲ್ಪವಾದರೂ....

ವಿಜ:—ಆಸ್ತಿಯು ಯಾರಿಗೆಬೇಕಾಗಿದೆ ? ಆ ಮಾತನ್ನು ನನ್ನೊಡನೆ ಹೇಳುವಿಯೇಕೆ ? ದೇವರು ನನ್ನ ಮಗನಿಗೆ ಸಮೃದ್ಧಿಯಾದ ಆಸ್ತಿಯನ್ನೂ ವಿದ್ಯೆಯನ್ನೂ ಕೊಟ್ಟಿರುವನು. ಅವನ ಸುಖಸಾಮ್ರಾಜ್ಯದ ಎಲ್ಲೆಯನ್ನು ಸೇರಲು, ಗುಣವತಿಯೂ ಸುಕುಮಾರಿಯೂ ಆದ ಕನ್ಯೆಯೊಬ್ಬಳು ಮಾತ್ರ ಆವಶ್ಯಕವಾಗಿದೆ. ನೀನು ಹೇಳುವಂತೆ ಅವರಿಗೆ ಪರಸ್ಪರ ಪ್ರೀತಿವಿಶ್ವಾಸ ಗಳಿದ್ದರೆ..............

ದೇವ:—ಇದ್ದಗೆ !! ನನ್ನ ಮಾತನ್ನು ನಂಬು. ಅವರು ಪ್ರಣಯ ಸಾಗರದಲ್ಲಿ ಮುಳುಗಿ ತೇಲಾಡುತ್ತಿರುವರು. ನಿರ್ಮಲೆಯು ನನ್ನೊಡನೆ ಅಂತ ರಂಗದಲ್ಲಿ ಹೇಳಿದುದಕ್ಕೆ ಇದೇ ಅರ್ಥವು.

ವಿಜ:—ಹುಡುಗಿಯರೂ, ಹುಡುಗರೂ, ಸ್ವಶಕ್ತಿಯನ್ನು ಹೊಗಳಿ ಕೊಳ್ಳುವುದು ವಾಡಿಕೆಯಲ್ಲವೆ ?

ದೇವ:—ಅವಳ ಕಯ್ಯನ್ನು ಅವನು ಹಿಡಿದುಕೊಂಡಿದ್ದನ್ನು ನಾನೇ ನೋಡಿದೆನು. ಇನ್ನೇನುಹೇಳಲಿ ? ಇದೋ, ರಾಮವರ್ಮನೇ ಬರುತ್ತಿರುವನು. ನಿನ್ನ 'ರೆ' ಗಳೆಲ್ಲಾ ಇನ್ನು ಕೊನೆಗಾಣುವುವು.

[ ರಾಮವರ್ಮನು ಬರುವನು.]

ರಾಮು:—ನನ್ನ ವಿಚಿತ್ರವಾದ ಅವಿಧೇಯತೆಯ ನಡತೆಗಾಗಿ ಮತ್ತೆ ಮತ್ತೆ ನಿಮ್ಮನ್ನು ಕ್ಷಮೆ ಬೇಡುವೆನು. ನನ್ನ ವರ್ತನವನ್ನೂ ಅಹಂಕಾರವನ್ನೂ ನೆನೆಸಿಕೊಂಡರೆ ನನಗೇ ನಾಚಿಕೆಯಾಗಿದೆ.

ದೇವ:—ಅದೇನು ಪ್ರಮಾದವಿಷಯ ? ಮರೆತುಬಿಡು. ಅದಕ್ಕೆ ಇಷ್ಟೊಂದು ಆಲೋಚನೆ ಮಾಡಲೇಕೆ? ನಿರ್ಮಲೆಯೊಡನೆ ಒಂದು ಘಳಿಗೆ ನಗುತ ವಿನೋದವಾಗಿದ್ದರೆ, ಎಲ್ಲವೂ ಮರೆತುಹೋಗುವುದು. ನಿರ್ಮಲೆಗೆ ನಿನ್ನಲ್ಲೂ, ನಿನಗೆ ನಿರ್ಮಲೆಯಲ್ಲೂ ಮತ್ತಷ್ಟು ಪ್ರೇಮವು ಹೆಚ್ಚಲೂ ಮಾರ್ಗವಾಗುವುದು.

ರಾಮು:—ಅವಳ ಮೆಚ್ಚಿಗೆಯೇ ನನಗೆ ಹೆಮ್ಮೆಯೆಂದು ತಿಳಿವೆನು.

ದೇವ :—'ಮೆಚ್ಚಿಗೆ' ! ಚಿಃ! ಅದು ಕೇವಲ ಸಣ್ಣ ಪದ. ನನ್ನ ಕಣ್ಣುಗಳನ್ನು ನಾನು ಒಪ್ಪುವುದಾದರೆ, ನಿಮ್ಮಿಬ್ಬರ ಸಂಬಂಧವೂ ಮೆಚ್ಚಿಗೆಯನ್ನು ದಾಟಿ ಬಹುದೂರ ಹೋಗಿರುವುದೆನ್ನಬಹುದು. ನಾನು ಹೇಳುವುದು ತಿಳಿಯಿತಷ್ಟೆ ?

ರಾಮು :—ಸತ್ಯವಾಗಿಯೂ ನನಗಂತಹ ಪುಣ್ಯವು ಪ್ರಾಪ್ತವಾಗಿಲ್ಲ.

ದೇವ :—ಸಾಕು, ಸಾಕು. ನನಗೂ ಇಂತಹ ಆಟಗಳು ಬರುವುವು. ಯಾವುದಕ್ಕೆ ಏನು ಅರ್ಥವೆಂಬುದನ್ನೂ—ಅರ್ಥಮಾಡುವುದನ್ನೂ—ನಾನು ಚನ್ನಾಗಿಬಲ್ಲೆನು. ನಿಮ್ಮಿಬ್ಬರ ನಡವಳಿಕೆಯನ್ನೂ ಚನ್ನಾಗಿ ನಾನೇ ನೋಡಿದೆನು. ಇನ್ನೂ ನಿಜವಲ್ಲವೊ ?

ರಾಮು :—ನಮ್ಮಿಬ್ಬರ ನಡತೆಯಲ್ಲಿ ಏನೂ ವಿಶೇಷ ವಿಷಯವಿಲ್ಲ. ನಿರ್ಮಲೆಯೊಡನೆ ನಾನು ಗಾಂಭೀರ್ಯ ಮರ್ಯಾದೆಗಳಿಂದ ಮಾತನಾಡಿದೆನು. ನನ್ನ ದುಷ್ವರ್ತನವನ್ನು ಮನೆಯವರೆಲ್ಲರಲ್ಲೂ ಒಂದೇ ರೀತಿಯಾಗಿ ಆಚರಿಸಿರುವೆನೆಂದು ತಿಳಿದಿರಬಹುದು. ಹಾಗೆ ಆಲೋಚಿಸಬಾರದು.

ದೇವ :—ದುಷ್ವರ್ತನವೆ! ನನ್ನ ಅಭಿಪ್ರಾಯವು ಆರೀತಿಯಾದುದಲ್ಲ. ದುಷ್ವರ್ತನವಲ್ಲ. ಸರಸವಾಡುವುದು ಹುಡುಗಿಯರ ಸ್ವಭಾವವು. ನಿರ್ಮಲೆಯು ನಿಜವಾಗಿಯೂ ನಿನ್ನ ಮೇಲೆ ಚಾಡಿಯನ್ನು ಹೇಳಿಲ್ಲ.

ರಾಮು :—ಅದಕ್ಕೆ ನಾನೂ ಅವಕಾಶವನ್ನು ಕೊಟ್ಟಿಲ್ಲ.

ದೇವ :—ವಿನಯವು ಒಂದು ಸದ್ಗುಣವೇ ಸರಿ! ಆದರೆ, ಈಗ ಇದು ಅತಿವಿನಯವಾಯಿತು. 'ಅತಿವಿನಯಂ .........' ನೀನು ಮರೆಮಾಚದೆ ಸತ್ಯವನ್ನೇ ಆಡಿದರೆ ನಿನ್ನ ತಂದೆಗೂ ನನಗೂ ಬಹಳ ಸಂತೋಷವಾಗುವುದು.

ರಾಮು :—ನನ್ನಾಣೆ! ದೇವರಾಣೆಗೂ ನಾನು ಏನೂ.........

ದೇವ :—ನಿರ್ಮಲೆಗೆ ನಿನ್ನಲ್ಲಿ ಅಸಹ್ಯವಿಲ್ಲ. ನೀನೂ ಅವಳನ್ನು ಮೆಚ್ಚುವೆಯಷ್ಟೆ?

ರಾಮು :—ಗ್ರಹಚಾರವೇಸರಿ. ದೇವರಾಣೆ, ನಾನು.........

ದೇವ :—ನಿಮ್ಮಿಬ್ಬರಿಗೂ ಈ ಕ್ಷಣವೇ ವಿವಾಹವು ನಡೆಯಬಾರದೇಕೆ?

ರಾಮು :—ನಾನು ಹೇಳುವುದನ್ನು ಕೇಳಬಾರದೇಕೆ?

ದೇವ :—ವಿಜಯಪಾಲನೆ, ನಿನಗೂ ಒಪ್ಪಿತವಷ್ಟೆ? ನನಗೆ ಮಹದಾನಂದವುಂಟಾಗಿದೆ. ನಾವು ಇನ್ನು ತಡಮಾಡಬಾರದು. 'ಶುಭಸ್ಯಶೀಘ್ರಂ .........' ಎಂದಿಲ್ಲವೆ?

ರಾಮು:—ನನ್ನ ಮಾತನ್ನು ಕೇಳುವುದೂ ಇಲ್ಲವೆ? ಭಗವಂತನಾಣೆಗೂ ನಿರ್ಮಲೆಯಮೇಲೆ ನನ್ನ ಪ್ರೇಮವಾಗಲಿ, ನನ್ನಲ್ಲಿ ಅವಳ ಪ್ರೀತಿಯಾಗಲಿ

ನೆಲೆಸಿರುವುದೆಂಬುದಕ್ಕೆ ಯಾವ ಆಧಾರವೂ ಇಲ್ಲವಾಗಿದೆ. ನಾವಿಬ್ಬರೂ ಒಂದೇ ಒಂದುಬಾರಿ ಒಬ್ಬರನ್ನೊಬ್ಬರು ನೋಡಿದ್ದೆವು. ಆಗಣ ನಮ್ಮ ಸಂಭಾಷಣೆಯು ಸ್ವಾರಸ್ಯವಿಲ್ಲದೆಯೂ ವಿನಯಪೂರ್ವಕವಾಗಿಯೂ ಲೋಕಮರ್ಯಾದಾನುಸಾರವಾಗಿಯೂ ಇದ್ದುದು. ಮತ್ತೇನು ವಿಶೇಷವೂ ನಡೆಯಲಿಲ್ಲ.

ದೇವ:— (ಸ್ವಗತಂ) ಲೋಕಮರ್ಯಾದಾನುಸಾರವಾದ ಇವನ ವಿನಯವನ್ನು ತಡೆಯಲಾಗುವುದಿಲ್ಲ.

ವಿಜ:—ನೀನು ಅಪಳಕಯ್ಯಿಡಿದು ನಿನ್ನ ವ್ಯಾಮೋಹವನ್ನು ಆವಾಗಲೂ ತೋರ್ಪಡಿಸಿಲ್ಲವೆ?

ರಾಮು:—ಸ್ವರ್ಗಸಾಕ್ಷಿಯಾಗಿಯೂ ಇಲ್ಲ. ನಿಮ್ಮಪ್ಪಣೆಯುಮೇರೆ ಇಲ್ಲಿಗೆಬಂದೆನು. ಒಂದುಬಾರಿ ಮಾತ್ರ ಆಕೆಯನ್ನು ಪ್ರೇಮವ್ಯಾಮೋಹಗಳಿಲ್ಲದೆಯೇ ನೋಡಿದೆನು. ಸ್ವಲ್ಪವೂ ವ್ಯಸನಪಡದೆ ಅವಳನ್ನು ಬಿಟ್ಟು ಬಂದೆನು. ನನ್ನ ವಿಧೇಯತೆಯ ವಿಷಯದಲ್ಲಿ ಇದಕ್ಕಿಂತಲೂ ಹೆಚ್ಚಾದ ನಿದರ್ಶನಗಳನ್ನು ಕೋರುವುದಿಲ್ಲವೆಂದು ನಂಬಿರುವೆನು. ಇಷ್ಟು ಅವಮಾನವನ್ನು ಅನುಭವಿಸಿರುವ ಈ ಮನೆಯನ್ನು ಈಗಲಾದರೂ ಬಿಡಲು ನಿಮ್ಮ ಆಕ್ಷೇಪಣೆಯೇನೂ ಇರಲಾರದೆಂದು ನಂಬಿರುವೆನು. (ಹೊರಡುವನು)

ವಿಜ:—ಅವನ ಭಾವವನ್ನು ನೋಡಿದರೆ, ಸಂಗತಿಗಳೆಲ್ಲವೂ ಆಶ್ಚರ್ಯವಾಗಿ ಕಾಣುವುವು.

ದೇವ:—ಅವನ ಧೈರ್ಯವನ್ನೂ ನಟನೆಯನ್ನೂ ನೋಡಿದರೆ ನನಗೂ ಆಶ್ಚರ್ಯವಾಗುವುದು.

ವಿಜ:—ಅವನು ಎಂದಿಗೂ ಸತ್ಯವಂತನು. ಅವನ ಪ್ರಮಾಣಿಕತೆಯ ವಿಷಯದಲ್ಲಿ ನಾನು ನನ್ನ ಪ್ರಾಣವನ್ನಾದರೂ ಪಣವಿಡುವೆನು.

ದೇವ:—ನಿರ್ಮಲೆಯು ಇತ್ತ ಬರುತ್ತಿರುವಳು. ಅವಳ ಪ್ರಮಾಣಿಕತೆಯ ವಿಷಯದಲ್ಲಿ ನನ್ನ ಪ್ರಾಣವನ್ನು ನಾನೂ ಧೈರ್ಯವಾಗಿ ಪಣವಿಡುವೆನು.

(ನಿರ್ಮಲೆಯು ಬರುವಳು.)

ದೇವ:—ನಿರ್ಮಲೆ, ನನ್ನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡು. ಮುಚ್ಚುಮರೆಮಾಡಬೇಡ. ಸುಳ್ಳಾಡದಿರು. ರಾಮವರ್ಮನು ನಿನ್ನಲ್ಲಿ ವ್ಯಾಮೋಹವನ್ನೂ ಪ್ರೀತಿಯನ್ನೂ ಯಾವ ರೀತಿಯಲ್ಲಿಯಾದರೂ ಪ್ರಕಾಶ ಪಡಿಸಿರುವನೊ ?

ನಿರ್ಮ:—ಈ ಪ್ರಶ್ನೆಗಳನ್ನು ಒಮ್ಮೆಂದೊಮ್ಮೆ ಕೇಳುವಿರಿ. ಅಪೇಕ್ಷಣೀಯವಾದ ಪ್ರಶ್ನೆಗೆ ಉತ್ತರವನ್ನು ಕೊಡುವುದು ಯಾರಿಗಾದರೂ ಕಷ್ಟವಲ್ಲವೆ ? ಸತ್ಯವನ್ನಾಡಬೇಕೆಂದು ಪ್ರಾರ್ಥಿಸುವಿರಾದುದರಿಂದ ರಾಮವರ್ಮರು ಪ್ರೀತಿಯನ್ನು ಪ್ರಕಾಶಪಡಿಸಿರುವರೆಂದು ಒಪ್ಪಿಕೊಳ್ಳುವೆನು.

ದೇವ:—(ವಿಜಯಪಾಲನನ್ನು ನೋಡಿ) ನೋಡಿದಿಯೊ ?

ವಿಜಯ:—ಒಂದಾವರ್ತಿಗಿಂತಲೂ ಹೆಚ್ಚಾಗಿ ನಿಮ್ಮಿಬ್ಬರಿಗೂ ಭೇಟಿಯಾಗಿಲ್ಲವೊ ?

ನಿರ್ಮ:—ಅನೇಕಾವರ್ತಿ ಆಗಿದೆ.

ದೇವ:—(ವಿಜಯಪಾಲನನ್ನು ಕುರಿತು) ಕೇಳಿದಿಯೊ ?

ವಿಜ:—ರಾಮವರ್ಮನು ವ್ಯಾಮೋಹವನ್ನು ಹೊರಪಡಿಸಿರುವನೊ ? ಒಪ್ಪಿಕೊಂಡನೆಂಬುದನ್ನು ಸೂಚಿಸಿದನೊ ?

ನಿರ್ಮ:—ಎಂದೆಂದಿಗೂ ಚ್ಯುತಿಯಿಲ್ಲದ ವ್ಯಾಮೋಹವನ್ನು ಹೊರಪಡಿಸಿರುವರು. ನಾನು ನಿಜವನ್ನೇ ಹೇಳುತಿರುವೆನು.

ವಿಜ:—ಪ್ರಣಯದ ಸಂಭಾಷಣೆಯೇನಾದರೂ ನಡೆಯಿತೊ ?

ನಿರ್ಮ:—ವಿಶೇಷವಾಗಿಯೇ ನಡೆಯಿತು.

ವಿಜ:—ಆಶ್ಚರ್ಯವೇಸರಿ ! ಇದಷ್ಟನ್ನೂ ಲೋಕಮರ್ಯಾದಾನುಸಾರವಾಗಿಯೇ ಹೇಳಿಕೊಂಡನೊ ?

ನಿರ್ಮ:—ಆಹಾ ! ನಿಸ್ಸಂಶಯವಾಗಿಯೂ ಹಾಗೆಯೇ ಸರಿ.

ದೇವ:—ಮಿತ್ರನೆ ! ನಿನಗೆ ಸಮಾಧಾನವಾಯಿತೊ ?

ವಿಜ:—ಮಾತನಾಡುವಾಗ ಅವನ ನಡತೆಯು ಹೇಗಿತ್ತು ?

ನಿರ್ಮ:—ಪ್ರಣಯಿಗಳಂತೆ. ನನ್ನ ರೂಪನ್ನು ಅವರು ಹೊಗಳಿದರು. ನಾನು ಸರ್ವಜ್ಞಳೆಂದೂ ತಾವು ಕೇವಲ ಅಲ್ಪಜ್ಞರೆಂದೂ ಹೇಳಿದರು. ತಮ್ಮ ವ್ಯಾಮೋಹವನ್ನು ಪ್ರಕಾಶಪಡಿಸಿ, ಸಂಕಟದಿಂದ ಮಾತನಾಡುತ್ತ ಉನ್ಮತ್ತರಂತೆ ವರ್ತಿಸಿದರು.

ವಿಜ:—ಈಗ ನನಗೆ ಎಲ್ಲವೂ ಪೂರ್ತಿಯಾಗಿ ತಿಳಿಯಿತು. ರಾಮವರ್ಮನು ಸ್ತ್ರೀಸಮೂಹದಲ್ಲಿ ವಿನಯವಂತನಾಗಿಯೂ ಭಯಗ್ರಸ್ತನಾಗಿಯೂ ಇರುವನೆಂಬುದನ್ನು ಬಲ್ಲೆನು. ಈ ಉನ್ಮಾದಾವಸ್ಥೆಯ ನಡತೆಗಳು ಅವನ ಸ್ವಭಾವಕ್ಕೆ ಬಹುದೂರವಾದುವು. ಇವೊಂದನ್ನೂ ನಾನು ನಂಬಲಾರೆನು.

ನಿರ್ಮ :—ನಾನು ನಿಮ್ಮ ಕಣ್ಣೆದುರಿಗೇ ನನ್ನ ಪ್ರಣಯದ ಪ್ರಮಾಣೀಕತೆಯನ್ನು ನಿದರ್ಶನಕ್ಕೆ ತಾರದಿದ್ದರೆ, ನನ್ನ ಮಾತೇಕೆ ? ಇನ್ನೊಂದು ಗಳಿಗೆ ಬಿಟ್ಟು, ನೀವಿಬ್ಬರೂ ಇಲ್ಲಿಯೇ ಇರಿ. ರಾಮವರ್ಮರೇ ವ್ಯಾಮೋಹವನ್ನು ಪ್ರಕಾಶಪಡಿಸುವುದನ್ನು ನೀವೇ ನೋಡುವಿರಿ.

ವಿಜ:—ಸಮ್ಮತ. ನಿನ್ನ ವರ್ಣನೆಯಂತೆ ಅವನು ಇರುವುದಾದರೆ, ಇಂದಿಗೇ ನನ್ನ ಪುತ್ರಸುಖವು ಕೊನೆಗಾಣುವುದರಲ್ಲಿ ಸಂಶಯವಿಲ್ಲ.

(ಹೊರಡುವನು)

ನಿರ್ಮ:—(ಸ್ವಗತಂ) ನನ್ನ ವರ್ಣನೆಯಂತೆ ಅವನು ಇರದಿದ್ದರೆ, ನನ್ನ ಸುಖಕ್ಕೆ ಮೊದಲಾಗುವುದಿಲ್ಲವಾದಕಾರಣ, ಅವನು ಹಾಗೆಯೇ ಇರಲಿ.

(ಹೊರಟುಹೋಗುವರು)

[ಮನೆಯ ಹೊರಭಾಗದ ವಿಶಾಲವಾದ ತೋಟ. ಪ್ರಿಯಸೇನನು ಬರುವನು]

ಪ್ರಿಯ:—ನಾನೆಂತಹ ಮೂಢನು ! ಆ ಪೋಲಿಯ ಮಾತನ್ನು ನಂಬಿ ಇಲ್ಲಿಗೆ ಬರಬಹುದೆ ? ನನ್ನನ್ನು ಕಾಡಿಸುವುದೂ ಅವನಿಗೊಂದು ವಿಘವಾದ ವಿನೋದವಾಗಿರಬಹುದು. ಗೊತ್ತಾದಕಾಲದಲ್ಲಿ ಕೆಲಸಮಾಡಲು ಅವನಿಗೆಂತು ಬರುವುದು ? ನಾನು ನಿಜವಾಗಿಯೂ ಇನ್ನು ಕಾದಿರಲಾರೆನು. ಇದೇನು ?

ಅವನೇ ಬಂದನು. ಪ್ರಾಯಶಃ, ಕಮಲೆಯ ವರ್ತಮಾನವನ್ನೇನಾದರೂ ತಂದಿರಬಹುದು.

(ಮೈಯೆಲ್ಲಾ ಕೆಸರುಮಾಡಿಕೊಂಡು ದುರ್ಮತಿಯು ಬರುವನು)

ಪ್ರಿಯ:—ಪ್ರಿಯಮಿತ್ರನೆ, ನೀನು ಸತ್ಯವಂತನು. ವಾಕ್ಯಪರಿಪಾಲಕನು. ಸ್ನೇಹಧರ್ಮಕ್ಕೆ ಇದೇ ಚಿಹ್ನೆಯಲ್ಲವೆ?

ದುರ್ಮ:—ಓಹೋ, ನಾನೇ ನಿನ್ನ ಮಿತ್ರನೊ? ಎಲ್ಲವೂ ನನಗೆ ಗೊತ್ತುಂಟು. ಕೆಲಸಗಳಾದರೆ, ನನ್ನಂತಹ ಮಿತ್ರನು ಜಗತ್ತಿನಲ್ಲೇ ಬೇರೊಬ್ಬನಿಲ್ಲವೆಂದು ಒಪ್ಪಿಕೊಳ್ಳುವಿ. ರಾತ್ರಿಯ ಕಾಲದಲ್ಲಿ ಕುದುರೆಯ ಸವಾರಿಯನ್ನು ಮಾಡುವುದು ಸುಖದ ಕೆಲಸವಲ್ಲ. ಗಾಡಿಯ ಕುಲುಕಾಟಕ್ಕಿಂತಲೂ ಇದರ ವ್ಯಥೆಯು ಹೆಚ್ಚಾದುದು. ಆ ಗೋಳು ನಿನಗೆ ಗೊತ್ತೆ?

ಪ್ರಿಯ:—ಆದಿರಲಿ. ನಿನ್ನ ಜತೆಯವರೆಲ್ಲಿ? ಸುಖವಾಗಿರುವರಷ್ಟೆ? ಅವರನ್ನು ಮನೆಗೆ ಬಿಟ್ಟು ಬಂದೆಯೊ?

ದುರ್ಮ:—ಸರಿ, ಸರಿ. ಅದಿರಲಿ. ಸ್ವಲ್ಪ ತಡೆ. ಎರಡು ಘಂಟೆಗಳ ಕಾಲದಲ್ಲಿ ಇಪ್ಪತ್ತೈದುಮೈಲಿ ಪ್ರಯಾಣವು. ಕಡಮೆಯ ಸವಾರಿಯೊ? ಕುದುರೆಗಳ ಬಾಯಿನಲ್ಲಿ ನೊರೆಯು ಹರಿಯುತ್ತಲಿದೆ. ನರಿಯ ಬೇಟೆಗಾಗಿ ನಲ್ವತ್ತು ಮೈಲಿಯಾದರೂ ನಿರಾಯಾಸವಾಗಿ ಸವಾರಿಮಾಡಬಹುದು. ಈ ಹಾಳು ಹೆಂಗಸರ ಜತೆಯಲ್ಲಿ ಹತ್ತೇ ಮೈಲಿ ಪ್ರಯಾಣಮಾಡಿದರೆ ಜೀವವೇ ಹೋದಂತಾಗುವುದು.

ಪ್ರಿಯ:—ನಿಜ. ಹೆಂಗಸರನ್ನು ಎಲ್ಲಿ ಬಿಟ್ಟು ಬಂದಿರುವೆ? ನಾನು ಆತುರದಿಂದ ಸಾಯುತ್ತಿರುವೆನು. ಬೇಗ ಹೇಳು.

ದುರ್ಮ:—ಬಿಡುವುದೆ? ಎಲ್ಲಿಗೆ? ಅವರು ಮೊದಲಿದ್ದಕಡೆಯೇ ಅವರನ್ನು ಬಿಟ್ಟಿರುವೆನು.

ಪ್ರಿಯ:—ಇದೊಂದು ಒಗಟೆಯಾಯಿತು. ಮನೆಯಲ್ಲೆ?

ದುರ್ಮ:—ಅಲ್ಲ. ಎಲ್ಲಿ? ಮತ್ತೊಂದು ಒಗಟೆಗೆ ಉತ್ತರವನ್ನು ಹೇಳು.

ಮನೆಯ ಸುತ್ತಲೂ ಗಿರಿಗಿರಿತಿರುಗಿದರೂ ಮನೆಯನ್ನು ಸೇರದಿರುವುದಾವುದು?

ಪ್ರಿಯ:—ಅದೇನು ? ನನಗೆ ತಿಳಿಯದು.

ದುರ್ಮ :—ಹಾಗಾದರೆ ಹೇಳುವೆನು. ಕೇಳು. ಇಲ್ಲಿಂದ ಐದು ಮೈಲಿ ಸುತ್ತಳತೆಯಲ್ಲಿರುವ ಕೊಳ, ಬೊರಜು, ಕುಂಟೆ, ಬೇಲಿ, ತೋಟಗಳೆಲ್ಲವನ್ನೂ ಅವರಿಗೆ ಚೆನ್ನಾಗಿ ತೋರಿಸಿ ಮುಂದಟ್ಟುಮಾಡಿಕೊಟ್ಟೆನು.

ಪ್ರಿಯ:—ಓಹೋ, ತಿಳಿಯಿತು. ತೋಟದ ಸುತ್ತಲೂ ತಿರುಗಿಸಿಕೊಂಡು ಬಂದೆಯೊ? ಅವರು ಊರುಬಿಟ್ಟು ಮುಂದಕ್ಕೆ ಹೋಗುತಲಿರುವಂತೆ ತಿಳಿದುಕೊಂಡಿದ್ದರೇನೊ ? ನೀನು ಊರುಸುತ್ತಲೂ, ತಿರುಗಿಸಿ, ತಿರುಗಿಸಿ, ಪ್ರದಕ್ಷಿಣೆ ಮಾಡಿಸಿ, ಮರಳಿ ಮನೆಗೆ ಕರೆತಂದೆಯೊ?

ದುರ್ಮ:—ಪ್ರಯಾಣದ ಸೊಗಸನ್ನು ಹೇಳುವೆನು. ಕೇಳು. ಮೊದಲು ಅವರನ್ನು ಹೂವಿನ ಓಣಿಗೆ ಕರೆದುಕೊಂಡು ಹೋದೆನು. ಅಲ್ಲಿ ಗಾಡಿಯ ಚಕ್ರವು ಕೆಸರಿನಲ್ಲಿ ಸಿಕ್ಕಿಕೊಂಡಿತು. ಆಮೇಲೆ ಆ ತಲೆಕಾಮನಗುಡ್ಡದ ಮೇಲೆ ಗಾಡಿಯನ್ನು ಓಡಿಸಿ, ಅವರ ಮೈಯನ್ನೆಲ್ಲಾ ಹುಣ್ಣು ಹುಣ್ಣು ಮಾಡಿಸಿದೆನು. ಅನಂತರ ಮೇಲಿನಿಂದ ಕೆಳಕ್ಕೆ ಕರೆತರುವಾಗ ಗಿಡಕ್ಕೆ ಗಾಡಿಯನ್ನು ಬಡಿಸಿ, ಕೊನೆಗೆ ತೋಟದ ಒಳಿಯಲ್ಲಿರುವ ಕೊಳದಬಳಿಯಲ್ಲಿ ಅವರನ್ನು ಸೌಖ್ಯವಾಗಿ ಕುಳ್ಳಿರಿಸಿ ಇಲ್ಲಿಗೆ ಬಂದೆನು.

ಪ್ರಿಯ:—ಏನೂ ಅನಾಹುತಗಳು ಸಂಭವಿಸಿಲ್ಲವಷ್ಟೆ ?

ದುರ್ಮ:—ಇಲ್ಲ, ಇಲ್ಲ. ನಮ್ಮತ್ತೆಯು ಭಯದಿಂದ ಹುಚ್ಚು ಹಿಡಿದವಳಂತೆ ಇರುವಳು. ನಲ್ವತ್ತುಮೈಲಿ ದೂರಪ್ರಯಾಣಮಾಡಿರುವುದಾಗಿ ತಿಳಿದಿರುವುದರಿಂದ ಅವಳು ಮುಂದಕ್ಕೆ ಹೆಜ್ಜೆ ಇಡಲಾರಳು. ನಿನಗಾಗಿ ಸಿದ್ಧಪಡಿಸಿದ್ದ ಕುದುರೆಯು ಈಗಲೂ ಸಿದ್ಧವಾಗಿದೆ. ಕಮಲೆಯನ್ನು ಎತ್ತಿಕೊಂಡು ಓಡು,ಓಡು. ನಿನ್ನನ್ನು ಅಟ್ಟಿಕೊಂಡು ಯಾವ ಪ್ರಾಣಿಯೂ ಈಗ ಬರುವಂತಿಲ್ಲ.

ಪ್ರಿಯ:—ಪ್ರಿಯಮಿತ್ರನೆ, ನಿನ್ನ ಉಪಕಾರಕ್ಕಾಗಿ ನಾನೆಷ್ಟು ಕೃತಜ್ಞನಾಗಿದ್ದರೂ ತೀರದು.

ದುರ್ಮ:—ಓಹೋ! ಈಗ 'ಪ್ರಿಯಮಿತ್ರ,' ಉಪಕಾರ. ಕೃತಜ್ಞತೆ! ಒಂದು ಗಳಿಗೆಗೆ ಮುಂಚೆ, "ಮುತ್ಕಾಳ! ನಾಯಿ!! ಕೃತಘ್ನ!! ಹೊಟ್ಟೆಯನ್ನು ತಿವಿದು ಕೊಂದುಹಾಕುತ್ತೇನೆ!" ಎನ್ನುತಿದ್ದಿಯಲ್ಲಾ? ನಿಮ್ಮ ಜಗಳದ ಹದವು ನನಗೆ ಒಗ್ಗದು. ಆದರೆ, ನೀನು ಬೆದರಿಸಿದಂತೆ ನನ್ನ ಹೊಟ್ಟೆಯನ್ನು ತಿವಿದೇ ಹಾಕಿ, ನಾನು ಸತ್ತೇಹೋಗಿದ್ದರೆ, ನೀನು ಗಲ್ಲಿಗೆ ಏರಿಸುವವನಿಗೆ 'ಸಲಾಂ' ಮಾಡಬೇಕಾಗಿತ್ತಲ್ಲವೊ?

ಪ್ರಿಯ:—ಮಿತ್ರನೆ, ನಿನ್ನ ಆಕ್ಷೇಪಣೆಗಳೆಲ್ಲವೂ ಸರಿಯಾಗಿಯೇ ಇವೆ. ನಾನು ಮೊದಲು ಕಮಲೆಯ ಕಷ್ಟವನ್ನು ನೀಗಿಸಬೇಕು. ಮುದುಕಿಯನ್ನು ನೀನು ಕಾಪಾಡಿಕೊಂಡರೆ, ಹುಡುಗಿಯನ್ನು ನಾನು ನೋಡಿಕೊಳ್ಳುವೆನು. (ಹೊರಡುವನು)

ದುರ್ಮ:—ಆಗಲಿ, ಹೆದರಬೇಡ. ಅದೊ, ನಮ್ಮತ್ತೆಯು ಬರುತ್ತಿರುವಳು. ಓಡು. ಇದೇ. ಸಮಯ. ಕೊಳದ ಕೆಸರು ಮೆತ್ತಿಕೊಂಡು ಬರುತ್ತಿರುವ ಅವಳು ಎಷ್ಟು ರಮ್ಯವಾಗಿರುವಳು! ನಿನಗೆ ಇದೇ ಸಮಯ. ಹೊರಡು! ಕಮಲೆಯನ್ನು ಎತ್ತಿಕೊಂಡು ಓಡು.

[ಚಂಡಿಯು ಬರುವಳು]

ಚಂಡಿ:—ದುರ್ಮತಿ, ನಾನು ಸತ್ತೆನು. ಮೈ ಮೂಳೆಗಳೆಲ್ಲವೂ ಮುರಿದು ಹೋಗಿವೆ. ಪ್ರಾಣವು ಮಾತ್ರ ಇನ್ನೂ ಹೋಗಿಲ್ಲ. ಉಳಿದ ದುರವಸ್ಥೆಗಳೆಲ್ಲವೂ ಪ್ರಾಪ್ತವಾದುವು. ನಾನು ಇನ್ನು ಬದುಕಲಾರೆ. ಕೊನೆಯಸಲ ಬೇಲಿಯ ಮೇಲೆ ಬಿದ್ದಾಗ ನನ್ನ ಪರಿಣಾಮವು ಆಗಿಹೋಗಬೇಕಾಗಿತ್ತು.

ದುರ್ಮ:—ಅತ್ತೆ, ನಾನೇನುಮಾಡಲಿ? ಅದೆಲ್ಲವೂ ನಿನ್ನ ಕಾರ್ಯದ ಫಲ. ಅರಿಯದ ದಾರಿಯಲ್ಲಿ ರಾತ್ರಿಯೆಲ್ಲಾ ಪ್ರಯಾಣಮಾಡಬೇಕೆಂದರೆ ಹೇಗೆ ಸಾಧ್ಯ!

ಚಂಡಿ:—ನಾನೇಕೆ ಅವಳೊಡನೆ ಬಂದೆನು? ನಿನ್ನೊಡನೆಯೇ ಕಳಿಸಿ ನಾನು ಮನೆಯಲ್ಲಿಯೇ ಇದ್ದಿದ್ದರೆ ಚೆನ್ನಾಗಿತ್ತು. ಈ ಅನಾಹುತಗಳೊಂದೂ

ಸಂಭವಿಸುತ್ತಿರಲಿಲ್ಲ. ಕೆಸರಿನಲ್ಲಿ ಮುಳುಗಿ, ಬಚ್ಚಲಿನಲ್ಲಿ ಬಿದ್ದು, ಮೈಕೈ ತಲೆಗಳನ್ನು ಒಡೆದುಕೊಂಡು, ಕೊನೆಗೆ ದಾರಿಯೂ ತಪ್ಪಬೇಕೆ ? ಅಯ್ಯೋ! ಇದೆಲ್ಲವೂ ಹಣೆಯ ಬರಹವೇ ಸರಿ. ಈಗ ನಾವೆಲ್ಲಿರುವೆವು ?

ದುರ್ಮ:—ಪುನೆಯಿಂದ ಸುಮಾರು ನಲ್ವತ್ತು ಮೈಲಿ ದೂರದಲ್ಲಿರಬಹುದು. ಇದೇಯೇ ತಲೇ ಕಾಮನದಿಣ್ಣೆಯಂತೆ ಕಾಣುತ್ತೆ.

ಚಂಡಿ:—ಅಯ್ಯೋ ! ಅಯ್ಯೋ !! ಕಳ್ಳರಿಗೆ ಇದು ಬಹು ಪ್ರಖ್ಯಾತವಾದ ಸ್ಥಳ. ಇಷ್ಟುಸಂಭ್ರಮದ ಜತೆಗೆ ದರೋಡೆಯೂ ಆಗಿಬಿಟ್ಟರೆ, ನಮ್ಮ ಪುಣ್ಯಕ್ಕೆ ಎಣೆಯೇಇಲ್ಲ.

ದುರ್ಮ:—ಅತ್ತೆ, ಹೆದರಬೇಡ. ಇಲ್ಲಿದ್ದ ಐದುಮಂದಿಯಲ್ಲಿ ಇಬ್ಬರನ್ನು ಗಲ್ಲಿಗೆ ಹಾಕಿದರು. ಉಳಿದ ಮೂವರ ಕೈಗೆ ಪ್ರಾಯಶಃ ನಾವು ಸಿಕ್ಕಿಬೀಳಲಾರೆವು. ಹೆದರಬೇಡ. ಅತ್ತೇ, ಧೈರ್ಯವಾಗಿರು. (ಅತ್ತನೋಡಿ) ಅದಾರು ? ನಮ್ಮಹಿಂದೆ ಕುದುರೆಯನ್ನು ಓಡಿಸಿಕೊಂಡು ಬರುತ್ತಿರುವರು. ಓಹೋ ! ಏನೂಇಲ್ಲ. ಅದೊಂದು ಮರ ಹೆದರಬೇಡ.

ಚಂಡಿ:—ಹೆದರಿಕೆಯಿಂದ ನನ್ನ ಪ್ರಾಣವೇ ಹಾರಿಹೋಗುವುದು.

ದುರ್ಮ:—ಅತ್ತೆ, ಅತ್ತ ನೋಡು. ಆ ಪೊದೆಯ ಹಿಂದೆ ಏನೋ ಅಲ್ಲಾಡುವುದು. ಅದೇನು ಕರೀಟೋಪಿಯೊ ? ನಿನಗೆ ಚೆನ್ನಾಗಿ ಕಾಣುವುದೆ ?

ಚಂಡಿ:—(ಅತ್ತನೋಡಿ) ಅಯ್ಯೋ ! ಅಯ್ಯೋ !! ಇನ್ನೇನುಗತಿ ?

ದುರ್ಮ:—ಏನೂ ಹೆದರಿಕೆಯಿಲ್ಲ. ಅದೊಂದು ಹಸು. ಅತ್ತೆ, ಹೆದರಬೇಡ. ಧೈರ್ಯವಾಗಿರು.

ಚಂಡಿ:—ಅಯ್ಯೋ ! ಅಲ್ಲಿ ನೋಡೊ ! ಯಾರೋ ಬರುವಂತಿದೆ ? ಅಯ್ಯೋ ! ಅವನು ನಮ್ಮನ್ನು ನೋಡಿದರೆ, ನಮ್ಮ ಅವತಾರವು ಪೂರೈಸಿತೆಂದೇ ಹೇಳಬೇಕು.

ದುರ್ಮ:—(ಸ್ವಗತಂ) ನನ್ನ ಮಾವನಾದ ದೇವದತ್ತನು, ಎಂದಿನಂತೆ ರಾತ್ರಿಯ ಕಾಲದಲ್ಲಿ ಸುತ್ತಾಡಲು ಇತ್ತ ಬರುತ್ತಿರುವನು. (ಪ್ರಕಾಶಂ) ಅತ್ತೆ,

ನನ್ನ ತೋಳಿನಷ್ಟು ಉದ್ದವಿರುವ ಸಣ್ಣ ತುಪಾಕಿಯನ್ನು ಹಿಡಿದುಕೊಂಡು ಅದಾರೋ ದರೋಡೆಕೋರನು ಬರುತ್ತಿರುವನು. ಅವನನ್ನು ನೋಡಿದರೆ ನನಗೆ ನಡುಕವು ಬರುತ್ತಿರುವುದು. ಅಯ್ಯೋ! ಅಪಶ್ಯ ಪುರುಷನು. ದೃಢಕಾಯನು.

ಚಂಡಿ:—ದೇವರೆ, ಬದುಕಿಸು. ಬದುಕಿಸು. ಇನ್ನೇನುಗತಿ, ನಮ್ಮ ಕಡೆಯೇ ಬರುತ್ತಿರುವನಲ್ಲಾ? ಅಯ್ಯೋ! ದೇವರೇ!! ಅಯ್ಯೋ—........

ದುರ್ಮ:—ಅತ್ತೆ, ನೀನು ಆ ಪೊದರಿನಲ್ಲಿ ಅಡಗಿಕೊ. ನಾನು ಅವನನ್ನು ನೋಡಿಕೊಳ್ಳುವೆನು. ಕೇಡು ಸಂಭವಿಸುವ ಸಮಯವು ಬಂದರೆ, ಕೆಮ್ಮಿ, ಹುಂ, ಹುಂ, ಎನ್ನುವೆನು. ನಾನು ಕೆಮ್ಮಿದರೆ ನೀನು ಚನ್ನಾಗಿ ಪೊದರಿನಲ್ಲಿ ಅಡಗಿಕೊ.

(ಚಂಡಿಯು ಒಂದು ಪೊದರಿನಲ್ಲಿ ಅಡಗಿಕೊಳ್ಳಲು ಹೋಗುವಳು.)

[ದೇವದತ್ತನು ಪ್ರವೇಶಿಸುವನು.]

ದೇವ:—(ಸ್ವಗತಂ) ನನಗೆ ಭ್ರಾಂತಿಯಲ್ಲ. ಯಾರೋ ಭಯಪೀಡಿತರಾಗಿ ಸಾಹಾಯ್ಯವನ್ನು ಕೋರುವಂತೆ ತೋರುವುದು. (ಪ್ರಕಾಶಂ) ದುರ್ಮತಿ. ನೀನೊ? ಇಷ್ಟು ಬೇಗ ಹಿಂದಿರುಗಿ ಬರುವಿಯೆಂದು ನಿರೀಕ್ಷಿಸಿರಲಿಲ್ಲ. ನಿಮ್ಮತ್ತೆಯೂ ಕಮಲೆಯೂ ಕ್ಷೇಮವಾಗಿ ಊರನ್ನು ಸೇರಿದರೊ?

ದುರ್ಮ:—ಓಹೋ! ಸೇರಿದರು. ಹುಂ!

ಚಂಡಿ:—(ಹಿಂಭಾಗದಲ್ಲಿ) ದೇವರೇ! ಕಾಪಾಡು! ಕಾಪಾಡು!! ಕಾಪಾಡು!!! ದೇವರೇ!! ಅಯ್ಯೋ!

ದೇವ:—ಮೂರು ಘಂಟೆಗಳ ಕಾಲದಲ್ಲಿ ೪೦ ಮೈಲಿ ಪ್ರಯಾಣ! ಅಸಾಧ್ಯವೇ ಸರಿ!! ದುರ್ಮತಿ! ಮತ್ತೇನು ವಿಶೇಷ ವಿಷಯ?

ದುರ್ಮ:—ಬಲವಾದ ಕುದುರೆಗಳು. ಮನೋವೇಗಕ್ಕಿಂತ ವೇಗವಾಗಿ ಹೋಗಬಲ್ಲವು. ಸಾಲದುದಕ್ಕೆ ಬೇಗ ಹೋಗಬೇಕೆಂಬ ಕುತೂಹಲವೂ ಇದ್ದರೆ, ಪ್ರಯಾಣವು ಜಾಗ್ರತೆಯಾಗಿಯೇ ಮುಗಿಯುವುದಲ್ಲವೆ?

ಚಂಡಿ:--(ಹಿಂಭಾಗದಲ್ಲಿ) ಅಯ್ಯೋ! ಅವನು ದುರ್ಮತಿಗೆ ಅಪಾಯುವನ್ನುಂಟುಮಾಡದಿರುವನೆ ? ಅಯ್ಯೋ ! ಅಯ್ಯೋ !!

ದೇವ:—ಇಲ್ಲಿ ಯಾರೋ ಮಾತನಾಡುವಂತೆ ಚನ್ನಾಗಿ ಕೇಳಿಸಿತು. ಅವರಾರು ?

ದುರ್ಮ:—ಯಾರೂಇಲ್ಲ. ಇರುವವನು ನಾನೊಬ್ಬನೇ. ಮೂರು ಘಂಟೆಗೆ ನಲವತ್ತುಮೈಲಿ, ಬಹುವೇಗವೆಂದು ಅನ್ನುಕೊಳ್ಳುತಿದ್ದೆನು. ಹುಂ! ನಿಶ್ಚಯವಾಗಿಯೂ ನಾನೇ ! ಹೂಂ! ರಾತ್ರಿಯೆಲ್ಲಾ ಮಂಜುಗಾಳಿಯಲ್ಲಿ ತಿರುಗಿ ಸ್ವಲ್ಪ ನೆಗಡಿಯಾಗಿದೆ. ಒಳಗೆ ಹೋಗುವ. ಹೂಂ ! ಹೂಂ!!

ದೇವ:—ನೀನೇ ಪ್ರಶ್ನೆಮಾಡಿಕೊಂಡು ನೀನೇ ಉತ್ತರವನ್ನು ಹೇಳಿಕೊಳ್ಳುತಿದ್ದೆಯೊ ? ನನಗೆ ಇಬ್ಬರಧ್ವನಿಯು ಚೆನ್ನಾಗಿ ಕೇಳಿಬಂತು. (ಗಟ್ಟಿಯಾಗಿ) ಇನ್ನೊಬ್ಬರನ್ನು ತೋರುವಿಯೊ ? ಇಲ್ಲವೊ ? ನಾನು ಕಂಡುಹಿಡಿದೇಹಿಡಿಯುವೆನು.

ಚಂಡಿ:—(ಹಿಂಭಾಗದಲ್ಲೇ) ನನ್ನನ್ನು ಹುಡುಕಿಕೊಂಡು ಬರುತ್ತಿರುವನು. ಅಯ್ಯೋ ! ಅಯ್ಯೋ!!

ದುರ್ಮ:—ನಾನು ನಿಜವನ್ನೇ ಹೇಳಿದರೂ, ನೀನು ಹುಡುಕಲೇಬೇಕೆ? ಹುಂ! ದೇವರಾಣೆ! ಸತ್ಯವನ್ನೇ ಹೇಳುವೆನು. ಹೂಂ ! ನಿಧಾನಿಸು. ಎಲ್ಲವನ್ನೂ ಹೇಳುವೆನು. ಹೂಂ ! ಹೂಂ!! (ದೇವದತ್ತನು ಮುಂದುವರಿವನು. ಅವನನ್ನು ದುರ್ಮತಿಯು ತಡೆಯುವನು)

ದೇವ:—ನನ್ನನ್ನು ತಡೆಯಬೇಡ. ನಾನು ನೋಡಲೇಬೇಕು. ನಿನ್ನ ಮಾತನ್ನು ನಾನು ನಂಬುವುದು ನಿರರ್ಥಕವು. (ಅವನನ್ನು ತಳ್ಳುವನು)

ಚಂಡಿ:—(ಓಡಿಬಂದು) ದೇವರೇ ! ಅಯ್ಯೋ ! ನನ್ನ ಅಳಿಯ ಮುದ್ದು ದುರ್ಮತಿಯನ್ನು ಕೊಲ್ಲಬೇಡಿ. ಮಹಾಶಯರೆ ! ಧರ್ಮಿಷ್ಠರೆ !! ನಿಮ್ಮ ಅಗ್ರಹವನ್ನು ನನ್ನ ಮೇಲೆ ತೋರಿಸಿ. ಇಷ್ಟವಿದ್ದರೆ ನನ್ನ ಪ್ರಾಣ, ಧನಗಳನ್ನು ತೆಗೆದುಕೊಳ್ಳಿ ! ಆ ಹುಡುಗನ ಗೋಜಿಗೆ ಹೋಗಬೇಡಿರಪ್ಪಾ !

ಅಯ್ಯೋ, ನನ್ನ ಮಾತುಗಳನ್ನಾಲಿಸಿ ! ಅವನನ್ನು ಬಿಡಿ !

ದೇವ:—(ಭ್ರಮೆಯಿಂದ) ಇದೇನು ! ಇವಳು ನನ್ನ ಹೆಂಡತಿಯಲ್ಲವೆ ? ಎಲ್ಲಿಂದಬಂದಳು ? ಇವಳು ಹೇಳುತ್ತಿರುವುದಾದರೂ ಏನು ?

ಚಂಡಿ:—(ನಮಸ್ಕರಿಸಿ) ದರೋಡೆಕೋರರಲ್ಲಿ ಶ್ರೇಷ್ಠರಾದವರೆ ! ದಯುವಿಡಿರಿ. ನಮ್ಮಲ್ಲಿರುವ ಹಣ, ಒಡವೆ, ಗಡಿಯಾರ, ಅಂಗಿ, ಬಟ್ಟೆ, ರುಮಾಲುಗಳೆಲ್ಲವನ್ನೂ ಸ್ವೀಕರಿಸಿ ನಮ್ಮನ್ನು ಬಿಟ್ಟುಬಿಡಿರಿ. ನಮ್ಮನ್ನು ದಯವಿಟ್ಟು ಪ್ರಾಣಸಹಿತ ಬಿಟ್ಟುಬಿಡಿರಿ ನಾವು ದೇವರಾಣೆಗೂ ಸರ್ಕಾರದವರಿಗೆ ತಿಳಿಸುವುದಿಲ್ಲ.

ದೇವ:—ನಿನಗೆ ಹುಚ್ಚು ಹಿಡಿದಿರಬೇಕು. ಚಂಡಿ ! ನಾನಾರು ? ದೇವದತ್ತನಲ್ಲವೆ ? ನಿನ್ನ ಗಂಡನಲ್ಲವೆ ?

ಚಂಡಿ:—ಅಯ್ಯೋ ! ಇದೇನು ? ಭಯಪೀಡಿತಳಾದ ನನಗೆ ಕಣ್ಣು ಕಾಣಿಸಲೇಇಲ್ಲ. ಪ್ರಿಯನೆ, ಈ ವೇಳೆಯಲ್ಲಿ ಮನೆಯನ್ನು ಬಿಟ್ಟು ಇಷ್ಟು ದೂರ ಬರುವಿಯೆಂದು ಆರು ತಿಳಿದಿದ್ದರು ? ಊಹಿಸಲಾದರೂ ಊಹಿಸಬಹುದೆ ? ನೀವೇಕೆ ನಮ್ಮಹಿಂದೆ ಬಂದಿರಿ ?

ದೇವ:—ಚಂಡಿ, ನಿನಗೆ ನಿಜವಾಗಿಯೂ ಹುಚ್ಚು ಹಿಡಿದಿರಬೇಕು ನಾವಿರುವುದು ಮನೆಯಿಂದ ನಲವತ್ತುಗಜ ದೂರ ಸಹಾ ಇಲ್ಲ. ಇದು ಬಹುದೂರವೆ? (ದುರ್ಮತಿಯನ್ನು ನೋಡಿ) ಇದೂ ಒಂದು ನಿನ್ನ ಕುಚೇಷ್ಟೆಯೊ? ದುರ್ಮಾರ್ಗ ಪ್ರವರ್ತಕನೆ ! ಅಯೋಗ್ಯನೆ !! ಛೀ ! (ಚಂಡಿಯನ್ನು ಕುರಿತು) ಮನೆಯಬಾಗಿಲುಗುರುತಿಲ್ಲವೆ? ಮನೆಯ ಮುಂದಣ ಆ ಆಲದಮರವನ್ನು ನೋಡಿದರೆ ಇದು ಮನೆಯಸುತ್ತಣ ಪ್ರದೇಶವೆಂದು ತಿಳಿಯುವುದಿಲ್ಲವೆ?

ಚಂಡಿ:—ಇಂದು ನಾನು ಬದುಕಿಬಂದುದೇ ಕಷ್ಟ (ದುರ್ಮತಿಯನ್ನು ಕುರಿತು) ಪಾಪಿ ! ನಿನ್ನ ಉಪಕಾರವೆಲ್ಲವೂ ಇಂತಹುದೇ ! ನಾಯಿ ! ನಿನಗೆ ಈಗ ಬುದ್ಧಿಯನ್ನು ಕಲಿಸದೆಬಿಡೆನು ! ನೋಡು !!

ದುರ್ಮ:—ಅತ್ತೆ, ನೀನೇ ನನ್ನನ್ನು ಹಾಳುಮಾಡಿರುವಿಯೆಂದು

ಈ ಊರಿನವರೆಲ್ಲರೂ ಹೇಳುವರು. ಅದರ ಫಲವನ್ನು ನೀನೇ ಅನುಭವಿಸ ಬೇಕು.

ಚಂಡಿ:—ನಿನ್ನನ್ನು ಈಗ ಹಾಳುಮಾಡೇ ಮಾಡುವೆನು. ಪಾಪಿ!

ದೇವ:—ದುರ್ಮತಿಯು ಹೇಳಿದುದರಲ್ಲಿ ಒಂದು ನೀತಿಯಿದೆ.

(ದುರ್ಮತಿಯನ್ನು ಅಟ್ಟಿಕೊಂಡು ಚಂಡಿಯು ಓಡಿಹೋಗುವಳು. ದೇವದತ್ತ ನೂ ಹೋಗುವನು)

(ಪ್ರಿಯಸೇನ ಕಮಲಾವತಿಯರು ಬರುವರು)

ಪ್ರಿಯ:—ಕಮಲೆ, ನಿಧಾನಮಾಡುವಿಯೇಕೆ ತಡಮಾಡಿದರೆ ಪ್ರತಿ ಕ್ಷಣವೂ ಕೇಡುಬರುವುದು. ನೀನು ಸ್ವಲ್ಪಧೈರ್ಯಮಾಡಿದರೆ, ನಾವು ಓಡಿ ಹೋಗಬಹುದು. ಆಗ ನಿಮ್ಮತ್ತೆಯ ಕೋಪಕ್ಕೆ ಪಾತ್ರರಾಗಬೇಕಾದುದಿಲ್ಲ.

ಕಮ:—ಧೈರ್ಯವೆ! ಅಸಾಧ್ಯವೇ ಸರಿ! ಈಗ ಅನುಭವಿಸಿದ ಕಷ್ಟಪರಂ ಪರೆಗಳಿಂದ ನನಗೆ ಬುದ್ಧಿಯೇ ಓಡುವುದಿಲ್ಲ. ಇನ್ನು ಹೊಸಗಂಡಾಂತರಗ ಳನ್ನನುಭವಿಸಲು ನಾನು ಧೈರ್ಯಮಾಡಲಾರೆನು. ಎರಡು ಮೂರು ವರುಷಗಳ ನಂತರ ನಿಜವಾಗಿಯೂ ಸುಖವು ನಮ್ಮ ಕಯ್ಸೇರುವುದು.

ಪ್ರಿಯ:—ಅಷ್ಟುದೀರ್ಘಕಾಲ ತಡಮಾಡುವುದು ಬಹು ಹಿಂಸೆಕ ರವು. ಪ್ರಾಣೇಶ್ವರಿ!! ನಮ್ಮ ಸುಖವು ಇಂದಿನಿಂದಲೇ ಮೊದಲಾಗಲಿ! ಆಸ್ತಿಯು ಹಾಳಾದರೂ ಆಗಲಿ; ಪ್ರೀತಿಯೂ ಸಂತುಷ್ಟಿಯೂ ಚಕ್ರಾಧೀಶ್ವ ರನ ಸಂಪತ್ತಿಗಿಂತಲೂ ಶ್ರೇಷ್ಠವಾದುವಲ್ಲವೆ? ನನ್ನ ಮಾತನ್ನು ಕೇಳು!

ಕಮ:—ಅದಾಗದು! ನಾನು ಈಗ ವಿವೇಕಿಯಾಗಿರುವೆನು. ಅದರ ಆಜ್ಞೆಯನ್ನು ಉಲ್ಲಂಘಿಸೆನು. ವ್ಯಾಮೋಹಾತಿಶಯದಿಂದ ಉತ್ಸಾಹದಲ್ಲಿ ರುವ ಸಮಯದಲ್ಲಿ ನಾವು ಸಂಪತ್ತನ್ನು ಧಿಕ್ಕರಿಸಬಹುದು; ಆದರೆ, ಹಾಗೆ ಮಾಡುವುದರಿಂದ ಕೊನೆಗೆ ದುಃಖಾನುಭವವನ್ನು ಮಾಡಬೇಕೆಂಬುದುನಿಜ. ಒಂದು ಬಾರಿ ದೇವದತ್ತನನ್ನೇ ಬೇಡಿಕೊಳ್ಳುವೆನು. ಅವನ ನ್ಯಾಯಪ್ರಿಯ ಬುದ್ಧಿಯೂ ಕಾರುಣ್ಯಹೃದಯವೂ ನನ್ನ ಸಂಕಟಗಳನ್ನೆಲ್ಲ ಪರಿಹರಿಸಬಲ್ಲುದು.

ಪ್ರಿಯ:—ದೇವದತ್ತನಿಗೆ ಸಂಕಟಗಳನ್ನು ಪರಿಹರಿಸಬೇಕೆಂಬ ಬುದ್ಧಿಯು ಹುಟ್ಟಿದರೂ ಶಕ್ತಿಯು ಇಲ್ಲವಲ್ಲ ? ಅವನೇನು ಮಾಡಬಲ್ಲನು ?

ಕಮ:—ಅವನ ಆಜ್ಞೆಯನ್ನು ಚಂಡಿಯು ನೆರವೇರಿಸುವಳು. ಅದೇ ನನಗಿರುವ ಆಶೆ !

ಪ್ರಿಯ:—ನನಗೇನೊ ನಿರಾಶೆಯು ಪೂರ್ಣವಾಗಿರುವುದು. ನೀನು ಹಟಮಾಡುವುದರಿಂದ, ನನಗೆ ಇಷ್ಟವಿಲ್ಲದಿದ್ದರೂ ನಿನ್ನ ಮಾತಿನಂತೆ ನಡೆಯಲು ಸಿದ್ಧನಾಗಿರುವೆನು. (ತೆರಳುವರು)

---

## II.

[ದೇವದತ್ತನ ಮನೆಯಲ್ಲಿ ವಿಶಾಲವಾದೊಂದು ಹಜಾರ. ವಿಜಯಪಾಲನೂ ನಿರ್ಮಲೆಯೂ ಬರುವರು.]

ವಿಜಯ:—ಎಂತಹ ದುರವಸ್ಥೆಯು ಬಂದೊದಗಿತು ? ನೀನು ಹೇಳುವುದೆಲ್ಲವೂ ನಿಜವಾದರೆ, ನನ್ನ ಮಗನು ತಪ್ಪಿತಸ್ಥನೇಸರಿ. ನನ್ನ ಮಗನು ಹೇಳುವುದು ನಿಜವಾದರೆ, ನಾನು ಯಾರನ್ನು ಸೊಸೆಯನ್ನಾಗಿ ಮಾಡಿಕೊಳ್ಳಲು ಆಶೆಯುಂಟೋ, ಅವಳನ್ನು ಕಳೆದುಕೊಳ್ಳಬೇಕಾಗುವುದು.

ನಿರ್ಮ :—ನಿಮ್ಮ ಮೆಚ್ಚಿಗೆಯನ್ನು ಸಂಪಾದಿಸಿದುದೇ ನನಗೊಂದು ಹೆಮ್ಮೆಯಾಗಿದೆ. ಅದಕ್ಕೆ ನಾನು ಅರ್ಹಳೆಂದು ಈಗಲೇ ತೋರಿಸುವೆನು. ನಾನು ಮೊದಲೇ ಹೇಳಿದಂತೆ ನೀವು ಮರೆಯಲ್ಲಿರಿ. ಎಲ್ಲವನ್ನೂ ಅವರ ಬಾಯಿಂದಲೇ ಕೇಳಬಹುದು. ಇದೋ, ಅವರೇ ಬರುತ್ತಿರುವರು.

ವಿಜ :— ದೇವದತ್ತನನ್ನೂ ಕರೆದುಕೊಂಡುಬಂದು ಮರೆಯಾಗಿರುವೆನು. (ಹೊರಡುವನು)

(ರಾಮವರ್ಮನು ಬರುವನು)

ರಾಮ :—ನಾನು ಹೊರಡಲು ಸಿದ್ಧನಾಗಿದ್ದರೂ, ಒಂದುಸಾರಿ ನಿನ್ನ ಅನುಮತಿಯನ್ನು ಪಡೆದು ಹೋಗಲು ಬಂದೆನು. ಅಗಲಿಕೆಯ ಸಂಕ

ಟವು ಇದುವರೆಗೂ ನನಗೆ ಗೊತ್ತಿರಲಿಲ್ಲ.

ನಿರ್ಮ :—ಈ ಸಂಕಟವು ದೊಡ್ಡದಲ್ಲ. ಸುಲಭವಾಗಿ ನಿವಾರಣೆಯಾಗುವುದು. ಒಂದೆರಡು ದಿನಗಳು ಕಳೆದರೆ, ಈ ಅಗಲಿಕೆಗಾಗಿ ವ್ಯಥೆ ಪಡುವುದು ನಿಷ್ಕಾರಣವೆಂದು ತೋರಿಬಂದು ಸಂಕಟವು ನಿಮಗೆ ಸಮಾಧಾನವಾಗುವುದು.

ರಾಮು :—(ಸ್ವಗತಂ) ಈ ಹುಡುಗಿಯು ಪ್ರತಿಕ್ಷಣವೂ ನನಗಿಂತಲೂ ಲಕ್ಷಣವಾಗಿಯೇ ಮಾತನಾಡುವಳು. (ಪ್ರಕಾಶಂ) ಹಾಗಲ್ಲ. ಇದುವರೆಗೆ ನನ್ನ ವ್ಯಾಮೋಹ ವಿಚಾರದಲ್ಲಿ ಚೆಲ್ಲಾಟವಾಡಿದೆನು. ಈಗಿನ ಪ್ರೇಮಾಧಿಕ್ಯಕ್ಕೆ ನನ್ನ ಗರ್ವವೂ ತಗ್ಗಿದೆ. ವಿದ್ಯೆ, ಸಂಪತ್ತು, ಅಸಮಾನತ್ವ, ಪಿತನಾಗ್ರಹ, ಸಮೂನಸ್ಕಂದರ ತಿರಸ್ಕಾರಗಳು, ಈಗ ಗಣ್ಯವಾಗಿ ತೋರುವುದಿಲ್ಲ. ನಾನು ಪೂರ್ವಸ್ಥಿತಿಗೆ ಬರಲು, ಸಂಕಟಪಟ್ಟು ಮನಸ್ಸನ್ನು ದೃಢಮಾಡಿಕೊಳ್ಳಬೇಕಲ್ಲದೆ, ಮತ್ತೆ ಬೇರೆ ಮದ್ದಿಲ್ಲ.

ನಿರ್ಮ:—ಹಾಗಾದರೆ, ಹೊರಡಿ. ನಿರ್ಮಲೆಯಂತೆ ನನ್ನ ವಂಶವು ಘನತೆಯುಳ್ಳದಾಗಿದ್ದರೂ, ವಿದ್ಯೆಯಲ್ಲಿಯೂ ರೂಪಿನಲ್ಲಿಯೂ ನಾನು ನಿರ್ಮಲೆಗೆ ಕೀಳೆನಿಸದಿದ್ದರೂ, ನನ್ನಲ್ಲಿ ಐಶ್ವರ್ಯವೊಂದಿಲ್ಲವಾದಕಾರಣ ನನಗೆ ಪ್ರಾಶಸ್ತ್ಯವಿಲ್ಲ. ನನ್ನಲ್ಲಿ ಆರೋಪಿಸಲ್ಪಟ್ಟಿರುವ ಗುಣಾತಿಶಯಗಳಿಗೆ ಸ್ವಲ್ಪವಾದರೂ ಮೆಚ್ಚಿಗೆ ದೊರೆಯಿತೆಂದೇ ನಾನು ಸಂತುಷ್ಟಳಾಗಿರಬೇಕು. ನೀವು ಹಾಸ್ಯಕ್ಕಾಗಿಯೇ ನನ್ನನ್ನು ಹೊಗಳಿರಬೇಕು. ನಿಮ್ಮ ಮನಸ್ಸೆಲ್ಲವೂ ಐಶ್ವರ್ಯದ ಕಡೆಗೇ ತಿರುಗಿದೆ.

(ವಿಜಯಪಾಲನೂ ದೇವದತ್ತನೂ ಹಿಂದಿನಿಂದ ಬರುವರು.)

ವಿಜ:—ಹೀಗೆ, ಈ ಪರದೆಯ ಹಿಂದೆ ಬಾ.

ದೇವ:—ಆಗಲಿ. ಸದ್ದುಮಾಡಬೇಡ ಕೊನೆಗೆ ನಿರ್ಮಲೆಯು ಅವನಿಗೆ ಲಜ್ಜೆಯನ್ನು ಹುಟ್ಟಿಸದೆ ಬಿಡಳು. ಅದೇನೋ ನನಗೆ ನಂಬುಗೆಯುಂಟು.

ರಾಮು:—ದೇವರೇ ! ಐಶ್ವರ್ಯವನ್ನು ನಾನು ಯಾವಾಗಲೂ ತುಚ್ಛವಾಗೆಣಿಸಿರುವೆನು. ನಿನ್ನ ರೂಪನ್ನು ನೋಡಿದರೆ, ಆರಿಗೆ ತಾನೇ ಮನೋವಿಕಾರವಾಗದಿರುವುದು ? ನಿನ್ನೊಡನೆ ಮಾತನಾಡಿದುದರಿಂದ, ನನ್ನ ವಿದ್ಯೆ, ಬುದ್ಧಿ, ಸಂಪತ್ತುಗಳೆಲ್ಲವೂ ಪ್ರಕಾಶವನ್ನು ಪಡೆದಿವೆ ಮೊದಲು ಮೊದಲು, ಒರಟುಸ್ವಭಾವವಾಗಿ ಕಂಡುಬಂದುದೆಲ್ಲವೂ ನಾಗರಿಕತೆಯಿಂದ ಜನಿಸಿದ ಸರಳಸ್ವಭಾವವೆಂಬುದು ಈಗ ವ್ಯಕ್ತವಾಯಿತು. ಹೆಂಗಸರು ಮುಂದಾಳುಗಳಾಗಿರಬಹುದೇ, ಎಂದು ಮೊದಲು ಹುಟ್ಟಿದ್ದ ಅನುಮಾನವು ಈಗ ಮಾಯವಾಯಿತು. ನಿನ್ನ ಮುಂದಾಳುತನವು ಧೈರ್ಯದಿಂದ ಕೂಡಿದ ನಿಷ್ಕಲಂಕಭಾವವೆಂದೂ ಪಾತಿವ್ರತ್ಯವು ಶ್ರೇಷ್ಠವಾದುದೆಂದು ನಿನಗೆ ತಿಳಿದಿರುವುದೆಂದೂ ಈಗ ಸ್ಪಷ್ಟವಾಯಿತು.

ವಿಜ:—(ಮರೆಯಲ್ಲಿಯೇ) ಇದೇನು ಚೋದ್ಯ! ಅವನಾಡುವ ಮಾತುಗಳು ಆಶ್ಚರ್ಯಕರವಾಗಿವೆ.

ದೇವ:—ನಾನು ಮೊದಲೇ ಹೇಳಲಿಲ್ಲವೆ! ಸದ್ದು!

ರಾಮು:—ಎಲೌ ರಮಣೀ, ನಾನು ಇಲ್ಲೇ ನಿಲ್ಲಬೇಕೆಂದು ನಿಶ್ಚೈಸಿರುವೆನು. ನನ್ನ ತಂದೆಯು ವಿವೇಕವಿಚಾರದಲ್ಲಿ ನನಗೆ ಮರ್ಯಾದೆಯುಂಟು. ನಿನ್ನನ್ನು ನೋಡಿದರೆ, ಅವನು ತನ್ನ ಸಮ್ಮತಿಯನ್ನು ಕೊಡುವನೆಂಬ ನಂಬುಗೆಯಿಂದ ಧೈರ್ಯವಾಗಿರುವೆನು.

ನಿರ್ಮ :—ರಾಮುವರ್ಮರೆ, ನಾನು ತಮ್ಮನ್ನು ತಡೆಯಲೊಲ್ಲೆನು. ಇಲ್ಲ. ನಿಜವಾಗಿಯೂ ತಡೆಯಲಾರೆನು. ಮುಂದೆ ಪರಿತಾಪಪಡಲು ಲೇಶವಾದರೂ ಅವಕಾಶವಿದ್ದರೆ, ಈ ಬಾಂಧವ್ಯಕ್ಕೆ ಅವಕಾಶವನ್ನು ಕೊಡೆನು. ಏನೋ, ನಿಮಗುಂಟಾಗಿರುವ ಅರೆಗಳಿಗೆಯ ವ್ಯಾಮೋಹವನ್ನು ನಂಬಿ ಆ ಅನುಕೂಲವಾದ ಸಮಯದಲ್ಲೇ, ಮುಂದೆ ನಿಮಗೆ ಲಜ್ಜೆಯುಂಟಾಗುವಂತೆ ಮಾಡುವ ಕೀಳು ಬುದ್ಧಿಯು ನನ್ನಲ್ಲಿಲ್ಲ. ನಿಮ್ಮ ಸುಖವನ್ನು ತಗ್ಗಿಸಿ, ನನ್ನ ಸುಖವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ನನಗೆ ಸುಖವುಂಟೆ ?

ರಾಮ :—ದೇವರಾಣೆಗೂ, ನೀನು ದಯಮಾಡಿ ಅನುಗ್ರಹಿಸದಿದ್ದರೆ ನನಗೆ ಸುಖವೆಲ್ಲಿಂಟು ? ನಿನ್ನ ಗುಣಾತಿಶಯಗಳು ಮೊದಲೇ ತಿಳಿಯಲಿಲವೆಂದು ಪರಿತಾಪಪಡಬೇಕಾಗಿದೆಯಲ್ಲದೆ, ಮತ್ತೇತಕ್ಕೂ ಇಲ್ಲ. ನಿನ್ನ ಇಷ್ಟಕ್ಕೆ ವಿರೋಧವಾಗಿ ಇಲ್ಲಿಯೇ ಇದ್ದು, ಹಟ ಮಾಡಿ, ನೀನು ನನ್ನನ್ನು ತಿರಸ್ಕರಿಸುತ್ತಿದ್ದರೂ, ನನ್ನ ಪೂರ್ವದ ಚಾಪಲ್ಯದ ನಡತೆಗೋಸ್ಕರ ಈಗ ಅತ್ಯಂತ ಮರ್ಯಾದೆಯಿಂದ ನಿನ್ನ ದಯೆಯನ್ನು ಕೋರುವುದರ ಮೂಲಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವೆನು.

ನಿರ್ಮ :—ಹಾಗೆ ಮಾಡದಿರಬೇಕೆಂದು ಬೇಡುವೆನು. ದಯವಿಟ್ಟು ಹಾಗೆ ಮಾಡಬೇಡಿರಿ. ನಮ್ಮ ಪರಿಚಯವು ಅಸಡ್ಡೆಯಿಂದ ಮೊದಲಾದಂತೆಯೇ ಅಸಡ್ಡೆಯಿಂದಲೇ ಕೊನೆಗಾಣಲಿ. ನಾನು ಒಂದೆರಡು ಘಂಟೆಗಳಕಾಲ ಚಪಲಚಿತ್ತಳಾಗಿ ಇದ್ದಿದ್ದರೂ ಇರಬಹುದು. ಆದರೂ, ನಾನು ಹಣದಾಶೆಯವಳೂ ನಿಮ್ಮ ಗೌರವಕ್ಕೆ ಹಾನಿ ತರತಕ್ಕವಳೂ ಆನುದರಿಂದ ಈ ಬಾಂಧವ್ಯಕ್ಕೆ ಎಂದಿಗಾದರೂ ಸಮ್ಮತಿಯನ್ನು ಕೊಟ್ಟೇನೆ ? ಇನ್ನೊಬ್ಬಳನ್ನು ವರಿಸಲು ನಿಶ್ಚೈಸಿ, ಅಧೈರ್ಯದಿಂದ ನನ್ನನ್ನು ಹೊಗಳುತ್ತಿದ್ದರೆ, ನಾನು ನಂಬುವೆನೆ? ನಿಜವೆಂದು ನಂಬಲೆಂತು ?

ರಾಮ :—(ಮಂಡಿಯೂರಿ ಕುಳಿತು) ನನಗಿರುವುದು ಧೈರ್ಯವೋ, ನಿಶ್ಚಯಚಿತ್ತವೊ, ನೀನೇ ಪರೀಕ್ಷಿಸು. ಎಲೌ ರಮಣಿ, ಗಳಿಗೆ ಗಳಿಗೆಗೂ ನಿನ್ನ ಮಹಾತ್ಮ್ಯೆಯು ಗೋಚರವಾಗುತ್ತಿದೆ. ನನಗೆ ಶಂಕೆಯೂ ಲಜ್ಜೆಯೂ ಹೆಚ್ಚುತ್ತಲಿದೆ. ಹೀಗೆಯೇ ನಾನು ನಿನ್ನ............

ವಿಜ :—(ಹಿಂಸೆಯೇ) ನಾನು ಇನ್ನು ನಿಜವಾಗಿಯೂ ಸಹಿಸಲಾರೆನು. (ಮುಂದೆ ಬಂದು) ರಾಮವರ್ಮನೆ, ಇದೇಯೋ ನಿನ್ನ ಅಸಡ್ಡೆ? ಸ್ವಾರಸ್ಯವಿಲ್ಲದ ಸಂಭಾಷಣೆ ?

ದೇವ :—ಇದೆಯೋ ನಿನ್ನ ತಿರಸ್ಕಾರ ! ಇದೇನೋ ಲೋಕ ಮರ್ಯಾದೆಯಿಂದ ಇದಿರ್ಗೊಂಡುದು ! ಸತ್ಯವಾಕ್ಯ ! ಈಗೇನು ಹೇಳುವಿ ?

ರಾಮು :—ನನಗೆ ಪರಮಾಶ್ಚರ್ಯವಾಗಿದೆ. ನೀವು ಹೇಳುವುದೇನ

ದೇವ :—ಹೇಳುವುದೇ! ನೀನು ಮನಸ್ಸಿಗೆ ಬಂದಂತೆ ಸುಳ್ಳಾಡಬ ಯೆಂದು ! ಗೋಪ್ಯವಾಗಿ ಹೆಂಗಸೊಬ್ಬಳನ್ನು ಪ್ರೀತಿಸಿ, ಬಹಿರಂಗದಲ್ಲಿ ಇ ವೆಂದು ಹೇಳಬಲ್ಲಿಯೆಂದು ! ನನಗೊಂದು ಕಥೆಯನ್ನೂ ನನ್ನ ಮಗಳಿಗೆ ರೊಂದು ಕಥೆಯನ್ನೂ ಹೇಳಬಲ್ಲಿಯೆಂದು ! ಗೊತ್ತಾದುದೆ ? ಸುಳ್ಳು !

ರಾಮು :—ಮಗಳೇ ! ಈಕೆಯು ನಿಮ್ಮ ಮಗಳೆ ?

ದೇವ :—ಅಹುದು, ನನ್ನ ಮಗಳು. ನಿರ್ಮಲೆ ! ನೀನು ಈಕೆಯ ರೆಂದು ತಿಳಿದೆ ? ಯಾರೆಂದು ಇಷ್ಟು ಕೃತ್ಯಗಳನ್ನು ನಡೆಸಿದೆ ?

ರಾಮು : — ಹಾ ! ದುರ್ದೈವವೆ !!

ನಿರ್ಮ :—ಉದ್ದಕ್ಕೆ ತೆಳ್ಳಗಿರುವ ಮೆಳ್ಳಗಣ್ಣ ಹುಡುಗಿಯು ನಾನೆ ಸ್ವಾಮಿ ! (ತಲೆಯನ್ನು ಜೊಗ್ಗಿಸಿಕೊಂಡು ನಿಂತು) ಸಾಧುವಾದ ವಿನಯ ಷನ್ನರೆಂದೂ, ಸ್ತ್ರೀಸಂಗದ ಹರಟೆಯು ನುಲ್ಲರೆಂದೂ ಹೊಗಳಿಕೊಳ್ಳುತ್ತಿ ಯಾರನ್ನು ತಮ್ಮವಳನ್ನಾಗಿ ಮಾಡಿಕೊಳ್ಳಲು ಪ್ರಯತ್ನಪಡುತ್ತಿದ್ದರೋ ಳೇ ನಾನು !! ಹಾ ! ಹಾ !! ಹಾ !!!

ರಾಮು :—ಅಯ್ಯೋ ! ಗ್ರಹಚಾರವೇ ! ಈ ಅಪಮಾನವನ್ನು ತಾಳ ರೆನು !! ಇನ್ನು —ಇದಕ್ಕಿಂತ ಮರಣವೇ ಲೇಸು !!

ನಿರ್ಮ :—ತಮ್ಮನ್ನು ಈಗ ಏನೆಂದು ಕರೆಯಲಿ ? ನೆಲವನ್ನೇ ನೋ ತ್ತ, ಹತ್ತಿರಿದ್ದವರಿಗೂ ಕೇಳಿ ಬರದಂತೆ ಮಾತನಾಡಬಲ್ಲ, ಕಾಪಟ್ಯ ದ್ವೇಷವುಳ್ಳ ಅಂಜುಬುರುಕರೆಂದೊ ? ಕೆಲವರು ಸ್ತ್ರೀಯರೊಡನೆ ರಾ ಯೆಲ್ಲಾ ಹರಟುವ ಶೂರಾಗ್ರೇಸರರೆಂದೊ ? ಹಾ ! ಹಾ !! ಹಾ !!

ರಾಮು :—ನನ್ನ ಮೇಲೆಯೇ ಎಲ್ಲ ತಪ್ಪುಗಳೂ ಬೀಳಲಿ. ನಾ ಮಾಡಿದುದೆಲ್ಲವೂ ಈ ರೀತಿಯಾಗಿ ಪರಿಣಮಿಸಬೇಕೆ ? ಪ್ರತಿಯೊಂದೂ ತ್ಯ ಸ್ವರೂಪವಾಗಿದೆಯಲ್ಲ ? ನಾನೀಗ ತಲೆಯನ್ನು ತಪ್ಪಿಸಿಕೊಂಡು ಬೇಕು.

ದೇವ :— ಸರಿ, ಸರಿ. ನೀನು ಹೋಗುವುದೆಲ್ಲಿಗೆ? ಇದೆಲ್ಲವೂ ಒಂದು ಭ್ರಾಂತಿವಿಲಾಸವಾಗಿ ಪರಿಣಮಿಸಿತು. ನನಗೆ ಪರಮಾನಂದವಾಯಿತು. ನೀನು ಖಂಡಿತವಾಗಿಯೂ ಹೋಗಕೂಡದು. ನಿರ್ಮಲೆಯು ನಿಜವಾಗಿಯೂ ನಿನ್ನನ್ನು ಮನ್ನಿಸುವಳು. ನಿರ್ಮಲೆ, ಅವನನ್ನು ಕ್ಷಮಿಸುವುದಿಲ್ಲವೊ? ನಾವೆಲ್ಲರೂ ನಿಜವಾಗಿಯೂ ನಿನ್ನನ್ನು ಮನ್ನಿಸುವೆವು. ರಾಮವರ್ಮನೆ, ಮನಸ್ಸಿನಲ್ಲಿ ಧೈರ್ಯವನ್ನು ತಾಳು. (ನಿರ್ಮಲೆಯು ರಾಮವರ್ಮನನ್ನು ಕರೆದುಕೊಂಡು ಒಂದು ಭಾಗಕ್ಕೆ ಹೋಗುವಳು)

(ಚಂಡಿಯು ದುರ್ಮತಿಯೊಡನೆ ಬರುವಳು.)

ಚಂಡಿ:—ಹಾಗೊ? ಅವರು ಹೊರಟು ಹೋದರೊ? ಹೋದರೆ ಹೋಗಲಿ. ಚಿಂತೆಯಿಲ್ಲ.

ದೇವ:—ಆರು? ಆರು?

ಚಂಡಿ :—ಆ ಅವಿಧೇಯಳಾದ ಕಮಲೆ, ಅವಳ ಪ್ರಿಯನಾದ ಪ್ರಿಯಸೇನ. ರಾಮವರ್ಮನೊಡನೆ ಬಂದ ಗೃಹಸ್ಥನು ಅವಳೊಡನೆ ಓಡಿಹೋದನು.

ವಿಜಯ :— ಏನು, ಪ್ರಿಯಸೇನನೇ! ಹುಡುಗಿಯ ಪುಣ್ಯವು ಶ್ರೇಷ್ಠವಾದುದೇ ಸರಿ. ಪ್ರಿಯಸೇನನಂತಹ ಯೋಗ್ಯರು ಅತಿವಿರಳ!

ದೇವ :—ಹಾಗಾದರೆ, ಈ ಸಂಬಂಧವೂ ಚನ್ನಾಗಿ ಆದಂತೆಯೇ ಆಯಿತು. ನನಗೆ ಅದೂ ಒಂದು ಸಂತೋಷದ ವಿಷಯ. ಸರಿ!

ಚಂಡಿ:—ಕಮಲೆಯು ಹೋದರೆ ಹೋಗಲಿ. ಅವಳ ಜವಾಹಿರಿಯು ಇಲ್ಲೇ ಇದೆ. ಅವಳು ಹೋದ ವ್ಯಸನವನ್ನು ಜವಾಹಿರಿಯನ್ನು ನೋಡಿಕೊಂಡಿರುವುದರಿಂದ ಕಳೆದುಕೊಳ್ಳಬಹುದು.

ದೇವ:—ಪ್ರಿಯೆ, ನಿನಗೆ ಧನಪಿಶಾಚವು ಹಿಡಿದಿರಬಹುದು.

ಚಂಡಿ:—ನನ್ನ ಪಾಡು! ಅದರಿಂದ ನಿಮಗೇನು?

ದೇವ:—ನಿನ್ನ ಅರಗಿಣಿ ದುರ್ಮತಿಯು ಪ್ರಾಪ್ತವಯಸ್ಕನಾದಮೇಲೆ ಕಮಲೆಯನ್ನು ಮದುವೆಯಾಗುವುದಿಲ್ಲವೆಂದರೆ, ನ್ಯಾಯವಾಗಿ ಜವಾಹಿರಿಯೆಲ್ಲವೂ ಅವಳದೇ ಆಗುವುದೆಂದು ನಿನಗೆ ತಿಳಿಯದೊ ?

ಚಂಡಿ:—ದುರ್ಮತಿಯು ಇನ್ನೂ ಪ್ರಾಪ್ತವಯಸ್ಕನಾಗಿಲ್ಲವಷ್ಟೆ. ಅವನು ಒಲ್ಲೆನೆನ್ನುವವರೆಗೂ ಕಮಲೆಯು ಸುಮ್ಮನಿರಬೇಕಲ್ಲವೊ ?

(ಪ್ರಿಯಸೇನನೂ, ಕಮಲಾವತಿಯೂ ಬರುವರು.)

ಚಂಡಿ:—ಓಹೋ ! ಅವರು ಹಿಂದಿರುಗಿಬಂದರು. ಇನ್ನೇನು ಮಾಡಲಿ ? ಮತ್ತೇನು ಗತಿ ?

ಪ್ರಿಯ:—(ದೇವದತ್ತನನ್ನು ಕುರಿತು) ನಿಮ್ಮ ಸೊಸೆಯಾದ ಕಮಲೆಯೊಡನೆ ನಾನು ಓಡಿಹೋಗಲು ಪ್ರಯತ್ನಪಟ್ಟುದಕ್ಕಾಗಿ ಕ್ಷಮೆಬೇಡುವೆನು. ಅದಕ್ಕಾಗಿ ನನಗುಂಟಾಗಿರುವ ನಾಚುಕೆಯೇ ಶಿಕ್ಷೆಯಾಗಲಿ ! ಧರ್ಮಬುದ್ಧಿಗೆ ಮಿಂಚಿದ ಕಾರುಣ್ಯವನ್ನು ನಮ್ಮ ಮೇಲೆ ಈಗ ನೀವು ತೋರಬೇಕು. ಅದನ್ನು ಬೇಡುವುದಕ್ಕಾಗಿಯೇ ಈಗ ಬಂದಿರುವೆನು. ಇವಳ ತಂದೆಯ ಅನುಮತಿಯಂತೆ ಇವಳನ್ನು ಪ್ರೀತಿಸಲಾರಂಭಿಸಿದೆನು. ಕರ್ತವ್ಯಜ್ಞಾನದಿಂದಲೇ ನಮ್ಮ ಪ್ರಣಯವು ಅಂಕುರಿಸಿತು.

ಕಮ:—ನನ್ನ ತಂದೆಯು ಗತಿಸಿದಾಗಿನಿಂದಲೂ ಅವನ ಮನೋಗತದಂತೆ ಆಚರಿಸಿ, ತೊಂದರೆಯನ್ನು ನಿವಾರಿಸಿಕೊಂಡಿರುವೆನು. ಚಿತ್ತಚಾಂಚಲ್ಯದಿಂದ ನಾನೊಂದು ಜಾರಿ, ಐಶ್ವರ್ಯವನ್ನು ಬಿಟ್ಟು ನನ್ನನ್ನು ಒಪ್ಪಿದವನೊಡನೆ ಓಡಿಹೋಗಲು ಪ್ರಯತ್ನಪಟ್ಟೆನು. ಈಗ ಆ ಚಿತ್ತಚಾಂಚಲ್ಯವಿಲ್ಲ. ನನ್ನ ಜವಾಹಿರಯನ್ನು ದಯವಿಟ್ಟು ಕೊಡಿಸಬೇಕೆಂದು ಬೇಡುವೆನು.

ಚಂಡಿ:— ಈಗಣ ಕಾಲದ ಎಲ್ಲ ಕಥೆಯ ಪುಸ್ತಕಗಳಂತೆಯೇ ಇವೆಲ್ಲವೂ ಕೊನೆಗಂಡವು. ಹಾ! ಹಾ! (ಅಸಹ್ಯದಿಂದ) ಹಿ! ಹಿ!!

ದೇವ:—ಹೇಗಾದರೇನು ? ಅವರ ಆಸ್ತಿಯನ್ನು ಅವರೇ ತೆಗೆದುಕೊಂಡು ಹೋಗಲು ಬಂದಿರುವರು. ನನಗೆ ಅದೇ ಸಂತೋಷ. ದುರ್ಮತಿ,

...ನೀನು ಕಮಲೆಯನ್ನು ವರಿಸುವೆಯೊ, ಇಲ್ಲವೊ ?

ರ್ಮ:—ನಾನು ಒಲ್ಲೆನೆಂದರೆ, ಸಾರ್ಥಕವೇನು ? ನಾನು ಪ್ರಾಪ್ತ ...ನಾಗುವವರೆಗೂ ನಾನು ಒಲ್ಲೆನೆಂದರೆ, ಸಾರ್ಥಕವೇನು ? ನನ್ನ ...ತನ್ನು ಕೇಳುವರಾದರೂ ಆರು?

ದೇವ:—ನಿನ್ನ ವಯಸ್ಸನ್ನು ಗುಟ್ಟಾಗಿಟ್ಟಿದ್ದರೆ ನಿನಗೆ ಒಳ್ಳೆಯದೆಂದು ಆಲೋಚಿಸಿ, ನಾನು ನಿಜಸ್ಥಿತಿಯನ್ನು ಇದುವರೆಗೂ ಬಹಿರಂಗಪಡಿಸಲಿಲ್ಲ. ನಿಮ್ಮತ್ತೆಯು ಈರೀತಿ ದುರ್ವಿದ್ಯವನ್ನು ಆಚರಿಸುತ್ತಿರುವುದರಿಂದ ನಾನು ಈಗ ಎಲ್ಲವನ್ನೂ ಪ್ರಸಿದ್ಧಿಪಡಿಸುವೆನು. ನೀನು ಪ್ರಾಪ್ತವಯಸ್ಕನಾಗಿ ಈಗಾಗಲೇ ಮೂರು ತಿಂಗಳಾಯಿತು.

ದುರ್ಮ:—ಮಾವನೆ, ನಾನು ಪ್ರಾಪ್ತವಯಸ್ಕನಾದೆನೇ... ನಿಜವೆ ? ಹಾಗಿದ್ದರೆ, ಬೇಗ ಮತ್ತೊಮ್ಮೆ ಹೇಳು.

ದೇವ:—ಅಹುದು. ನೀನು ಪ್ರಾಪ್ತವಯಸ್ಕನಾಗಿ ಈಗ ... ತಿಂಗಳಾದುವು

ದುರ್ಮ:—ನನ್ನ ಸ್ವಾತಂತ್ರ್ಯವನ್ನು ನಾನು ಮೊಟ್ಟಮೊದಲ... ಉಪಯೋಗಿಸುವೆನೆಂಬುದನ್ನು ನೋಡಿ. (ಕಮಲೆಯ ಕಯ್ಯಿಡಿದು) ಎ... ಸಾಕ್ಷಿಯಾಗಿರಿ. ಇದೊ, ನಾನು ಹೇಳುವುದನ್ನು ಎಲ್ಲರೂ ಕೇಳಿರಿ. ... ಮಧೇಯಪುರದ ದುರ್ಮತಿಮಹಾಶಯನಾದ ನಾನು ಕಮಲಾವತಿಯನ್ನು ಮದುವೆಮಾಡಿಕೊಳ್ಳಲು ಖಂಡಿತವಾಗಿಯೂ ಇಷ್ಟವುಳ್ಳವನಾಗಿಲ್ಲ. ಆದ... ಕಮಲಾವತಿಯು ತನಗೆ ಬೇಕಾದವರನ್ನು ಮದುವೆಮಾಡಿಕೊಳ್ಳಲು ...ವೇನೂ ಇಲ್ಲ. ಅವಳು ಬೇಕಾದವರನ್ನು ವಿವಾಹವಾಗಲು ...ರ್ಣಾಧಿಕಾರವನ್ನು ಕೊಟ್ಟಿರುವೆನು. ಇಂದು ಈ ಮಾತನ್ನು ಪೂರ್ಣ ಸ್ವಾತಂತ್ರ್ಯದಿಂದಲೇ ಹೇಳಿರುವನು

—ದುರ್ಮತಿಯೆ, ನೀನೇ ಶೂರನು.

ಪ್ರಿಯ :-

ರಾಮ :—

ನಿನಗೆ ಸರ್ವಮಂಗಳವನ್ನುಂಟುಮಾಡಲಿ! ಪ್ರಿಯನೆ, ಈ ನಿರ್ಮಲೆಯು ಕುಚೋದ್ಯವನ್ನು ಬಿಡುವಂತೆ ಪ್ರೇರಿಸಲು ಸಾ ದರೆ, ನಾನೂ ಧನ್ಯನಾಗಿ ಬಾಳಲಾಗುವುದು.

ಪ್ರಿಯ :—(ನಿರ್ಮಲೆಯನ್ನು ಕುರಿತು) ನಿರ್ಮಲೆ, ಸಾಕು, ನಿ ನಿನ್ನ ಉಪಾಯ ಪ್ರಯತ್ನಗಳೆಲ್ಲವೂ ಸಾರ್ಥಕವಾಗಿ ಪರಿಣಮಿಸಲು ಇನ್ನು ಸ್ವಲ್ಪಮಾತ್ರ ಉಳಿದಿದೆ. ನಿನಗೆ ನಿಜವಾಗಿಯೂ ರಾಮವರ್ಮನಲ್ಲಿ ಪ್ರೇಮವಿದೆ. ಆದುದರಿಂದ ನೀನು ಅವನನ್ನು ವರಿಸಲೇಬೇಕು.

ದೇವ :—(ಅವರ ಕೈಗಳನ್ನು ಸೇರಿಸಿ) ನಾನು ಹೇಳುವುದೂ ಅದೇ ತು. ರಾಮವರ್ಮನೆ, ನಿರ್ಮಲೆಯು ನನ್ನ ಮಗಳಾಗಿ ನನಗೆ ಆನಂದ ಂಟುಮಾಡಿದುದಕ್ಕಿಂತಲೂ ಅತಿಶಯವಾಗಿ ನಿನಗೆ ಹೆಂಡತಿಯಾಗಿ ನವನ್ನುಂಟುಮಾಡಿದರೆ, ನೀನು ಎಂದಿಗೂ ಈದಿನದ ವಿವಾಹಕ್ಕಾಗಿ ಪರಿ ಡಬೇಕಾಗುವುದಿಲ್ಲ. ಇನ್ನು ಭೋಜನಕ್ಕೆ ನಡೆಯಿರಿ. ರಾಮವ ಈ ವಿವಾಹವು ನೆರವೇರುವುದಕ್ಕೆ ಮುಂಚೆ ನಿನಗೆ ನಿರ್ಮಲೆಯ ನಲ್ಲಿ ಒಂದು ವಿಧವಾದ ಭ್ರಾಂತಿಯುಂಟಾಗಿತ್ತಷ್ಟೆ! ಇನ್ನು ನ ಎಂದೆಂದಿಗೂ ಅಂತಹ ಭ್ರಾಂತಿಯು ಉಂಟಾಗದಿರಲೆಂಬುದೇ ನನ್ನ ರ್ಥನೆಯು.

(ಎಲ್ಲರೂ ಹೊರಟು ಹೋಗುವರು)

**ಶ್ರೀಕೃಷ್ಣಾರ್ಪಣಮಸ್ತು.**

"ಐರಿಷ್" ಪ್ರೆಸ್, ಬೆಂಗಳೂರು ಸಿಟಿ.